# ನೂರು ಹೆಜ್ಜೆ



ದಕ್ಷಿಣ ಕನ್ನಡ ಲೋಕಸಭಾ ಸದಸ್ಯ

## ಶ್ರೀ ನಳಿನ್ ಕುಮಾರ್ ಕಟೀಲ್

**100 ದಿನಗಳ ಸಾಧನೆಯ ನಮ್ರ ವರದಿ**



ಏಕ ಭಾರತ
ಶ್ರೇಷ್ಠ ಭಾರತ







## ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್





# ನೂರು ಹೆಜ್ಜೆ

## ದಕ್ಷಿಣ ಕನ್ನಡ ಲೋಕಸಭಾ ಸದಸ್ಯ
## ಶ್ರೀ ನಳಿನ್ ಕುಮಾರ್ ಕಟೀಲ್
## 100 ದಿನಗಳ ಸಾಧನೆಯ ನಮ್ರ ವರದಿ

ಪ್ರಕಟಣೆ

ಭಾರತೀಯ ಜನತಾ ಪಾರ್ಟಿ

ದಕ್ಷಿಣ ಕನ್ನಡ ಜಿಲ್ಲೆ

# ಪರಿವಿಡಿ


- ಇಮ್ಮಡಿ ಶಕ್ತಿ ಬರಲಿ, ಕ್ಷೇತ್ರಾಭಿವೃದ್ಧಿ ಸಾಗಲಿ (ಹಿತೈಷಿ ವಚನ) 5
- ನಾನು ನಿಮ್ಮ ಕಾರ್ಯಕರ್ತ... (ಮುನ್ನುಡಿ) 6
- ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರದ 100 ದಿನಗಳ ಸಾಧನೆಗಳು 8
- ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್ 12
- ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್ ಕೇಳಿದ ಪ್ರಶ್ನೆಗಳ ಸಂಕ್ಷಿಪ್ತ ನೋಟ 14
- ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್ ಭಾಗವಹಿಸಿದ ಚರ್ಚೆಗಳ ವಿವರ 57
- ಮಂಗಳೂರು ಪ್ರದೇಶದ ರೈಲು ಸೇವೆಗಳಿಗೆ ಕಾಯಕಲ್ಪ 62
- ಲೋಕಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ
- 2014–15ನೇ ಸಾಲಿನ ಪ್ರಥಮ ಹಂತದಲ್ಲಿ ಪ್ರಸ್ತಾವಿಸಿದ ಕಾಮಗಾರಿಗಳು 64
- ಕೇಂದ್ರದ ಅನುದಾನಗಳ ಪಕ್ಷಿನೋಟ 68
- ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಅನುಷ್ಠಾನಿಸಲು ಸೂಚಿಸಿದ ಕಾಮಗಾರಿಗಳಿಗೆ ಕ್ಷೇತ್ರವಾರು ಬಿಡುಗಡೆಯಾದ ಹಣ 73
- 100 ದಿನಗಳಲ್ಲಿ ಭೇಟಿ ನೀಡಿದ ಹಳ್ಳಿಗಳ ಪಟ್ಟಿ 75
- ಚಿತ್ರ ಸಂಪುಟ 77



**ನೂರು ಹೆಜ್ಜೆ:** ದಕ್ಷಿಣ ಕನ್ನಡ ಲೋಕಸಭಾ ಸದಸ್ಯ ಶ್ರೀ ನಳಿನ್‌ಕುಮಾರ್ ಕಟೀಲ್‌ರವರ 2014–2019 ಕಾಲಾವಧಿಯ 100 ದಿನಗಳ ಮತ್ತು ಮೊದಲ ಐದು ವರ್ಷಗಳ ಸಾಧನೆ ಮತ್ತು ಚಟುವಟಿಕೆಗಳ ಪಕ್ಷಿನೋಟ.

**NOORU HEJJE:** A snapshot of activities and achievements of Shri Nalinkumar Kateel, Member of Loksabha, Mangalore Constituency, during the first 100 days of the period 2014-2019 and earlier achievements during 2009-2014.

Production & Design: Aksharodyama.com, Riverthoughts.com

Published by : Bharatiya Janata Party, Dakshina Kannada District

Printed at : Aksharodyama.com Copies: 1000




We should ensure that every road, school, office, locality and neighbourhood is clean.

- Sri Narendra Modi, Prime Minister of India



# ಇಮ್ಮಡಿ ಶಕ್ತಿ ಬರಲಿ, ಕ್ಷೇತ್ರಾಭಿವೃದ್ಧಿ ಸಾಗಲಿ

ಕರ್ನಾಟಕದ ಕಡಲಿಗೆ, ಮಲೆನಾಡಿನ ಮಡಿಲಿಗೆ ದಕ್ಷಿಣ ಕನ್ನಡ ಜಿಲ್ಲೆ ಹೆಸರಾಗಿದೆ. ಭಾರತದ ಭವ್ಯ ಪರಂಪರೆಯ ಪ್ರತೀಕವಾಗಿರುವ ಈ ಜಿಲ್ಲೆಯ ಅಭ್ಯುದಯದಲ್ಲಿ ನಾಡಿನ ಹಿತ ಅಡಗಿದೆ. ಇಂಥ ಪ್ರಮುಖ ಜಿಲ್ಲೆಯ ಲೋಕಸಭಾ ಸದಸ್ಯರಾಗಿ ಶ್ರೀ ನಳಿನ್‌ಕುಮಾರ್ ಕಟೀಲ್ 2014ರ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. ಮೊದಲ ಐದು ವರ್ಷಗಳಲ್ಲಿ ಅವರು ಮಾಡಿದ ಸೇವೆ, ತೋರಿದ ಜನಾನುರಾಗ, ಅಭಿವೃದ್ಧಿಯ ದಿಟ್ಟ ಹೆಜ್ಜೆಗಳೇ ಅವರ ಮರು ಆಯ್ಕೆಗೆ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ.

2009–14ರ ಮೊದಲ ಐದು ವರ್ಷಗಳ ಕಾಲಾವಧಿಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್‌ರವರು 1340 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ವಿವಿಧ ಕಾಮಗಾರಿಗಳಿಗೆ, ನೆರೆ ಪರಿಹಾರ ನಿಧಿ ಮುಂತಾದವುಗಳ ಮುಖಾಂತರ ಜಿಲ್ಲೆಯ ಅಭಿವೃದ್ಧಿಗಾಗಿ ತಂದಿದ್ದಾರೆ. ರಸ್ತೆ, ಸೇತುವೆ, ಕಾಲುಸಂಕ, ಶಾಲಾ ಕಟ್ಟಡ, ಅಡಿಕೆ ಬೆಳೆಗಾರರ ಸಮಸ್ಯೆ, ಮೀನುಗಾರರ ಬವಣೆ, ಕಡಲ್ಕೊರೆತದ ಸವಾಲಿಗೆ ಪರಿಹಾರ, ನೇತ್ರಾವತಿ ತಿರುವು ಯೋಜನೆ ವಿರುದ್ಧದ ಹೋರಾಟ, ನಿಡ್ಡೋಡಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆ ವಿರೋಧಿಸಿ ಹೋರಾಟ, – ಹೀಗೆ ಅವರು ದಕ್ಷಿಣ ಕನ್ನಡ ಜಿಲ್ಲೆಯ ನೋವು ನಲಿವುಗಳಿಗೆ, ಅಭ್ಯುದಯದ ಗುರಿ ತಲುಪಲು ನಿರಂತರ ಸ್ಪಂದಿಸಿದ ಜನಪ್ರತಿನಿಧಿಯಾಗಿ ಹೊರಹೊಮ್ಮಿದ್ದಾರೆ. ತನ್ನ ಕಾಲಾವಧಿಯ ಉದ್ದಕ್ಕೂ ಜನರ ಮತ್ತು ಮುಖ್ಯವಾಗಿ ತಳಮಟ್ಟದ ಕಾರ್ಯಕರ್ತರ ನಿರಂತರ ಸಂಪರ್ಕ, ಸಂವಹನದ ಮೂಲಕ ಅವರೊಬ್ಬ ಚತುರ ಸಂಘಟಕ ಮತ್ತು ತಂಡಸ್ಫೂರ್ತಿಯ ನಾಯಕ ಎಂದು ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯ ಮೂಲಕ ಭಾರತೀಯ ಜನತಾ ಪಾರ್ಟಿಗೂ ಹಿರಿಮೆ ತಂದಿದ್ದಾರೆ.

ಶ್ರೀ ನಳಿನ್‌ಕುಮಾರ್ ಕಟೀಲ್‌ರವರು ಕಳೆದ ಲೋಕಸಭೆಯಲ್ಲಿ ದಕ್ಷತಾ ಕ್ರಮಾಂಕದಲ್ಲಿ ಲೋಕಸಭಾ ಸದಸ್ಯರುಗಳಲ್ಲೇ ಆರನೇ ಸ್ಥಾನವನ್ನು ಪಡೆದರು ಎಂಬುದು ನಮಗೆಲ್ಲರಿಗೂ ಸಂತಸ ತರುವ ವಿಚಾರ. ಅವರ ಈ ದಕ್ಷತೆಯ ಪ್ರದರ್ಶನದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ದೇಶದಲ್ಲೇ ಗುರುತಿಸುವಂತಾಯಿತು. ಕರ್ನಾಟಕದ ಲೋಕಸಭಾ ಸಂಸದರುಗಳಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಶ್ರಮಿಸಿದ ಸಂಸದರಲ್ಲಿ ಇವರು ಮೊದಲನೇ ಸ್ಥಾನ ಪಡೆದಿರುವುದು ಇವರ ಕಾರ್ಯನಿಷ್ಠೆಯನ್ನು ಎತ್ತಿ ತೋರಿಸುತ್ತದೆ. ಅವರಿಗೆ ನಮ್ಮೆಲ್ಲರ ಅಭಿಮಾನಪೂರ್ವಕ ಅಭಿನಂದನೆಗಳು.

ತನ್ನ ಹತ್ತು ಹಲವು ಸಾಮಾಜಿಕ ಕಾರ್ಯಗಳಿಂದಾಗಿಯೇ 2009ರಲ್ಲಿ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಆಯ್ಕೆಯಾಗಿ ಗೆಲುವು ಸಾಧಿಸಿದ ಶ್ರೀ ನಳಿನ್‌ಕುಮಾರ್ ಕಟೀಲ್ ಕ್ಷೇತ್ರದಾದ್ಯಂತ ಅನೇಕ ಬಾರಿ ಸುತ್ತಿದ್ದಾರೆ. ಇದುವರೆಗೂ ಯಾವ ಸಂಸದರೂ ಹೋಗದ ಸ್ಥಳಗಳಿಗೆ ಹೋಗಿದ್ದಾರೆ. ಗ್ರಾಮ ಭೇಟಿಯ ಮೂಲಕ ಗ್ರಾಮೀಣ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ; ಕಾರ್ಯಕರ್ತರ ಜೊತೆಗೆ ಬೆರೆತಿದ್ದಾರೆ. ಅಂಬೇಡ್ಕರ್ ಜಯಂತಿಯಂದು ಇತರ ಆರೆಸ್ಸೆಸ್ ಸ್ವಯಂಸೇವಕರಂತೆ ಉಪೇಕ್ಷಿತ ಬಂಧುಗಳ ಜೊತೆಗೆ ಅವರ ಮನೆಯಲ್ಲಿ ಸಹಭೋಜನದಲ್ಲಿ ಪಾಲ್ಗೊಂಡು ಸಾಮರಸ್ಯ ಬೆಳೆಸುತ್ತಿದ್ದಾರೆ. ಜನರ ವಿಶ್ವಾಸಕ್ಕೆ ಯಾವ ಕ್ಷಣದಲ್ಲೂ ವಂಚನೆ ಎಸಗದೇ, ಪ್ರಾಮಾಣಿಕತೆಗೆ ಧಕ್ಕೆ ಬರದಂತೆ ಕಾರ್ಯನಿರ್ವಹಿಸುತ್ತ ಅಜಾತಶತ್ರುವಾಗಿ ಬೆಳೆದಿದ್ದಾರೆ. ಅವರ ಶುದ್ಧಹಸ್ತದ ಕಾರ್ಯಶೈಲಿಯನ್ನು ವಿರೋಧಿಗಳೂ ಮೆಚ್ಚಿಕೊಂಡಿದ್ದಾರೆ.

ಇಂಥ ಕ್ರಿಯಾಶೀಲ ಮನಸ್ಸಿನ ಶ್ರೀ ನಳಿನ್‌ಕುಮಾರ್ ಕಟೀಲ್‌ರವರು ತಮ್ಮ ಲೋಕಸಭಾ ಸದಸ್ಯತ್ವದ ಎರಡನೇ ಕಾಲಾವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ದೇಶದ ಮಾದರಿ ಕ್ಷೇತ್ರವನ್ನಾಗಿ ರೂಪಿಸಲಿ, ತನ್ಮೂಲಕ ದೇಶದ ಅತಿ ದಕ್ಷ ಲೋಕಸಭಾ ಸದಸ್ಯರೆಂಬ ಹೆಗ್ಗಳಿಕೆಗೆ ಪಾತ್ರರಾಗಲಿ ಎಂದು ನಾನು ಮನಃಪೂರ್ವಕ ಹಾರೈಸುತ್ತೇನೆ.

ಮಂಗಳೂರು

**ಪ್ರತಾಪಸಿಂಹ ನಾಯಕ್**
ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ
ದಕ್ಷಿಣ ಕನ್ನಡ ಜಿಲ್ಲೆ






# ನಾನು ನಿಮ್ಮ ಕಾರ್ಯಕರ್ತ...

**ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ನನ್ನ ಪ್ರಿಯ ನಾಗರಿಕರೇ,**

ನಿಮ್ಮೆಲ್ಲರ ಕೃಪಾಶೀರ್ವಾದ ಹಾಗೂ ನಾನು ನಂಬಿ ನಡೆದುಕೊಳ್ಳುವ ದೇವ – ದೈವಗಳ ಮತ್ತು ಗುರುಹಿರಿಯರ ಅನುಗ್ರಹದಿಂದ ನಾನು ಎರಡನೆಯ ಬಾರಿ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಿಂದ ಮರು ಆಯ್ಕೆಗೊಂಡಿದ್ದೇನೆ. ‘ಏಕ ಭಾರತ, ಶ್ರೇಷ್ಠ ಭಾರತ’ ಘೋಷಣೆಯನ್ನು ಇಡೀ ದೇಶದ ಜನ ಬೆಂಬಲಿಸಿ ಸಂಪೂರ್ಣ ಬಹುಮತದ ಬಿಜೆಪಿ ಸರ್ಕಾರವನ್ನು ಆಯ್ಕೆ ಮಾಡಿದ್ದಾರೆ. ಈ ಜಯದಲ್ಲಿ ಮಂಗಳೂರಿನ ಜನತೆಯ ಪಾಲೂ ದೊಡ್ಡದು.

ನರೇಂದ್ರ ಮೋದಿಯವರ ಅಪ್ರತಿಮ ನಾಯಕತ್ವದ ಮೇಲೆ ವಿಶ್ವಾಸ ಇರಿಸಿ ದೇಶದ ಜನತೆ ಪೂರ್ಣ ಬಹುಮತದ ಬಿಜೆಪಿ ಸರ್ಕಾರವನ್ನು ಆಯ್ಕೆ ಮಾಡಿದ್ದಾರೆ. ನಿಮ್ಮೆಲ್ಲರ ಆಶೀರ್ವಾದದಿಂದ ಎರಡನೇ ಬಾರಿ ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಅವಕಾಶ ನನಗೆ ದೊರೆತಿದೆ.

ಸಂಸದನಾಗಿ ಕ್ಷೇತ್ರದ ಜನತೆಗೆ ಪ್ರಾಮಾಣಿಕ ಹಾಗೂ ಪಾರದರ್ಶಕ ಸೇವೆ ನೀಡುವುದು ನನ್ನ ಕರ್ತವ್ಯ ಎಂದು ನಂಬಿದ್ದೇನೆ. ಕಳೆದ ಐದು ವರ್ಷದಲ್ಲಿ ಪಕ್ಷದ ಹಿರಿಯರ ಮಾರ್ಗದರ್ಶನ, ಕಿರಿಯರ ಪ್ರೋತ್ಸಾಹದಿಂದ ನನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇನೆ ಎನ್ನುವ ಆತ್ಮವಿಶ್ವಾಸವಿದೆ. ಕಾರ್ಯಕರ್ತರೇ ಬಿಜೆಪಿಯ ಶಕ್ತಿ ಹಾಗೂ ಜೀವಾಳ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಪಕ್ಷಕ್ಕಾಗಿ ಅಹರ್ನಿಶಿ ದುಡಿಯುತ್ತಾರೆ. ತಮ್ಮ ಪರಿಶ್ರಮದಿಂದ ಆಯ್ಕೆಯಾದ ಜನಪ್ರತಿನಿಧಿ ಏನು ಮಾಡುತ್ತಿದ್ದಾನೆ ಎಂದು ಕೇಳುವ, ತಿಳಿಯುವ ಸಂಪೂರ್ಣ ಹಕ್ಕು ಅವರಿಗಿದೆ. ಸಾಮಾನ್ಯವಾಗಿ ಜನಪ್ರತಿನಿಧಿಗಳು 5 ವರ್ಷ ಅವಧಿ ಪೂರೈಸಿದ ಬಳಿಕ ಸಾಧನೆಯ ವಿವರ ಜನತೆಯ ಮುಂದಿಡುತ್ತಾರೆ. ಇದರಲ್ಲಿ ಬದಲಾವಣೆ ಬೇಕೆನ್ನುವುದು ನನ್ನ ಬಯಕೆ. ಐದು ವರ್ಷದ ಬದಲು ಪ್ರತಿ ನೂರು ದಿನಗಳ ನನ್ನ ಸಾಧನೆಯನ್ನು ಕಾರ್ಯಕರ್ತರ ಮುಂದಿಡಲು ಬಯಸಿದ್ದೇನೆ. ಈ ನಿಟ್ಟಿನಲ್ಲಿ ನಾನು ಕಳೆದ 100 ದಿನಗಳ ಹೆಜ್ಜೆಗುರುತುಗಳನ್ನು ಇಲ್ಲಿ ದಾಖಲಿಸಿದ್ದೇನೆ. ಇದು ಒಂದು ರೀತಿಯಲ್ಲಿ ನನ್ನ ಆತ್ಮಾವಲೋಕನಕ್ಕೆ ಪೂರಕವೂ ಹೌದು.

ಸಂಸದನಾಗಿ ನಾನೇನು ಮಾಡಿದ್ದೇನೆ, ಸಂಸತ್ತಿನಲ್ಲಿ ಏನೇನು ಮಾತನಾಡಿದ್ದೇನೆ..ಎಲ್ಲ ಮಾಹಿತಿಗಳು ಇಲ್ಲಿವೆ. ಸಂಸದರ ನಿಧಿ ಹಂಚಿಕೆ, ಪ್ರಧಾನಮಂತ್ರಿ ಪರಿಹಾರನಿಧಿ ಮಂಜೂರು, ಅಭಿವೃದ್ಧಿ ಕಾಮಗಾರಿಗಳ ವಿವರ..ಎಲ್ಲವೂ ಇಲ್ಲಿ ದಾಖಲಾಗಿದೆ. ಲೋಕಸಭಾ ಕ್ಷೇತ್ರದಲ್ಲಿರುವ 8 ವಿಧಾನಸಭಾ ಕ್ಷೇತ್ರಗಳಲ್ಲೂ



I want to expedite the nation-building process by encouraging the capabilities of government functionaries.

■ Sri Narendra Modi, Prime Minister of India

**ಬನ್ನಿ, ಕ್ಷೇತ್ರಾಭಿವೃದ್ಧಿ ಕಾರ್ಯದಲ್ಲಿ ಒಂದಾಗಿ ದುಡಿಯೋಣ, ಜೊತೆಯಾಗಿ ಸಾಗೋಣ. ಶ್ರೀ ನರೇಂದ್ರ ಮೋದಿಯವರ ಸಮರ್ಥ ನಾಯಕತ್ವದಲ್ಲಿ ಭಾರತವನ್ನು ವಿಶ್ವವಂದಿತ ರಾಷ್ಟ್ರವನ್ನಾಗಿ ರೂಪಿಸೋಣ. ಈ ಹಿನ್ನೆಲೆಯಲ್ಲಿಯೇ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರವನ್ನು ಅಭ್ಯುದಯದ ಉತ್ತುಂಗಕ್ಕೆ ಒಯ್ಯೋಣ.**

ಸಮಾನತೆಯನ್ನು ಕಾಯ್ದುಕೊಂಡಿದ್ದೇನೆ. ಆದ್ಯತೆಯ ಮೇರೆಗೆ ನಿಧಿ ವಿತರಿಸಿದ್ದೇನೆ. ಕ್ಷೇತ್ರದುದ್ದಕ್ಕೂ ನಿರಂತರ ಪ್ರವಾಸ ಮಾಡುತ್ತಿದ್ದೇನೆ. ಮತದಾರರು ನನ್ನ ಮೇಲಿರಿಸಿದ ವಿಶ್ವಾಸಕ್ಕೆ ಚ್ಯುತಿ ಬಾರದ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ಯಾವುದೇ ರಾಜಕೀಯ ಸ್ಥಾನಮಾನ ಬಯಸಿದವನು ನಾನಲ್ಲ. ಸಂಘದ ಸ್ವಯಂ ಸೇವಕನಾಗಿ, ಬಿಜೆಪಿಯನ್ನು ತಳಮಟ್ಟದಿಂದ ಸಂಘಟಿಸುವ ಕಾರ್ಯದಲ್ಲಿ ತೊಡಗಿದ್ದೆ. 2009ರಲ್ಲಿ ಪಕ್ಷದ ಆದೇಶದ ಮೇರೆಗೆ ಚುನಾವಣೆಗೆ ಸ್ಪರ್ಧಿಸಿದೆ. ಅಟಲ್‌ಜಿ, ಅಡ್ವಾಣಿಜಿ, ಮೋದಿಜಿ... ಮುಂತಾದ ಅನೇಕ ಹಿರಿಯರು ಈ ಮಾರ್ಗವನ್ನೇ ಆಯ್ದುಕೊಂಡಿದ್ದರು. ಅವರ ಹಾದಿಯಲ್ಲಿ ಹೆಜ್ಜೆ ಹಾಕುವ ಸೌಭಾಗ್ಯ ನನಗೆ ಒದಗಿಬಂತು. ಸಂಸದನಾಗುವುದಕ್ಕಿಂತಲೂ ಮೊದಲು ನಾನೊಬ್ಬ ಸಂಘದ ಸ್ವಯಂಸೇವಕ. ನಾವೆಲ್ಲ ಒಂದು, ನಾವೆಲ್ಲ ಬಂಧು ಎಂಬ ಭಾವನೆಯಲ್ಲೇ ಬೆಳೆದವನು ನಾನು. ದೇಶ ಇಂದು ಬದಲಾವಣೆಯ ಪರ್ವ ಕಾಲದಲ್ಲಿದೆ. ಬಿಜೆಪಿ ಸರ್ಕಾರದಿಂದ ದೇಶದ ಜನತೆಗೆ ಅಪಾರ ನಿರೀಕ್ಷೆ ಇದೆ. ದಕ್ಷಿಣ ಕನ್ನಡ ಕ್ಷೇತ್ರದಲ್ಲೂ ನೂರಾರು ಬೇಡಿಕೆ ಇದೆ. ಕ್ಷೇತ್ರದ ಅಭಿವೃದ್ಧಿಗೆ ಬೇಕಾದ ಕೇಂದ್ರದ ಕೊಡುಗೆಯನ್ನು ತಮ್ಮೆಲ್ಲರ ಸಹಕಾರದಿಂದ ತರುವ ಕೆಲಸ ಮಾಡುತ್ತೇನೆ. ನಡೆವ ಹಾಸಿಯಲ್ಲಿ ಎಡವುದು ಸಹಜ. ತಪ್ಪಿ ನಡೆದಾಗ ಎಚ್ಚರಿಸುವ, ತಿದ್ದುವ ಅಧಿಕಾರ ನಿಮಗಿದೆ. ಪ್ರತಿ ಹೆಜ್ಜೆಗೂ ನಿಮ್ಮ ಮಾರ್ಗದರ್ಶನ ಬಯಸಿದ್ದೇನೆ.

ಬನ್ನಿ, ಕ್ಷೇತ್ರಾಭಿವೃದ್ಧಿ ಕಾರ್ಯದಲ್ಲಿ ಒಂದಾಗಿ ದುಡಿಯೋಣ, ಜತೆಯಾಗಿ ಸಾಗೋಣ. ನರೇಂದ್ರ ಮೋದಿಜಿಯವರ ಸಮರ್ಥ ನಾಯಕತ್ವದಲ್ಲಿ ಭಾರತವನ್ನು ವಿಶ್ವವಂದಿತ ರಾಷ್ಟ್ರವನ್ನಾಗಿ ರೂಪಿಸೋಣ. ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರವನ್ನು ಅಭ್ಯುದಯದ ಉತ್ತುಂಗಕ್ಕೆ ಒಯ್ಯೋಣ.

**ದೇಶಕಾರ್ಯಕ್ಕೆ ತಮ್ಮೆಲ್ಲರ ನಿರಂತರ ಸಹಕಾರ ಇರಲಿ.**

**ತಮ್ಮ ವಿಶ್ವಾಸಿ,**

ಮಂಗಳೂರು

**ನಳಿನ್‌ಕುಮಾರ್ ಕಟೀಲ್**





# ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರದ 100 ದಿನಗಳ ಸಾಧನೆಗಳು

- **ಸ್ವಚ್ಛ ಭಾರತ ಅಭಿಯಾನ:** ಕ್ರಿ.ಶ. 2019ರ ಹೊತ್ತಿಗೆ ಪ್ರತಿಯೊಂದು ಮನೆಗೂ ನೈರ್ಮಲ್ಯ ವ್ಯವಸ್ಥೆಯನ್ನು ಕಲ್ಪಿಸುವ ಸ್ವಚ್ಛ ಭಾರತ ಅಭಿಯಾನವನ್ನು ಆರಂಭಿಸಲಾಗಿದೆ.
- **ಹಣದುಬ್ಬರಕ್ಕೆ ತಡೆ:** ಹಣದುಬ್ಬರವನ್ನು ತಡೆಯಲು 500 ಕೋಟಿ ರೂ.ಗಳ 'ಬೆಲೆ ಸ್ಥಿರತಾ ನಿಧಿ'ಯನ್ನು ಪ್ರಸ್ತಾಪಿಸಲಾಗಿದೆ. ಮುಕ್ತ ಮಾರುಕಟ್ಟೆಗೆ ಒಂದು ಕೋಟಿ ಟನ್‌ನಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಲಾಗಿದೆ. ಕಾಳಸಂತೆಯಲ್ಲಿ ಮಾರುವವರ ಮತ್ತು ಅ ಕ್ರಮ ದಾಸ್ತಾನು ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ರೂಪಿಸಲಾಗಿದೆ.
- **ಕಪ್ಪುಹಣ ತರಲು ಕ್ರಮ:** ವಿದೇಶಗಳಲ್ಲಿ ಅಡಗಿಸಿಟ್ಟಿರುವ ಕಪ್ಪುಹಣವನ್ನು ಭಾರತಕ್ಕೆ ಮರಳಿ ತರಲು ನ್ಯಾಯಮೂರ್ತಿ (ನಿ) ಎಂ.ಬಿ. ಶಾರವರ ನೇತೃತ್ವದಲ್ಲಿ ಒಂದು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.
- **ಕೃಷಿ ಉತ್ತೇಜನಕ್ಕೆ ಕ್ರಮಗಳು:** ಕೃಷಿ ಸಾಲಕ್ಕಾಗಿ 8 ಲಕ್ಷ ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ; ಪ್ರತಿಯೊಬ್ಬ ರೈತರಿಗೂ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ; ಕೃಷಿಕರಿಗಾಗಿ 'ಕಿಸಾನ್ ಟಿವಿ'ಯನ್ನು ಆರಂಭಿಸಲಾಗುವುದು. ಇದಲ್ಲದೆ ಪ್ರಧಾನಮಂತ್ರಿ ಕೃಷಿ ಸಿಂಚಾಯೀ ಯೋಜನೆ, ಸೌರಶಕ್ತಿ ಚಾಲಿತ ನೀರಾವರಿ ಪಂಪ್‌ಸೆಟ್‌ಗಳು ಮತ್ತು ಬೆಳೆಗೆ ತಕ್ಕ ಬೆಲೆ – ಈ ಕ್ರಮಗಳನ್ನು ಅನುಸರಿಸಲಾಗಿದೆ.
- **ಎಲ್ಲ ಬಡವರಿಗೂ ಮನೆ:** ಕ್ರಿ.ಶ. 2022ರ ಹೊತ್ತಿಗೆ ಎಲ್ಲ ಬಡವರಿಗೂ ಮನೆಗಳನ್ನು ಕಟ್ಟಿಕೊಡಲು ಸರ್ದಾರ್ ಪಟೇಲ್ ಆವಾಸ್ ಯೋಜನೆಯನ್ನು ಜಾರಿಗೊಳಿಸಲಾಗಿದೆ.





We should walk together, work together and progress together. We should move ahead with this mantra.

■ Sri Narendra Modi, Prime Minister of India

- **ಉತ್ತಮ ನಗರ ಬದುಕು:** ಉತ್ತಮವಾದ ನಗರ ಬದುಕಿಗಾಗಿ ದೇಶದೆಲ್ಲೆಡೆ ಒಟ್ಟು 100 ಸ್ಮಾರ್ಟ್ ಸಿಟಿಗಳು ಮತ್ತು 500 ಉಪನಗರಗಳನ್ನು ರೂಪಿಸಲು ಯೋಜಿಸಲಾಗಿದೆ.
- **ಸ್ಕಿಲ್ ಇಂಡಿಯಾ ಅಭಿಯಾನ:** ಯುವಕರಿಗೆ ಕೌಶಲ್ಯ ತರಬೇತಿ ನೀಡಲು ಮತ್ತು ಅವರ ಉದ್ಯಮಶೀಲತೆಯನ್ನು ಹೆಚ್ಚಿಸಲು ಸ್ಕಿಲ್ ಇಂಡಿಯಾ ಮಿಶನ್‌ನ್ನು ಆರಂಭಿಸಲಾಗಿದೆ. ರಸ್ತೆ, ರೈಲು, ಹಡಗು ಉದ್ಯಮ, ವಿಮಾನಯಾನ ಮತ್ತು ನೀರಾವರಿ ರಂಗದಲ್ಲಿ ಅಭಿವೃದ್ಧಿ ಸಾಧಿಸುವ ಮೂಲಕ ಉದ್ಯೋಗಾವಕಾಶ ಸೃಷ್ಟಿಗೆ ಯೋಜನೆ ಮಾಡಲಾಗಿದೆ.
- **ಪಾರಿಸರಿಕ ಅನುಮತಿ ಸರಳೀಕರಣ:** ಆನ್‌ಲೈನ್ ಸೌಲಭ್ಯದ ಮೂಲಕ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪಾರಿಸರಿಕ ಅನುಮತಿ ನೀಡುವುದನ್ನು ಪಾರದರ್ಶಕಗೊಳಿಸಿ ಸರಳೀಕರಿಸಲಾಗಿದೆ. ಪಾರಿಸರಿಕ ಅನುಮತಿ ಕುರಿತಂತೆ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ರಕ್ಷಣಾ ಮತ್ತು ಗಡಿ ಯೋಜನೆಗಳ ತ್ವರಿತ ಪರವಾನಗಿಗೆ 'ಸಾಮಾನ್ಯ ಪಾರಿಸರಿಕ ಪರವಾನಗಿ' ವರ್ಗದ ಅಡಿಗೆ ತರಲಾಗಿದೆ.
- **ಒಂದು ಹುದ್ದೆ, ಒಂದೇ ಪಿಂಚಣಿ:** ನಿವೃತ್ತ ರಕ್ಷಣಾ ಸಿಬ್ಬಂದಿಗೆ ಅನುಕೂಲ ಮಾಡಿಕೊಡುವ ಒಂದು ಹುದ್ದೆ, ಒಂದು ಪಿಂಚಣಿ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲಾಗುವುದು.
- **ರಾಷ್ಟ್ರೀಯ ಸಮರ ಸ್ಮಾರಕ:** ಯುವಕರಲ್ಲಿ ದೇಶಭಕ್ತಿ ಮತ್ತು ಬಲಿದಾನದ ಭಾವವನ್ನು ಉದ್ದೀಪಿಸಲು ರಾಷ್ಟ್ರದ ರಾಜಧಾನಿ ಪ್ರದೇಶದಲ್ಲಿ ರಾಷ್ಟ್ರೀಯ ಸಮರ ಸ್ಮಾರಕವನ್ನು ಸ್ಥಾಪಿಸಲಾಗುವುದು.
- **ನಮಾಮಿ ಗಂಗಾ:** ಏಕೀಕೃತ ಗಂಗಾ ನದಿ ಸಂರಕ್ಷಣಾ ಕ್ರಮವಾಗಿ 'ನಮಾಮಿ ಗಂಗಾ' ಯೋಜನೆಯನ್ನು 2000 ಕೋಟಿ ರೂ.ಗಳ ಆರಂಭಿಕ ಬಜೆಟ್ ಅನುದಾನದೊಂದಿಗೆ ಆರಂಭಿಸಲಾಗಿದೆ.
- **ಬುಲೆಟ್ ಟ್ರೈನ್:** ದೇಶದ ಮೊಟ್ಟಮೊದಲ ಬುಲೆಟ್ ರೈಲನ್ನು ಅಹಮದಾಬಾದ್ – ಮುಂಬಯಿ ನಡುವೆ ಆರಂಭಿಸಲಾಗುವುದು; ರೈಲು ಪ್ರಯಾಣಿಕರು ಇನ್ನಷ್ಟು ಸುರಕ್ಷತೆ ಮತ್ತು ಆರಾಮ ಪ್ರಯಾಣ ಅನುಭವಿಸುವಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.
- **ಬಾಲಕ–ಬಾಲಕಿಯರಿಗೆ ಯೋಜನೆಗಳು:** 'ಪಢೇ ಭಾರತ್, ಬಢೇ ಭಾರತ್' ಮತ್ತು 'ಬೇಟಿ ಬಚಾವೋ – ಬೇಟಿ ಪಢಾವೋ' ಯೋಜನೆಗಳ ಮೂಲಕ ದೇಶದ ಎಲ್ಲಾ ಬಾಲಕ ಬಾಲಕಿಯರಿಗೆ ಶಿಕ್ಷಣ ನೀಡಲು ಪ್ರಮುಖ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.
- **ಗ್ರಾಮೀಣ ಬಡವರಿಗೆ ವಿದ್ಯುತ್:** 'ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ'ಯಡಿ ಆರಂಭಿಕ 500 ಕೋಟಿ ರೂ.ಗಳ ನಿಧಿಯೊಂದಿಗೆ ಗ್ರಾಮೀಣ ಬಡವರಿಗೆ ವಿದ್ಯುತ್ ಸೇವೆ ನೀಡಲಾಗುವುದು.



- **ಸಬ್ಸಿಡಿಗಳು:** ನಿರ್ಲಕ್ಷಿತರಿಗೆ, ಬಡವರಿಗೆ ಮತ್ತು ಎಸ್‌ಸಿ/ಎಸ್‌ಟಿ ಸಮುದಾಯದವರಿಗೆ ನಿರ್ದಿಷ್ಟವಾದ ಸಬ್ಸಿಡಿಗಳನ್ನು ನೀಡಲಾಗುವುದು.
- **ವೈದ್ಯಕೀಯ ಸೇವೆ ವಿಸ್ತರಣೆ:** ದಿಲ್ಲಿಯಲ್ಲಿರುವ ಎಐಐಎಂಎಸ್ ವೈದ್ಯಕೀಯ ಸಂಸ್ಥೆಯ ಮಾದರಿಯಲ್ಲಿ ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಮಹಾರಾಷ್ಟ್ರದ ವಿದರ್ಭ ಪ್ರಾಂತ, ಉತ್ತರ ಪ್ರದೇಶದ ಪೂರ್ವಾಂಚಲಗಳಲ್ಲಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.
- **ಮಹಿಳೆಗೆ ರಕ್ಷಣೆ:** ಮಹಾನಗರಗಳಲ್ಲಿ ಮಹಿಳೆಯರ ರಕ್ಷಣಾ ವ್ಯವಸ್ಥೆ ವಿಸ್ತರಣೆಗೆ 150 ಕೋಟಿ ರೂ.ಗಳನ್ನು ನೀಡಲಾಗುವುದು.
- **ಐಐಎಂಗಳ ಸ್ಥಾಪನೆ:** ಹಿಮಾಚಲ ಪ್ರದೇಶ, ಪಂಜಾಬ್, ಬಿಹಾರ್, ಒರಿಸ್ಸಾ ಮತ್ತು ರಾಜಸ್ಥಾನದಲ್ಲಿ ಒಟ್ಟು ಐದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.
- **ವಿಮಾನ ನಿಲ್ದಾಣಗಳು:** ಭೋಪಾಲ, ಇಂದೋರ್ ಮತ್ತು ರಾಯ್‌ಪುರ ನಿಲ್ದಾಣಗಳನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ಎಂದು ಘೋಷಿಸಲಾಗುವುದು; 24 ವಿಮಾನ ನಿಲ್ದಾಣಗಳಲ್ಲಿ ಆಂತರಿಕ ಏರ್ ಕಾರ್ಗೋ ಟರ್ಮಿನಲ್‌ಗಳನ್ನು ಸ್ಥಾಪಿಸಲಾಗುವುದು.
- **ರಾಷ್ಟ್ರೀಯ ಹೆದ್ದಾರಿ:** ಇದೇ ವಿತ್ತೀಯ ವರ್ಷದಲ್ಲಿ ಒಟ್ಟು 8500 ಕಿಮೀಗಳಷ್ಟು ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಿಸಲಾಗುವುದು.
- **ಕಾಶ್ಮೀರಿ ಪಂಡಿತರಿಗೆ ನೆರವು:** ಕಾಶ್ಮೀರಿ ಪಂಡಿತರ ಪುನರ್ವಸತಿಗಾಗಿ ಈ ವಿತ್ತೀಯ ವರ್ಷದಲ್ಲಿ 500 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.
- **ವೈಯಕ್ತಿಕ ಆದಾಯ ತೆರಿಗೆ:** ವೈಯಕ್ತಿಕ ಆದಾಯ ತೆರಿಗೆ ವಿನಾಯ್ತಿ ಮಿತಿಯನ್ನು 50 ಸಾವಿರ ರೂ.ಗಳಿಂದ 2 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ.
- **ಹೂಡಿಕೆ ಮಿತಿ ಹೆಚ್ಚಳ:** ಆದಾಯ ತೆರಿಗೆ ಕಾಯ್ದೆಯ 80ಸಿ ಕಲಮಿನ ಪ್ರಕಾರ ಇದ್ದ ಹೂಡಿಕೆ ಮಿತಿಯ ಪ್ರಮಾಣವನ್ನು 1.5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ.
- **ಮದ್ರಸಾಗಳ ಅಭಿವೃದ್ಧಿ:** 100 ಕೋಟಿ ರೂ.ಗಳ ನಿಧಿಯ ಮೂಲಕ ಮದ್ರಸಾ ಆಧುನೀಕರಣ ಯೋಜನೆ ಆರಂಭಿಸಲಾಗಿದೆ. 100 ಮದ್ರಸಾಗಳಲ್ಲಿ ಇರುವ ವಿದ್ಯಾರ್ಥಿಗಳಿಗೆ ಡಿಜಿಟಲ್ ಕೌಶಲ್ಯ ನೀಡಲು ಸೈಬರ್ ಗ್ರಾಮ ಯೋಜನೆ ಆರಂಭಿಸಲಾಗಿದೆ.







**'Brand India' is built of 5 Ts - talent, tradition, tourism, trade and technology.**


■ **Sri Narendra Modi, Prime Minister of India**

- **ಹಮಾರೀ ಧಾರೋಹರ್:** ದೇಶದ ವಿವಿಧ, ವಿಶೇಷತಃ ಅತ್ಯಲ್ಪ ಪ್ರಮಾಣದಲ್ಲಿರುವ ಅಲ್ಪ ಸಂಖ್ಯಾತರ ಶ್ರೀಮಂತ ಪರಂಪರೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಲು 'ಹಮಾರೀ ಧಾರೋಹರ್' ಎಂಬ ವಿನೂತನ ಯೋಜನೆಯನ್ನು ಪ್ರಸ್ತಾವಿಸಲಾಗಿದೆ.
- **ಗುಡ್ಡಗಾಡು ಜನರ ಕಲ್ಯಾಣ:** ಗುಡ್ಡಗಾಡು ಜನರ ಸಮಗ್ರ ಅಭಿವೃದ್ಧಿಗಾಗಿ 'ವನಬಂಧು ಕಲ್ಯಾಣ ಯೋಜನೆ'ಯನ್ನು ಆರಂಭಿಸಲಾಗಿದೆ.
- **ಸಮಾನ ಅವಕಾಶ:** ಎಲ್ಲರಿಗೂ ಸಮಾನ ಉದ್ಯೋಗಾವಕಾಶ ಸಿಗುವಂತಾಗಲು ಯುಪಿಎಸ್‌ಸಿ ನಾಗರಿಕ ಸೇವೆಗಳ ಪರೀಕ್ಷೆ ವ್ಯವಸ್ಥೆಯನ್ನು ಪರಾಮರ್ಶಿಸಲಾಗುತ್ತಿದೆ.
- **ಶಿಕ್ಷಕ ತರಬೇತಿ:** ಪಂಡಿತ ಮದನ ಮೋಹನ ಮಾಳವೀಯ ನವ ಶಿಕ್ಷಕ ತರಬೇತಿ ಕಾರ್ಯಕ್ರಮವನ್ನು ಆರಂಭಿಸಲಾಗಿದೆ.
- **ಆರೋಗ್ಯ ರಕ್ಷಣೆ:** ಶ್ರೀ ಸಾಮಾನ್ಯರ ಸಂಪೂರ್ಣ ಆರೋಗ್ಯ ರಕ್ಷಣೆಗಾಗಿ 'ರಾಷ್ಟ್ರೀಯ ಆರೋಗ್ಯ ಭರವಸೆ ಅಭಿಯಾನ' ವನ್ನು ಆರಂಭಿಸಲಾಗಿದೆ.
- **ಉದ್ಯೋಗ ಸೃಷ್ಟಿ:** 'ರಾಷ್ಟ್ರೀಯ ವೃತ್ತಿ ಸೇವಾ ಉಪಕ್ರಮ'ದ ಅಡಿಯಲ್ಲಿ ಇನ್ನುಮುಂದೆ ಉದ್ಯೋಗ ವಿನಿಮಯ ಕೇಂದ್ರಗಳಯ ವೃತ್ತಿ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಲಿವೆ.
- **ನೆರೆ ಸಂತ್ರಸ್ತರಿಗೆ ನೆರವು:** ನೇಪಾಳ ಸರ್ಕಾರದ ನೆರವಿನಿಂದ ಕೋಸಿ ನದಿ ಪ್ರವಾಹವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.
- **ರೈತ-ಬಡವರ ಪರ ವಿಶ್ವವೇದಿಕೆಯಲ್ಲಿ ಪ್ರತಿಪಾದನೆ:** ದೇಶದ ರೈತರು ಮತ್ತು ಬಡವರ ಹಿತರಕ್ಷಣೆಗಾಗಿ ಭಾರತವು ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಅತ್ಯಂತ ಕಠಿಣವಾದ ನಿಲುವನ್ನು ಕೈಗೊಂಡಿದೆ.
- **ಔಷಧ ಬೆಲೆ ನಿಯಂತ್ರಣ:** ಹೃದಯ ಮತ್ತು ಸಿಹಿಮೂತ್ರ ರೋಗ ಸಂಬಂಧೀ 108 ನಾನ್-ಶೆಡ್ಯೂಲ್ಡ್ ಔಷಧಗಳ ಗರಿಷ್ಠ ಮಾರಾಟ ಬೆಲೆಯನ್ನು ನಿಯಂತ್ರಿಸಿ ಈ ಔಷಧಗಳ ಬೆಲೆಗಳನ್ನು ಕಡಿಮೆ ಮಾಡಲಾಗುತ್ತಿದೆ. ಅಲ್ಲದೆ 50 ವಿವಿಧ ಜೀವಾವಶ್ಯಕ ಜೆನೆರಿಕ್ ಔಷಧಗಳನ್ನು ಉಚಿತವಾಗಿ ವಿತರಿಸಲು ನಿರ್ಧರಿಸಿದ್ದು ಇದು ಹಂತ ಹಂತವಾಗಿ ಜಾರಿಗೆ ಬರುತ್ತದೆ.
- **ರಕ್ಷಣಾ ಪಡೆಗಳ ಆಧುನೀಕರಣ:** ದೇಶದ ರಕ್ಷಣಾ ಪಡೆಗಳ ಆಧುನೀಕರಣಕ್ಕಾಗಿ 5000 ಕೋಟಿ ರೂ.ಗಳ ವಿಶೇಷ ಅನುದಾನವನ್ನು ನೀಡಲಾಗಿದೆ.
- **ಪೂರ್ವಾಂಚಲದಲ್ಲಿ ಸಾವಯವ ಕೃಷಿ:** ಪೂರ್ವಾಂಚಲ ರಾಜ್ಯಗಳಲ್ಲಿ ಸಾವಯವ ಕೃಷಿಯನ್ನು ಭಾರೀ ಪ್ರಮಾಣದಲ್ಲಿ ಉತ್ತೇಜಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.
- **ಕ್ಯಾಂಪಸ್ ಕನೆಕ್ಟ್:** ಈ ಯೋಜನೆಯಲ್ಲಿ 21 ಸಾವಿರ ಕಾಲೇಜುಗಳ ತಲಾ 20 ಕೊಠಡಿಗಳನ್ನು ವೈಫೈ ಸಂಪರ್ಕಕ್ಕೆ ಒಳಪಡಿಸಲಾಗುವುದು. ಇದರಿಂದ ಒಂದೂವರೆ ಕೋಟಿ ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ.
- **ಇ-ಲೈಬ್ರರಿ:** ದೇಶದಲ್ಲಿ ಸರ್ಕಾರಿ ಸಂಸ್ಥೆಗಳು ರೂಪಿಸಿದ ಎಲ್ಲ ಮಾಹಿತಿಗಳನ್ನೂ ಉಚಿತವಾಗಿ ನೀಡಲು ಇ-ಲೈಬ್ರರಿಯನ್ನು ಸ್ಥಾಪಿಸಲಾಗುವುದು.
- **ಯುವ ನಾಯಕ ಕಾರ್ಯಕ್ರಮ:** ಸರ್ಕಾರವು ಶೀಘ್ರದಲ್ಲೇ ಯುವ ಮಂಡಳಗಳ ಮೂಲಕ 'ಯಂಗ್ ಲೀಡರ್ಸ್ ಪ್ರೋಗ್ರಾಮ್' ಆರಂಭಿಸಿ ಯುವಕರ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಿದೆ. ಇದಕ್ಕಾಗಿ 100 ಕೋಟಿ ರೂ.ಗಳನ್ನು ನೀಡಲಾಗಿದೆ.





# ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್





- ಲೋಕಸಭೆಯಲ್ಲಿ ಅತ್ಯಂತ ಕ್ರಿಯಾಶೀಲ ಸದಸ್ಯ ಎಂಬ ಶ್ಲಾಘನೆಗೆ ಪಾತ್ರರಾದ ಕರ್ನಾಟಕದ ಕೆಲವೇ ಸಂಸದರಲ್ಲಿ ಪ್ರಮುಖರು.
- ಲೋಕಸಭೆಯ ಚರ್ಚೆಗಳಲ್ಲಿ, ಪ್ರಶ್ನೋತ್ತರ ವೇಳೆಯಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸುತ್ತಿರುವ ದೇಶದ ಕೆಲವೇ ಸಂಸದರಲ್ಲಿ ಒಬ್ಬರು.
- ಲೋಕಸಭಾ ಕ್ಷೇತ್ರದ ಅಭಿವೃದ್ಧಿಗಾಗಿ ಸದಾ ಕಾರ್ಯನಿರತ; ಜನರ ಜೊತೆಗೆ ನಿರಂತರ ಸಂಪರ್ಕ; ಸಾರ್ವಜನಿಕ ಸೇವಕನಾಗಿ ಅವಿರತವಾಗಿ ಜನಸೇವೆಯಲ್ಲಿ ಭಾಗಿ.
- ಶ್ರೀ ನಳಿನ್‌ಕುಮಾರ್ ಕಟೀಲ್‌ರವರು ಕಳೆದ ಐದು ವರ್ಷಗಳಲ್ಲಿ ಸಾಧಿಸಿದ್ದೇನು, ಎರಡನೇ ಅವಧಿಯ ಮೊದಲ ನೂರು ದಿನಗಳಲ್ಲಿ ಸಾಧಿಸಿದ ಪ್ರಗತಿಯೇನು ಎಂಬ ಚಿತ್ರಣವನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ. ಜೊತೆಗೇ ಮಂಗಳೂರು ರೈಲು ಸೌಕರ್ಯಗಳಿಗಾಗಿ ಮಾಡುತ್ತಿರುವ ಪ್ರಯತ್ನಗಳ ಸಂಕ್ಷಿಪ್ತ ನೋಟವಿದೆ.

**ಸಂಸದರ ಕಾರ್ಯತತ್ಪರತೆಯ ಬಗ್ಗೆ ನೀವೇ ಓದಿ ಮನವರಿಕೆ ಮಾಡಿಕೊಳ್ಳಲು, ಯಾವುದೇ ವಿಷಯಗಳಿದ್ದರೂ ಅವರನ್ನು ನೇರವಾಗಿ ಸಂಪರ್ಕಿಸಲು ವಿನಂತಿ.**




This country has not been made by politicians, kings or governments. It has been made by farmers, labourers, youth, our mothers and sisters.

■ Sri Narendra Modi, Prime Minister of India





## ಹಾಜರಾತಿ

ರಾಷ್ಟ್ರೀಯ ಹಾಗೂ ರಾಜ್ಯ ಸರಾಸರಿ ಹಾಜರಾತಿ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಾಜರಾತಿ ಇದೆ.




## ಚರ್ಚೆಗಳಲ್ಲಿ ಭಾಗಿತ್ವ

ರಾಷ್ಟ್ರೀಯ ಹಾಗೂ ರಾಜ್ಯ ಸರಾಸರಿ ಹಾಜರಾತಿ ಪ್ರಮಾಣಕ್ಕಿಂತ ಸುಮಾರು ಎರಡು ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ.




## ಪ್ರಶ್ನೋತ್ತರ

ರಾಷ್ಟ್ರೀಯ ಸರಾಸರಿ 18 ಮತ್ತು ರಾಜ್ಯದ ಸಂಸದರ ಪ್ರಶ್ನೆಗಳ ಸರಾಸರಿ 39 ಇದ್ದರೆ, ಶ್ರೀ ನಳಿನ್‌ಕುಮಾರ್ ಕಟೀಲ್ ಒಟ್ಟು 100 ಪ್ರಶ್ನೆಗಳನ್ನು ಕೇಳಿ ದಾಖಲೆ ನಿರ್ಮಿಸಿದ್ದಾರೆ.





# ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್ ಕೇಳಿದ ಪ್ರಶ್ನೆಗಳ ಪಟ್ಟಿ

| DATE | TITLE | QUESTION TYPE | MINISTRY |
|---|---|---|---|
| 7/7/2014 | **Delivery of Postal Articles** | Starred | Communications and Information Technology |
| 7/7/2014 | **Helicopter Services** | Unstarred | Civil Aviation |
| 7/7/2014 | **Opening of Post Offices** | Unstarred | Communications and Information Technology |
| 7/7/2014 | **Development of Airports** | Unstarred | Civil Aviation |
| 7/7/2014 | **Demand and Supply of Natural Gas** | Unstarred | Petroleum and Natural Gas |
| 7/8/2014 | **Decline in Procurement of Foodgrains** | Starred | Consumer Affairs, Food and Public Distribution |
| 7/8/2014 | **Online Marketing** | Unstarred | Consumer Affairs, Food and Public Distribution |
| 7/8/2014 | **Supply of Fertilizers** | Unstarred | Chemicals and Fertilizers |
| 7/8/2014 | **Supply of Pesticides** | Unstarred | Agriculture |
| 7/8/2014 | **Sale of Medicines by MNCs** | Unstarred | Chemicals and Fertilizers |
| 7/9/2014 | **Implementation of RTE Act** | Starred | Human Resource Development |
| 7/9/2014 | **Aakash Tablets** | Unstarred | Urban Development |
| 7/9/2014 | **Poaching of Wild Animals** | Unstarred | Environment, Forests and Climate Change |
| 7/9/2014 | **Facilities to KVS Employees** | Unstarred | Human Resource Development |
| 7/9/2014 | **JNNURM Projects** | Unstarred | Urban Development |
| 7/11/2014 | **Counterfeit Products** | Starred | Commerce and Industry |
| 7/11/2014 | **Import of Gold Jewellery** | Unstarred | Commerce and Industry |
| 7/11/2014 | **Export-Import Trade in Virginia Tobacco Products** | Unstarred | Commerce and Industry |
| 7/11/2014 | **CAD Platform for Distress Calls**<br>**Guarantee for NRI Investments** | Unstarred | Finance |
| 7/11/2014 | **Free Medicines to the Patients** | Unstarred | Health and Family Welfare |
| 7/14/2014 | **Roaming Charges** | Unstarred | Communications and Information Technology |
| 7/14/2014 | **Air Traffic Services** | Unstarred | Civil Aviation |
| 7/14/2014 | **Modernisation of Airports under PPP Mode** | Unstarred | Civil Aviation |
| 7/14/2014 | **Implementation of e-District Programme** | Unstarred | Communications and Information Technology |
| 7/14/2014 | **Civil Aviation Policy** | Unstarred | Civil Aviation |
| 7/15/2014 | **AAY Beneficiaries** | Starred | Consumer Affairs, Food and Public Distribution |
| 7/15/2014 | **Physical/Sports Education** | Unstarred | Skill Development, Entrepreneurship, Youth Affairs and Sports |



**India was freed from the British in 1947 but it still needs to become free from nepotism, arrogance stemming from power, corruption, price rise, obsolete mindset and this atmosphere of mistrust. The country is in poverty and needs new thinking (Nayi Soch)!**

■ **Sri Narendra Modi, Prime Minister of India**

| DATE | TITLE | QUESTION TYPE | MINISTRY |
|---|---|---|---|
| 7/15/2014 | **Use of Ethanol by Chemical Industry** | Unstarred | Chemicals and Fertilizers |
| 7/15/2014 | **Welfare Schemes for Nomadic Tribes** | Unstarred | Social Justice and Empowerment |
| 7/15/2014 | **Demand and Supply of Fertilizers** | Unstarred | Chemicals and Fertilizers |
| 7/16/2014 | **Central Deputation** | Unstarred | Prime Minister |
| 7/16/2014 | **Degree to SPA and IIITD&M Students** | Unstarred | Human Resource Development |
| 7/16/2014 | **Sewer System** | Unstarred | Urban Development |
| 7/16/2014 | **Polluting Industries** | Unstarred | Environment, Forests and Climate Change |
| 7/16/2014 | **Cases Lying Pending in CBI Courts** | Unstarred | Prime Minister |
| 7/17/2014 | **Renewable Energy Potential** | Unstarred | New and Renewable Energy |
| 7/17/2014 | **Financial Condition of the Railways** | Unstarred | Railways |
| 7/17/2014 | **Quality of Construction Work** | Unstarred | Road Transport and Highways |
| 7/17/2014 | **Railway Projects in Karnataka** | Unstarred | Railways |
| 7/17/2014 | **Promotion of Non-Conventional Energy Work** | Unstarred | New and Renewable Energy |
| 7/18/2014 | **Procurement of Defence Equipment** | Unstarred | Defence |
| 7/18/2014 | **Juvenile Justice Act** | Unstarred | Women and Child Development |
| 7/18/2014 | **Minor Forest Produce** | Unstarred | Tribal Affairs |
| 7/18/2014 | **Communicable and Non-Communicable Diseases** | Unstarred | Health and Family Welfare |
| 7/21/2014 | **Recovery of Airport Usage Fees** | Unstarred | Civil Aviation |
| 7/21/2014 | **Development of Low-Cost Terminals** | Unstarred | Civil Aviation |
| 7/21/2014 | **Prices of ATF** | Unstarred | Petroleum and Natural Gas |
| 7/22/2014 | **Schemes to Develop Sports** | Unstarred | Skill Development, Entrepreneurship, Youth Affairs and Sports |
| 7/22/2014 | **Reservation for Differently Abled Persons** | Unstarred | Social Justice and Empowerment |
| 7/22/2014 | **Area of Convergence** | Unstarred | Tourism |
| 7/22/2014 | **Anti-Doping Programme** | Unstarred | Skill Development, Entrepreneurship, Youth Affairs and Sports |
| 7/23/2014 | **Urbanisation** | Starred | Urban Development |
| 7/23/2014 | **Recruitment of Persons with Disability** | Unstarred | Prime Minister |
| 7/23/2014 | **Implementation of RTE Act** | Unstarred | Human Resource Development |
| 7/23/2014 | **Ban on Polythene Bags** | Unstarred | Environment, Forests and Climate Change |
| 7/23/2014 | **Central Staffing Schemes** | Unstarred | Prime Minister |
| 7/24/2014 | **Opening of Food Kiosks** | Unstarred | Railways |
| 7/24/2014 | **Ganga Manthan** | Unstarred | Water Resources, River Development and Ganga Rejuvenation |
| 7/24/2014 | **Road Projects under EPC** | Unstarred | Road Transport and Highways |





| DATE | TITLE | QUESTION TYPE | MINISTRY |
|---|---|---|---|
| 7/24/2014 | **Renewable Energy Projects** | Unstarred | New and Renewable Energy |
| 7/25/2014 | **Direct Cash Transfer** | Unstarred | Finance |
| 7/25/2014 | **Vacancies in Banks** | Unstarred | Finance |
| 7/28/2014 | **Flying Allowance** | Unstarred | Civil Aviation |
| 7/28/2014 | **Amendment of Apprentice Act** | Unstarred | Labour and Employment |
| 7/28/2014 | **Nationwide MNP** | Unstarred | Communications and Information Technology |
| 7/28/2014 | **Apprenticeship Training** | Unstarred | Labour and Employment |
| 7/30/2014 | **Advertisement Arrears** | Unstarred | Information and Broadcasting |
| 7/30/2014 | **Technologies Evolved by CFTRI** | Unstarred | Science and Technology |
| 7/30/2014 | **Innovation Capabilities** | Unstarred | Science and Technology |
| 7/30/2014 | **Mid-Day Meal Scheme** | Unstarred | Human Resource Development |
| 7/30/2014 | **Affordable Housing for Lower and Middle Income Groups** | Unstarred | Housing and Urban Poverty Alleviation |
| 7/31/2014 | **Base Kitchens** | Starred | Railways |
| 7/31/2014 | **Drinking Water Projects** | Unstarred | Drinking Water and Sanitation |
| 7/31/2014 | **Rural Drinking Water Projects** | Unstarred | Drinking Water and Sanitation |
| 8/1/2014 | **UID Projects** | Unstarred | Planning |
| 8/4/2014 | **Frivolous Litigations Filed under PIL** | Unstarred | Law and Justice |
| 8/5/2014 | **Pilot Programme on Organic Farming** | Unstarred | Agriculture |
| 8/5/2014 | **Opening of New Farm Institutions** | Unstarred | Agriculture |
| 8/6/2014 | **Cases of Corruption** | Unstarred | Prime Minister |
| 8/6/2014 | **Admission Guidelines of KVs** | Unstarred | Human Resource Development |
| 8/6/2014 | **Poaching of Elephants** | Unstarred | Environment, Forests and Climate Change |
| 8/7/2014 | **Wind Energy** | Starred | New and Renewable Energy |
| 8/7/2014 | **Capacity of Transmission Lines** | Unstarred | Power |
| 8/7/2014 | **Concrete Roads** | Unstarred | Road Transport and Highways |
| 8/7/2014 | **Vacant Posts** | Unstarred | Railways |
| 8/7/2014 | **Electricity to Villages under RGGVY** | Unstarred | Power |
| 8/8/2014 | **Welfare Scheme Through NGOs/VOs** | Unstarred | Tribal Affairs |
| 8/8/2014 | **Losses Incurred by Insurance Companies** | Unstarred | Finance |
| 8/8/2014 | **Health Regulator** | Unstarred | Health and Family Welfare |
| 8/11/2014 | **Fast Track Courts** | Unstarred | Law and Justice |
| 8/11/2014 | **Oil Pilferage** | Unstarred | Petroleum and Natural Gas |
| 8/12/2014 | **Import of Pulses** | Unstarred | Consumer Affairs, Food and Public Distribution |
| 8/13/2014 | **Implementation of DAS** | Unstarred | Information and Broadcasting |
| 8/13/2014 | **Fuel from Plastic Waste** | Unstarred | Science and Technology |



**Taking a toddler to school is one of the most satisfying moments in my many years in public life. There is no better joy than laying the foundations of a strong future for these little children….Friends, let us all become partners in this quest for ensuring education for all!**

■ **Sri Narendra Modi, Prime Minister of India**

| DATE | TITLE | QUESTION TYPE | MINISTRY |
|---|---|---|---|
| 8/13/2014 | **Exploitation of Forests** | Unstarred | Environment, Forests and Climate Change |
| 8/13/2014 | **Network of National Laboratories** | Unstarred | Science and Technology |
| 8/13/2014 | **Education in Tribal Areas** | Unstarred | Human Resource Development |
| 8/14/2014 | **Incentives for Development of Renewable Energy Sources** | Starred | New and Renewable Energy |
| 8/14/2014 | **Pending Hydro Power Projects** | Unstarred | Power |
| 8/14/2014 | **Ambedkar Hastshilp Vikas Yojana** | Unstarred | Textiles |










# ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್ ಕೇಳಿದ ಪ್ರಶ್ನೆಗಳ ಸಂಕ್ಷಿಪ್ತ ನೋಟ

## 1. ಗಾಳಿ ಶಕ್ತಿಯಿಂದ ವಿದ್ಯುತ್

**ಪ್ರಶ್ನೆ: (ದಿನಾಂಕ 7.8.2014)**

**ದೇಶದ ನವೀಕರಿಸಬಹುದಾದ ಇಂಧನಗಳ ಪೈಕಿ ಗಾಳಿ ವಿದ್ಯುತ್ ಗಿರಣಿಗಳೇ ಅತಿದೊಡ್ಡ ಮೂಲಗಳೆ? ಹಾಗಾದರೆ ಕಳೆದ 4 ವರ್ಷಗಳಲ್ಲಿ ಗಾಳಿ ವಿದ್ಯುತ್ ಉತ್ಪಾದನೆ ಪ್ರಮಾಣವೆಷ್ಟು? 12ನೇ ಪಂಚವಾರ್ಷಿಕ ಯೋಜನೆಯ ಗುರಿ ಏನು, ಸಾಧಿಸಿದ್ದೆಷ್ಟು? ವಾಣಿಜ್ಯ ಗಾಳಿ ವಿದ್ಯುತ್ ಉತ್ಪಾದಕರಿಗೆ ನೀಡುತ್ತಿದ್ದ ಹಣಕಾಸು ಉತ್ತೇಜಕಗಳನ್ನು ಹಿಂದೆಗೆದುಕೊಳ್ಳಲಾಗಿದೆಯೆ?**

ಉತ್ತರ: (ಶ್ರೀ ಪೀಯೂಶ್ ಗೋಯೆಲ್, ಮಾನ್ಯ ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ (ಸ್ವತಂತ್ರ ಖಾತೆ) ರಾಜ್ಯ ಸಚಿವರು)

ನಿಜ; ಗಾಳಿ ವಿದ್ಯುತ್ತೇ ದೇಶದ ನವೀಕರಿಸಬಹುದಾದ ಇಂಧನದಲ್ಲಿ ಅತಿಹೆಚ್ಚು (ಶೇ. 66.84) ಪ್ರಮಾಣದಲ್ಲಿದೆ; 2014ರ ಜೂನ್ ಹೊತ್ತಿಗೆ ಗಾಳಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 21,609 ಮೆಗಾವ್ಯಾಟ್ ಆಗಿತ್ತು. 12ನೇ ಪಂಚವಾರ್ಷಿಕ ಯೋಜನೆಯಲ್ಲಿ 15 ಸಾವಿರ ಮೆಗಾವ್ಯಾಟ್ ಗುರಿ ಇಟ್ಟುಕೊಂಡಿದ್ದು ಈವರೆಗೆ 4256.88 ಮೆಗಾವ್ಯಾಟ್ ಸಾಧಿಸಲಾಗಿದೆ. ಹಣಕಾಸು ಉತ್ತೇಜಕಗಳನ್ನು ನಿಲ್ಲಿಸಿದ್ದರಿಂದ ಗಾಳಿ ವಿದ್ಯುತ್ ಉತ್ಪಾದನೆ ಕುಗ್ಗಿತ್ತು. ಈಗ ಈ ಉತ್ತೇಜಕವನ್ನು ಪುನರಾರಂಭಿಸಲಾಗಿದೆ.

2011–12ರಲ್ಲಿ 3196.66 ಮೆಗಾವ್ಯಾಟ್, 2012–13ರಲ್ಲಿ 1700.30 ಮೆಗಾವ್ಯಾಟ್, 2013–14ರಲ್ಲಿ 3618.81 ಮೆಗಾವ್ಯಾಟ್ ಮತ್ತು 2014ರ ಜೂನ್‌ವರೆಗೆ 477.70 ಮೆಗಾವ್ಯಾಟ್ ವಿದ್ಯುತ್ತನ್ನು ಗಾಳಿಯಿಂದ ಉತ್ಪಾದಿಸಲಾಗಿದೆ.

## 2. ರೈಲ್ವೆಯಲ್ಲಿ ಶುಚಿ ಊಟದ ವ್ಯವಸ್ಥೆ

**ಪ್ರಶ್ನೆ: (ದಿನಾಂಕ 31.7.2014)**

**ರೈಲುಗಳಲ್ಲಿ ಊಟದ ಸರಬರಾಜಿನ ಅಗತ್ಯಕ್ಕೆ ತಕ್ಕಂತೆ ಅಡುಗೆಮನೆಗಳನ್ನು ಸ್ಥಾಪಿಸುವ ಯೋಜನೆ ಇದೆಯೆ? ಈ ಊಟದ ಗುಣಮಟ್ಟ ಮತ್ತು ನೈರ್ಮಲ್ಯ ಕುರಿತಂತೆ ಆಡಿಟ್ ಮಾಡುವ ವ್ಯವಸ್ಥೆ ಇದೆಯೆ?**

ಉತ್ತರ (ಶ್ರೀ ಡಿ ವಿ ಸದಾನಂದ ಗೌಡ, ಮಾನ್ಯ ರೈಲ್ವೆ ಸಚಿವರು)

ರೈಲುಗಳಲ್ಲಿ ಅಗತ್ಯ ಮತ್ತು ವೇಳೆಗೆ ಅನುಗುಣವಾಗಿ ವಿವಿಧ ಬಗೆಯ ಮೂಲ ಅಡುಗೆಮನೆಗಳನ್ನು ಸ್ಥಾಪಿಸುವ ಉದ್ದೇಶ ಇದೆ. ಆದರೆ ಯಾವುದೇ ಡಿಪಾರ್ಟ್‌ಮೆಂಟಲ್ ಅಡುಗೆಮನೆ ಯೋಜನೆ ಇಲ್ಲ. ಊಟದ ನೈರ್ಮಲ್ಯ ಮತ್ತು ಗುಣಮಟ್ಟವನ್ನು ನಿಯತಕಾಲಿಕವಾಗಿ ಆಡಿಟ್ ಮಾಡುವ ವ್ಯವಸ್ಥೆ ಇದೆ. ಕೊರತೆ ಕಂಡುಬಂದರೆ ಸೂಕ್ತ ದಂಡ ವಿಧಿಸಲಾಗುವುದು ಅಥವಾ ಗುತ್ತಿಗೆ ರದ್ದುಪಡಿಸಲಾಗುವುದು. ಇದಲ್ಲದೆ ಪ್ರಯಾಣಿಕರಿಂದಲೂ ಹಿಮ್ಮಾಹಿತಿ ಪಡೆಯಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ 1448,1765,2762 ದೂರುಗಳನ್ನು ನಿರ್ವಹಿಸಲಾಗಿದ್ದು ಈ ವರ್ಷದ ಜೂನ್‌ವರೆಗೆ 1205 ದೂರುಗಳನ್ನು ನಿರ್ವಹಿಸಲಾಗಿದೆ.



I want to expedite the nation-building process by encouraging the capabilities of government functionaries.

■ Sri Narendra Modi, Prime Minister of India

## 3. ನಗರೀಕರಣ

**ಪ್ರಶ್ನೆ: (ದಿನಾಂಕ 23.7.2014)**

**2011ರ ಗಣತಿಯಂತೆ ರಾಜ್ಯಶಃ ಇದ್ದ ಪಟ್ಟಣ ಮತ್ತು ನಗರಗಳ ಸಂಖ್ಯೆ ಕೊಡಿ. ಈ ನಗರಗಳಲ್ಲಿನ ಜನಸಂಖ್ಯಾವೃದ್ಧಿಯ ಅಂದಾಜು ಮಾಡಲಾಗಿದೆಯೆ? ನಗರೀಕರಣದಲ್ಲಿ ಭಾರತವು ಇತರೆ ದೇಶಗಳಿಗಿಂತ ಹಿಂದೆ ಬಿದ್ದಿದೆಯೆ? ನಗರಗಳು ದೇಶದ ಜಿಡಿಪಿಗೆ ನೀಡುವ ಕೊಡುಗೆ ಪ್ರಮಾಣದಲ್ಲಿ ಹೆಚ್ಚಳವಾಗಿದೆಯೆ? ನಗರ ಯೋಜನೆ ಸುಧಾರಿಸಲು ಕೈಗೊಂಡ ಕ್ರಮಗಳೇನು?**

**ಉತ್ತರ (ಶ್ರೀ ಎಂ ವೆಂಕಯ್ಯ ನಾಯ್ಡು, ಮಾನ್ಯ ನಗರಾಭಿವೃದ್ಧಿ ಸಚಿವರು)**

2011ರ ಗಣತಿಯಂತೆ ಒಟ್ಟು 7933 ದೇಶದಲ್ಲಿ ಪಟ್ಟಣ ಮತ್ತು ನಗರಗಳಿವೆ. 2026ರ ಹೊತ್ತಿಗೆ ದೇಶದ ನಗರ ಜನಸಂಖ್ಯೆಯು ಶೇ. 38.2ಕ್ಕೆ ಹೆಚ್ಚಳವಾಗಬಹುದು. 2011ರಲ್ಲಿ ಚೀನಾದಲ್ಲಿ ಶೇ. 50.6, ಇಂಡೋನೇಶ್ಯಾದಲ್ಲಿ ಶೇ. 50.7, ದಕ್ಷಿಣ ಆಫ್ರಿಕಾದಲ್ಲಿ ಶೇ. 62 ಹಾಗೂ ಬ್ರೆಜಿಲ್‌ನಲ್ಲಿ ಶೇ. 84.6ರಷ್ಟು ನಗರೀಕರಣ ಇತ್ತು; ಆಗ ಭಾರತದ ಪ್ರಮಾಣ ಶೇ. 31.6. 1970–701ರಲ್ಲಿ ನಗರಗಳು ದೇಶದ ಜಿಡಿಪಿಯ ಶೇ. 37.7ರಷ್ಟಕ್ಕೆ ಕಾರಣವಾಗಿದ್ದವು; ಈ ಪ್ರಮಾಣವು 2004–05ರಲ್ಲಿ ಶೇ. 52ಕ್ಕೆ ಹೆಚ್ಚಿತ್ತು. ನಗರಾಭಿವೃದ್ಧಿಯು ರಾಜ್ಯ ವಿಷಯವಾಗಿದ್ದು ಅವುಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಿದೆ.

## 4. ಅಂತ್ಯೋದಯ ಅನ್ನ ಯೋಜನೆ

**ಪ್ರಶ್ನೆ: ದಿನಾಂಕ (15.7.2014)**

**ಅಂತ್ಯೋದಯ ಅನ್ನ ಯೋಜನೆಗಾಗಿ ಕುಟುಂಬಗಳನ್ನು ಗುರುತಿಸುವ ನೀತಿಗಳನ್ನು ರೂಪಿಸಲಾಗಿದೆಯೆ? ಫಲಾನುಭವಿಗಳ ಸಂಖ್ಯೆ ಎಷ್ಟು? ರಾಜ್ಯಗಳಿಂದ ಈ ಯೋಜನೆ ಫಲಾನುಭವಿಗಳ ಸಂಖ್ಯೆ ಹೆಚ್ಚಳದ ಕೋರಿಕೆ ಬಂದಿದೆಯೆ? ಯೋಜನೆಯ ವಿಶ್ಲೇಷಣೆ ವಿವರಗಳಿವೆಯೆ?**

ಉತ್ತರ (ಶ್ರೀ ರಾಮ್‌ವಿಲಾಸ್ ಪಾಸ್ವಾನ್, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವರು)

ಅಂತ್ಯೋದಯ ಅನ್ನ ಯೋಜನೆಗಾಗಿ ಫಲಾನುಭವಿಗಳ ಅರ್ಹತಾ ಪಟ್ಟಿಯನ್ನು ರೂಪಿಸಲಾಗಿದೆ. ಇವರಲ್ಲಿ ಭೂರಹಿತ ಕೃಷಿ ಕಾರ್ಮಿಕರು, ಗ್ರಾಮೀಣ ಕುಶಲಕಲೆಗಾರರು, ಚಮ್ಮಾರರು, ನೇಕಾರರು, ರಿಕ್ಷಾ ಎಳೆಯುವವರು, ಚಿಂದಿ ಆಯುವವರು, ಕಮ್ಮಾರರು, ಹೂಮಾರುವವರು, ಹಾವಾಡಿಗರು, ಅನಾಥರು – ಹೀಗೆ ವಿವಿಧ ಬಗೆಯ ಫಲಾನುಭವಿಗಳ ಪಟ್ಟಿ ರೂಪಿಸಿದೆ. 60 ವರ್ಷ ದಾಟಿದ ವಿಧವೆಯರು, ಕಾಯಿಲೆಗೆ ತುತ್ತಾದವರು, ಬೆಂಬಲರಹಿತ ಅವಿವಾಹಿತ ಪುರುಷರು, ಗುಡ್ಡಗಾಡು ಮನೆಗಳು, ಬಡತನದ ರೇಖೆಗಿಂತ ಕೆಳಗೆ ಇರುವವರು – ಅರ್ಹರು.

2014ರ ಜೂನ್ 30ರ ಹೊತ್ತಿಗೆ 249.998 ಲಕ್ಷ ಕುಟುಂಬಗಳನ್ನು ಗುರುತಿಸಲಾಗಿದೆ. ವಿವಿಧ ರಾಜ್ಯಗಳಿಂದ ಪ್ರಮಾಣ ಹೆಚ್ಚಳ ಬೇಡಿಕೆ ಬಂದಿದ್ದರೂ ಅದಕ್ಕೆ ಅವಕಾಶವಿಲ್ಲ.

## 5. ನಕಲಿ ಉತ್ಪನ್ನಗಳು

**ಪ್ರಶ್ನೆ: (ದಿನಾಂಕ 11.07.2014 ಚುಕ್ಕಿ ಗುರುತಿನ ಪ್ರಶ್ನೆ)**

**ವಿದೇಶದಲ್ಲಿ ತಯಾರಿಸಿ ಭಾರತಕ್ಕೆ ಹರಿದುಬರುವ ನಕಲಿ ಉತ್ಪನ್ನಗಳ ಬಗ್ಗೆ, ಇದರಿಂದ ದೇಶದ ಆಂತರಿಕ ಉದ್ಯಮಕ್ಕೆ ಭಾರೀ ನಷ್ಟವಾಗುತ್ತಿರುವ ಬಗ್ಗೆ ಸರ್ಕಾರವು ಗಮನ ಹರಿಸಿದೆಯೆ? ಈ ಕುರಿತ ಕ್ರಮಗಳೇನು?**

ಉತ್ತರ (ಶ್ರೀಮತಿ ನಿರ್ಮಲಾ ಸೀತಾರಾಮನ್, ವಾಣಿಜ್ಯ ಮತ್ತು ಉದ್ಯಮ ಖಾತೆ ರಾಜ್ಯ ಸಚಿವೆ (ಸ್ವತಂತ್ರ ಖಾತೆ)ಸಚಿವೆ





ಕಳೆದ ಐದು ವರ್ಷಗಳಲ್ಲಿ ಕೇವಲ 4 ಇಂಥ ಪ್ರಕರಣಗಳನ್ನು ನೋಂದಾಯಿಸಲಾಗಿದೆ. ವ್ಯಾಪಾರ ಕೊರತೆಯನ್ನು ನೀಗಿಸಲು ಚೀನಾದೊಂದಿಗೆ ಜೂನ್ 2014ರಲ್ಲಿ 'ಭಾರತದಲ್ಲಿ ಔದ್ಯಮಿಕ ಉದ್ಯಾನಗಳ ಕುರಿತ ಒಪ್ಪಂದ'ವನ್ನು ಮಾಡಿಕೊಳ್ಳಲಾಗಿದೆ. ನಕಲಿ ಉತ್ಪನ್ನಗಳ ನಿಯಂತ್ರಣವು ಭಾರತೀಯ ಸುಂಕ ಇಲಾಖೆಗೆ ಸೇರಿದೆ. ಚೀನಾದಿಂದ 2015 ಜೂನ್23ರವರೆಗೆ ಹಾಲು ಮತ್ತು ಹಾಲಿನ ಉತ್ಪನ್ನಗಳ ಆಮದನ್ನು ನಿಷೇಧಿಲಾಗಿದೆ; ಐಇಎಂಇ, ಇಎಸ್‌ಎನ್ ಅಥವಾ ಎಂಇಐಡಿ ಸಂಖ್ಯೆ ಇಲ್ಲದ ಮೊಬೈಲ್‌ಗಳನ್ನು ನಿಷೇಧಿಸಲಾಗಿದೆ.

## 6. ಶಿಕ್ಷಣ ಪಡೆಯುವ ಹಕ್ಕು ಕಾಯ್ದೆಯ ಜಾರಿ

**ಪ್ರಶ್ನೆ: (ದಿನಾಂಕ 9.7.2014)**

**ಶಿಕ್ಷಣ ಪಡೆಯುವ ಹಕ್ಕು ಕಾಯ್ದೆಯಡಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಮೀಕ್ಷೆ ನಡೆದಿದದೆಯೆ? ಹಾಗಿದ್ದರೆ ಈಗ ಇರಿಸಿಕೊಂಡ ಸಂಖ್ಯಾಗುರಿಗಳೇನು? ಕಳೆದ ಮೂರು ವರ್ಷಗಳಲ್ಲಿ ಇದಕ್ಕೆ ಮೀಸಲಿಟ್ಟ ನಿಧಿ ಎಷ್ಟು? ಈ ಕಾಯ್ದೆಯಿಂದ ಯಾವುದೇ ಅಲ್ಪಸಂಖ್ಯಾತ ಶಾಲೆಗಳಿಗೆ ವಿನಾಯ್ತಿ ನೀಡಲಾಗಿದೆಯೆ?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

6–14 ವಯಸ್ಸಿನ ಒಟ್ಟು 19.88 ಕೋಟಿ ಮಕ್ಕಳು ಶಾಲೆಗಳಲ್ಲಿದ್ದು, ಇವರಲ್ಲಿ 13.79 ಕೋಟಿ ಮಕ್ಕಳು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿದ್ದಾರೆ. ಉಳಿದ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಶೇ. 25ರಷ್ಟು ಶಿಕ್ಷಣಾವಕಾಶವನ್ನು ಶಿಕ್ಷಣ ಪಡೆಯುವ ಹಕ್ಕಿನ ಅಡಿಯಲ್ಲಿ ನೀಡಲಾಗಿದೆ. ಅನುದಾನದ ವಿವರವನ್ನು ನೀಡಲಾಗಿದೆ. ಈ ಕಾಯ್ದೆಯು ಮದ್ರಸಾ, ವೇದ ಪಾಠಶಾಲೆ ಮತ್ತು ಮತ ಸಂಬಂಧಿತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಸರ್ವಶಿಕ್ಷಣ ಅಭಿಯಾನದಡಿ ಹೊಸ ಶಾಲೆಗಳನ್ನು ತೆರೆಯಲು, ಶೌಚಾಲಯಗಳನ್ನು ಸ್ಥಾಪಿಸಲು, ಉಚಿತ ಪಠ್ಯಪುಸ್ತಕ – ಸಮವಸ್ತ್ರ ನೀಡಲು ಕ್ರಮ ತೆಗೆದುಕೊಂಡಿದೆ. ಈ ಕಾಯ್ದೆಯ ಜಾರಿಯನ್ನು ಕಾಲಕಾಲಕ್ಕೆ ಪರಾಮರ್ಶಿಸಲಾಗುತ್ತಿದೆ.

## 7. ಆಹಾರಧಾನ್ಯ ಸಂಗ್ರಹದಲ್ಲಿ ಕುಸಿತ

**ಪ್ರಶ್ನೆ: (ದಿನಾಂಕ 8.7.2014)**

**ಕಳೆದ ಎರಡು ವರ್ಷಗಳಲ್ಲಿ ಮತ್ತು ಈ ವರ್ಷ ಸಂಗ್ರಹಿಸಿದ ಆಹಾರಧಾನ್ಯಗಳ ವಿವರ ಕೊಡಿ. 2014–15ರಲ್ಲಿ ಈ ಸಂಗ್ರಹ ಪ್ರಮಾಣ ಇಳಿಕೆಯಾಗುವ ಸಾಧ್ಯತೆ ಇದೆಯೆ? ಇದ್ದರೆ ವಿವರ ಕೊಡಿ. ಆಂತರಿಕ ಬೇಡಿಕೆ ಪೂರೈಸಿ, ಬೆಲೆ ನಿಯಂತ್ರಣ ಸಾಧಿಸುವಷ್ಟು ಸಂಗ್ರಹ ಇದೆಯೆ? ಇದ್ದರೆ ಈ ಕುರಿತ ವಿವರ ಕೊಡಿ. ಇಲ್ಲವಾದರೆ ಅನುಸರಿಸುವ ಕ್ರಮಗಳೇನು?**

ಉತ್ತರ (ಶ್ರೀ ರಾಮ್‌ವಿಲಾಸ್ ಪಾಸ್ವಾನ್, ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವರು)

## 8. ಅಂಚೆ ವಸ್ತುಗಳ ಬಟವಾಡೆ ವಿಳಂಬ

**ಪ್ರಶ್ನೆ: (ದಿನಾಂಕ 7.7.2014)**

**ಕಳೆದ ಮೂರು ವರ್ಷಗಳಲ್ಲಿ ನೋಂದಾಯಿತ ಪತ್ರ, ಪಾರ್ಸೆಲ್, ಸ್ಪೀಡ್‌ಪೋಸ್ಟ್‌ಗಳ ವಿಳಂಬ ಬಟವಾಡೆ ಕುರಿತ ದೂರುಗಳ ವಿವರ ಕೊಡಿ. ಈ ವಿಳಂಬವನ್ನು ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?**

ಉತ್ತರ (ಶ್ರೀ ರವಿಶಂಕರ ಪ್ರಸಾದ್, ಮಾನ್ಯ ಸಂವಹನ, ಮಾಹಿತಿ ತಂತ್ರಜ್ಞಾನ ಮತ್ತು ಕಾನೂ ಹಾಗೂ ನ್ಯಾಯಿಕ ಸಚಿವರು)



Economic freedom is very important for women empowerment. They must be partners in economic development also. I have seen that women are very good at adapting to latest technology. We should link women and technology up-gradation.

■ Sri Narendra Modi, Prime Minister of India

ರೈಲು/ವಿಮಾನ/ಬಸ್ ವಿಳಂಬದಿಂದಾಗಿ, ಅಸಂಪೂರ್ಣ ವಿಳಾಸಗಳಿಂದಾಗಿ ಮತ್ತು ತಪ್ಪು ರವಾನೆಯಿಂದಾಗಿ ವಿಳಂಬಗಳಾಗುತ್ತಿವೆ. 2010–14ರ ನಾಲ್ಕು ವರ್ಷಗಳಲ್ಲಿ ಕ್ರಮವಾಗಿ ಒಟ್ಟು 271076, 287317, 294389 ಹಾಗೂ 284394 ದೂರುಗಳು ನೋಂದಾಯಿತ ಪತ್ರಗಳ ಕುರಿತು, 18089, 21928, 31822 ಹಾಗೂ 44262 ದೂರುಗಳು ಪಾರ್ಸೆಲ್ ಕುರಿತು ಮತ್ತು 191970,183058, 194003 ಹಾಗೂ 228742 ದೂರುಗಳು ಸ್ಪೀಡ್‌ಪೋಸ್ಟ್ ಕುರಿತು ಬಂದಿವೆ. ಇವುಗಳ ಮೇಲೆ ನಿಯಮಿತ ನಿಗಾ ಇಡಲಾಗಿದೆ. ತೃತೀಯ ಸಂಸ್ಥೆಯಿಂದ ಈ ಕುರಿತು ನಿಗಾ ವಹಿಸಲಾಗಿದೆಯಲ್ಲದೆ ಪೂರ್ವಾಂಚಲ ರಾಜ್ಯಗಳಲ್ಲಿ ಅಂಚೆ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದೆ. ರವಾನೆ ಕುರಿತ ಆನ್‌ಲೈನ್ ಮಾಹಿತಿಯನ್ನೂ ಗ್ರಾಹಕರು ಪಡೆಯಬಹುದಾಗಿದೆ.

## 9. ತೈಲ ಸೋರಿಕೆಗೆ ಪರಿಹಾರ

**ಪ್ರಶ್ನೆ: (ದಿನಾಂಕ 11.8.2014)**

**ರಿಫೈನರಿಗಳು, ಡಿಪೋಗಳು ಮತ್ತು ಪೈಪ್‌ಲೈನ್‌ಗಳಿಂದ ಕಚ್ಚಾ ತೈಲ / ಅನಿಲದ ಸೋರಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದ್ದರೆ ವಿವರ ನೀಡಿರಿ. ಈ ಕುರಿತು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?**

2011ರಿಂದ 2014ರ ಜೂನ್‌ವರೆಗೆ ಹಲವು ಸಾರ್ವಜನಿಕ ತೈಲ ಸಂಸ್ಥೆಗಳು ತಮ್ಮ ರಿಫೈನರಿಗಳು, ಡಿಪೋಗಳು ಮತ್ತು ಪೈಪ್‌ಲೈನ್‌ಗಳಿಂದ ಅನಿಲ ಸೋರಿಕೆ ಇಲ್ಲ ಎಂದು ವರದಿ ಮಾಡಿವೆ; ಆದರೆ ಐಒಸಿಎಲ್ ಮಾತ್ರ ಕಚ್ಚಾ ಅನಿಲ ಸೋರಿಕೆಯ 49 ಪ್ರಕರಣಗಳು ವರದಿಯಾಗಿವೆ ಎಂದಿದೆ. ಈ ಕುರಿತು ಎಫ್‌ಐಆರ್‌ಗಳನ್ನು ಸಲ್ಲಿಸಲಾಗಿದೆ; ಎರಡು ಪ್ರಕಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಅನಧಿಕೃತ ಸೋರಿಕೆಗೆ ಕಾರಣರಾಗುವವರಿಗೆ 10 ವರ್ಷಗಳ ಸೆರೆವಾಸ ಮತ್ತು ದಂಡದ ಶಿಕ್ಷೆ ಇದೆ. ಹೀಗೆಯೇ ಪೈಪ್‌ಲೈನ್‌ಗಳಿಗೆ ಧಕ್ಕೆ ಮಾಡಿ ಬೆಂಕಿಗೆ, ಸ್ಫೋಟಕ್ಕೆ ಕಾರಣರಾಗುವವರಿಗೆ ಕನಿಷ್ಠ 10 ವರ್ಷಗಳ ಶಿಕ್ಷೆ ಅವಕಾಶವಿದೆ. ಇದಲ್ಲದೆ ಐಒಸಿಎಲ್ ಸಂಸ್ಥೆಯು ಅಹರ್ನಿಶಿ ಕಾವಲು ವ್ಯವಸ್ಥೆಯನ್ನೂ ಕೈಗೊಂಡಿದೆ.

## 10. ಬೇಳೆಕಾಳುಗಳ ಆಮದು

**ಪ್ರಶ್ನೆ: (ದಿನಾಂಕ 12.7.2014)**

**ಈ ಸಲದ ಮುಂಗಾರಿನ ಕೊರತೆಯ ಹಿನ್ನೆಲೆಯಲ್ಲಿ ಬೇಳೆಕಾಳುಗಳನ್ನು ಆಮದು ಮಾಡಿಕೊಳ್ಳುವ ಪ್ರಸ್ತಾಪವಿದೆಯೆ? ಹಾಗಿದ್ದರೆ ಉತ್ಪಾದನೆಯ ಕುಸಿತದ ಹಿನ್ನೆಲೆಯಲ್ಲಿ ಬೇಳೆ ಕಾಳು ಮತ್ತು ಇನ್ನಿತರೆ ವಸ್ತುಗಳ ಲಭ್ಯತೆ ಮತ್ತು ಬೆಲೆನಿಯಂತ್ರಣದ ಬಗ್ಗೆ ಕೈಗೊಂಡಿರುವ ಕ್ರಮಗಳೇನು?**

ಉತ್ತರ (ಶ್ರೀ ರಾವ್‌ಸಾಹೇಬ್ ಪಾಟೀಲ್ ದನ್ವೆ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ರಾಜ್ಯ ಸಚಿವರು)

ಇಂಥ ಯಾವ ಪ್ರಸ್ತಾಪವೂ ಸರ್ಕಾರದ ಮುಂದಿಲ್ಲ. ಸರ್ಕಾರವು ಬೇಳೆಕಾಳುಗಳ ಮತ್ತು ಇತರೆ ಅತ್ಯವಶ್ಯ ಪದಾರ್ಥಗಳ ಲಭ್ಯತೆಗಾಗಿ ಹಲವು ಕ್ರಮಗಳನ್ನು ಕೈಗೊಂಡಿದೆ: ಈರುಳ್ಳಿ, ಬೇಳೆ ಕಾಳುಗಳ ಮೇಲಿನ ಆಮದು ಸುಂಕ ಶೂನ್ಯವಾಗಿದೆ; ಖಾದ್ಯ ತೈಲಕ್ಕೆ ಇದು ಶೇ.10ರಷ್ಟಿದೆ. ಆಲೂಗೆಡ್ಡೆಯ ಕನಿಷ್ಠ ರಫ್ತು ಬೆಲೆಯನ್ನು ಟನ್ನಿಗೆ 450 ಡಾಲರ್ ಎಂದು, ಈರುಳ್ಳಿಯ ಬೆಲೆಯನ್ನು 500 ಡಾಲರ್ ಎಂದು ನಿಗದಿಪಡಿಸಲಾಗಿದೆ. ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿದಾರರಿಗೆ ಹೆಚ್ಚುವರಿಯಾಗಿ 50 ಲಕ್ಷ ಟನ್ ಅಕ್ಕಿಯನ್ನು ಬಿಡುಗಡೆ ಮಾಡಲಾಗಿದೆ. ಕಾಳಸಂತೆಕೋರರ ವಿರುದ್ಧ ಕ್ರಮಕ್ಕೆ ರಾಜ್ಯಸರ್ಕಾರಗಳಿಗೆ ಸೂಚಿಸಲಾಗಿದೆ; ಹಣ್ಣು ಮತ್ತು ತರಕಾರಿಗಳನ್ನು ಎಪಿಎಂಸಿ ಕಾಯ್ದೆಯ ಪಟ್ಟಿಯಿಂದ ಹೊರಗೆ ತರಲಾಗಿದೆ.





## 11. ನವೀಕರಿಸಬಹುದಾದ ಇಂಧನ ಮೂಲಗಳ ಅಭಿವೃದ್ಧಿಗೆ ಉತ್ತೇಜಕಗಳು

**ಪ್ರಶ್ನೆ: (ದಿನಾಂಕ 12.7.2014, ಚುಕ್ಕಿಪ್ರಶ್ನೆ)**

**ಹೊಸ ಮತ್ತು ನವೀಕರಿಸಬಹುದಾದ ಇಂಧನಮೂಲಗಳಿಗೆ ಸರ್ಕಾರವು ಹಣಕಾಸು ಮತ್ತಿತರ ಉತ್ತೇಜಕಗಳನ್ನು ನೀಡುವುದೆ? ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳಲ್ಲಿ ಸೌರಶಕ್ತಿ, ಗಾಳಿ ಶಕ್ತಿ, ಬಯೋಗ್ಯಾಸ್ ಮತ್ತು ಮುನಿಸಿಪಲ್ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುತ್ತಿರುವ ಖಾಸಗಿ ಸಂಸ್ಥೆಗಳ ಪಟ್ಟಿ ಕೊಡಿ. ಈ ಕಂಪೆನಿಗಳು ಉತ್ಪಾದಿಸುತ್ತಿರುವ ವಿದ್ಯುತ್ ವಿವರ, ಇವುಗಳಿಗೆ ನೀಡುತ್ತಿರುವ ಸಬ್ಸಿಡಿ ವಿವರಗಳನ್ನು ಕೊಡಿ.**

ಉತ್ತರ: (ಶ್ರೀ ಪೀಯೂಶ್ ಗೋಯೆಲ್, ಮಾನ್ಯ ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ (ಸ್ವತಂತ್ರ ಖಾತೆ) ರಾಜ್ಯ ಸಚಿವರು)

ಖಂಡಿತವಾಗಿಯೂ ಉತ್ಪಾದನಾ ಆಧಾರಿತ ಉತ್ತೇಜಕ, ವಿನಾಯ್ತಿ ಅಬಕಾರಿ ಸುಂಕ, ಕಸ್ಟಮ್ಸ್ ಸುಂಕ ಹೀಗೆ ಹಲವು ಉತ್ತೇಜಕಗಳನ್ನು ನೀಡಲಾಗುತ್ತಿದೆ. ಈ ಕುರಿತು ಅನುಬಂಧಗಳಲ್ಲಿ ವಿವರಗಳನ್ನು ನೀಡಲಾಗಿದೆ. 2011ರಿಂದ 2014ರ ಮೂರು ವರ್ಷಗಳಲ್ಲಿ ಕ್ರಮವಾಗಿ 1301.33, 1196.87 ಮತ್ತು 1569.45 ಕೋಟಿ ರೂ.ಗಳ ಕೇಂದ್ರ ಹಣಕಾಸು ನೆರವು / ಸಬ್ಸಿಡಿಯನ್ನು ನೀಡಲಾಗಿದೆ. 2014ರ ವರ್ಷದ ಜೂನ್ ಹೊತ್ತಿಗೆ 365.55 ಕೋಟಿ ರೂ.ಗಳ ನೆರವನ್ನು ನೀಡಲಾಗಿತ್ತು. 2012ರಿಂದ 2014ರ ವರೆಗೆ ಈ ಖಾಸಗಿ ಸಂಸ್ಥೆಗಳು ಒಟ್ಟು 10000 ಕೋಟಿ ಯುನಿಟ್ ವಿದ್ಯುತ್ತನ್ನು ಉತ್ಪಾದಿಸಿದ್ದವು.

## 12. ಆರೋಗ್ಯ ವ್ಯವಸ್ಥೆ ನಿಯಂತ್ರಣ

**ಪ್ರಶ್ನೆ: (ದಿನಾಂಕ 8 ಆಗಸ್ಟ್ 2014)**

**ಸೆಂಟ್ರಲ್ ಗವರ್ನಮೆಂಟ್ ಹೆಲ್ತ್ ಸ್ಕೀಮ್ ಅಡಿಯಲ್ಲಿ ನೋಂದಾಯಿತವಾದ ಖಾಸಗಿ ಆಸ್ಪತ್ರೆಗಳಲ್ಲಿ ಯಾವುದೇ ಅವ್ಯವಹಾರಗಳು ಕಂಡುಬಂದಿವೆಯೆ? ಅವುಗಳ ವಿವರ ಕೊಡಿರಿ; ಹಲವೆಡೆ ರೋಗಿಯು ಸತ್ತರೂ ಅವರು ಜೀವಂತ ಇದ್ದಾರೆಂದು ಕೋಟಿಗಟ್ಟಲೆ ರೂ.ಗಳನ್ನು ಸುಲಿಗೆ ಮಾಡಿದ ಖಾಸಗಿ ಆಸ್ಪತ್ರೆಗಳ ವಿವರ ಇದೆಯೆ? ಈ ಆಸ್ಪತ್ರೆಗಳ ಬಗ್ಗೆ ಕೈಗೊಂಡ ಕ್ರಮವೇನು?**

ಉತ್ತರ (ಡಾ॥ ಹರ್ಷವರ್ಧನ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ನಿಗದಿತ ಮೊತ್ತಕ್ಕಿಂತ ಹೆಚ್ಚು ಶುಲ್ಕ ವಿಧಿಸಿದ, ಕ್ಯಾಶ್‌ಲೆಸ್ ಚಿಕಿತ್ಸೆ ನಿರಾಕರಣೆ ಮತ್ತು ಸೇರಿಸಿಕೊಳ್ಳುವುದಕ್ಕೆ ತಿರಸ್ಕಾರ – ಈ ಬಗೆಯ ಕೆಲವು ದೂರುಗಳು ಬಂದಿವೆ. ಇಂಥ ಆಸ್ಪತ್ರೆಗಳ ವಿರುದ್ಧ ಶೋಕಾಸ್ ನೋಟೀಸನ್ನು ಜಾರಿಗೊಳಿಸಲಾಗಿದೆ. ರೋಗಿಗಳನ್ನು ಸತ್ತರೂ ಇಟ್ಟುಕೊಂಡ ಬಗ್ಗೆ ವರದಿಯಾಗಿಲ್ಲ. ಹೆಚ್ಚು ಬಿಲ್ ಆದ ಕಡೆಗಳಲ್ಲಿ ಸೂಕ್ಷ್ಮವಾಗಿ ಪರಾಮರ್ಶೆ ಮಾಡಲಾಗುತ್ತಿದೆ.

## 13. ಕಾಡುಗಳ ಶೋಷಣೆ / ದುರ್ಬಳಕೆ

**ದೇಶದ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಪ್ರವಾಸೋದ್ಯಮದ ಹೆಸರಿನಲ್ಲಿ ಕಾಡಿನ ದುರ್ಬಳಕೆ ಆಗುತ್ತಿದೆಯೆ? ಹಾಗಿದ್ದರೆ ಇದಕ್ಕಾಗಿ ತೆಗೆದಿಟ್ಟ ಕಾಡಿನ ಪ್ರಮಾಣ ಎಷ್ಟು? ಅಭಿವೃದ್ಧಿ ಕಾರ್ಯ ಃಆಗೂ ಪರಿಸರ ಪ್ರವಾಸವನ್ನು ಸಮನ್ವಯಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ: ಶ್ರೀ ಪ್ರಕಾಶ್ ಜಾವಡೇಕರ್, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು)



From a chaprasi to Cabinet Secretary, every government servant in competent. We will harness that strength. We want to move forward not on the basis of majority but on consensus.

■ Sri Narendra Modi, Prime Minister of India

ಪರಿಸರ ಪ್ರವಾಸವೂ ಸೇರಿದಂತೆ ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗಳಿಗೆ ಬಳಸುವುದಕ್ಕೆ ಕೇಂದ್ರ ಸರ್ಕಾರದ ಪೂರ್ವಾನುಮತಿ ಅಗತ್ಯವಾಗಿದೆ. ಇದಲ್ಲದೆ ಸಚಿವಾಲಯವು ಪ್ರವಾಸೋದ್ಯಮಕ್ಕೆ ಸೂಕ್ತ ನೀತಿಸಂಹಿತೆಯನ್ನು ಜಾರಿಗೊಳಿಸಿದೆ. ಈ ಕಾಯ್ದೆಯನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ಅರಣ್ಯ ಕಾಯ್ದೆಯ ಅನುಗುಣವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

## 14. ನೆನೆಗುದಿಯಲ್ಲಿರುವ ಜಲ ಯೋಜನೆಗಳು

**ದಕ್ಷಿಣ ಕನ್ನಡದ ಗುಂಡಿಯಾ ಸೇರಿದಂತೆ ಹಲವು ಜಲವಿದ್ಯುತ್ ಯೋಜನೆಗಳು ನೆನೆಗುದಿಯಲ್ಲಿವೆಯೆ? ಈ ಯೋಜನೆಗಳಿಗೆ ಪಾರಿಸರಿಕ ಅನುಮತಿ ಕೋರಿದ ದಿನಾಂಕಗಳನ್ನು ತಿಳಿಸಿರಿ. ಇಂಥ ಯೋಜನೆಗಳಿಗೆ ಅನ್ವಯಿಸುವ ಮಾನದಂಡಗಳೇನು? ಇಂಥ ಯೋಜನೆಗಳ ಅನುಮತಿ ಪ್ರಕ್ರಿಯೆಗೆ ವೇಗ ತರಲು ಕೈಗೊಂಡಿರುವಕ್ರಮಗಳೇನು?**

ಉತ್ತರ: (ಶ್ರೀ ಪೀಯೂಶ್ ಗೋಯೆಲ್, ಮಾನ್ಯ ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ (ಸ್ವತಂತ್ರ ಖಾತೆ) ರಾಜ್ಯ ಸಚಿವರು)

ಗುಂಡಿಯಾ ಸೇರಿದಂತೆ ಒಟ್ಟು 17 ಜಲವಿದ್ಯುತ್ ಯೋಜನೆಗಳಿಗೆ ಪಾರಿಸರಿಕ ಅನುಮತಿ ಸಿಗಬೇಕಿದೆ. ನದೀಕಣಿವೆ ಯೋಜನೆಗಳೂ ಸೇರಿದಂತೆ ಇಂಥ ಯೋಜನೆಗಳಿಗೆ ಪಾರಿಸರಿಕ ಅನುಮತಿ ಬೇಕಾಗುತ್ತದೆ. ಕಳೆದ ಆರು ವರ್ಷಗಳಲ್ಲಿ 1000 ಮೆಗಾವ್ಯಾಟ್‌ಗಿಂತ ಹೆಚ್ಚಿನ ಸಾಮರ್ಥ್ಯದ ದಾಮ್ವೆ ಲೋಯರ್ ಎಚ್‌ಇಪಿ (ಅರುಣಾಚಲ ಪ್ರದೇಶ) ಯೋಜನೆಗೆ ಪಾರಿಸರಿಕ ಅನುಮತಿ ನೀಡಲಾಗಿದೆ. ಈ ಅನುಮತಿ ಪ್ರಕ್ರಿಯೆಯನ್ನು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರವು ಗಮನಿಸುತ್ತಿದ್ದು ಸಚಿವಾಲಯದ ಅಧಿಕಾರಿಗಳೊಂದಿಗೆ ನಿಯಮಿತ ಚರ್ಚೆ ನಡೆಸುತ್ತಿದೆ.

## 15. ಸಾಗಾಣಿಕೆ ತಂತಿಗಳ ಸಾಮರ್ಥ್ಯ

**ಪ್ರಶ್ನೆ: (ದಿನಾಂಕ 7 ಆಗಸ್ಟ್ 2014)**

**ಈಗಿರುವ ವಿದ್ಯುತ್ ಸಾಗಾಣಿಕಾ ತಂತಿಗಳ ಸಾಮರ್ಥ್ಯ ಎಷ್ಟು? ಇವೆಲ್ಲವುಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸುವ ಯೋಜನೆ ಇದೆಯೆ? ಹೆಚ್ಚುವರಿ ವಿದ್ಯುತ್ತನ್ನು ಕೊರತೆ ಇರುವ ರಾಜ್ಯಗಳಿಗೆ ರವಾನಿಸುವ ಯೋಜನೆಗಳೇನು? ಗುಜರಾತ್ ಸರ್ಕಾರವು ಸಲಹೆ ನೀಡಿದಂತೆ ಅಂತರ್‌ರಾಜ್ಯ ಸಾಗಾಣಿಕೆ ಕೊಂಡಿಗಳ ಸ್ಥಾಪನೆಗೆ ಪವರ್ ಸಿಸ್ಟಂ ಅಭಿವೃದ್ಧಿ ನಿಧಿ (ಪಿಎಸ್‌ಡಿಎಫ್)ನ್ನು ಬಳಸಿಕೊಳ್ಳುವ ಉದ್ದೇಶವಿದೆಯೆ?**

ಉತ್ತರ: (ಶ್ರೀ ಪೀಯೂಶ್ ಗೋಯೆಲ್, ಮಾನ್ಯ ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ (ಸ್ವತಂತ್ರ ಖಾತೆ) ರಾಜ್ಯ ಸಚಿವರು)

220 ಕೆವಿ ವೋಲ್ಟೇಜ್ ಸಾಮರ್ಥ್ಯದ ಲೆಕ್ಕದಲ್ಲಿ ಒಟ್ಟಾರೆ ದಶವು ಜೂನ್ 30, 2014ರ ಹೊತ್ತಿಗೆ 2,94,621 ಸರ್ಕ್ಯೂಟ್ ಕಿಮೀ ಉದ್ದದ ತಂತಿಗಳನ್ನು ಹೊಂದಿದೆ. ಕೇಂದ್ರ ವಿದ್ಯುತ್ ಪ್ರಾಧಿಕಾರದ ಅನುಮತಿ ಇದ್ದಲ್ಲೆಲ್ಲ ಇವುಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಕೆಲವೆಡೆ ಸಂಪೂರ್ಣ ಬಳಕೆಯನ್ನು ನಿರ್ಬಂಧಿಸಬೇಕಿದೆ. ಈಗ ವಿವಿಧ ರಾಜ್ಯಗಳಿಗೆ ದೀರ್ಘಾವಧಿ ನಿಗದಿತ ವಿದ್ಯುತ್ತನ್ನು ಸರಬರಾಜು ಮಾಡಲುಯಾವುದೇ ಸಮಸ್ಯೆಯೂ ಇಲ್ಲ. ಆದರೆ ಶಾರ್ಟ್ ಟರ್ಮ್ ಮಾರುಕಟ್ಟೆಯಲ್ಲಿ ಗುಜರಾತಿನಿಂದ ಇತರೆ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಮಾಡಲು ದಟ್ಟಣೆಯ ಸಮಸ್ಯೆ ಇರುವುದು ನಿಜ. ಗುಜರಾತ್ ಸರ್ಕಾರವು ಪಿಎಸ್‌ಡಿಎಫ್ ನಿಧಿಯನ್ನು ಬಳಸಿಕೊಳ್ಳಲು ವಿನಂತಿಸಿಕೊಂಡಿದೆ. ಪಿಎಸ್‌ಡಿಎಫ್‌ನ್ನು ಬಳಸಿಕೊಳ್ಳುವ ಕುರಿತು ಯೋಜನೆಯನ್ನು ವಿದ್ಯುತ್ ಸಚಿವಾಲಯವು ಪ್ರಕಟಿಸಿದೆ.





## 16. ರಸ್ತೆ ಸಾಗಾಟ ಮತ್ತು ಹೆದ್ದಾರಿಗಳು

**ಕೇಂದ್ರ ಸರ್ಕಾರವು ಈಗಿರುವ ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ (ಪಿಪಿಪಿ) ಯೋಜನೆಯ ಬದಲಿಗೆ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ (ಇಪಿಸಿ) ಯೋಜನೆಯಲ್ಲಿ ಹೆದ್ದಾರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಪ್ರಸ್ತಾಪ ಇದೆಯೆ? ಇದ್ದರೆ ವಿವರಗಳನ್ನು ಕೊಡಿ. 260 ರಸ್ತೆ ಯೋಜನೆಗಳು ನಿಂತಿದ್ದರಿಂದಲೇ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ ನಿಷ್ಕ್ರಿಯ ಆಸ್ತಿಯ ಪ್ರಮಾಣ ಹೆಚ್ಚಳವಾಗಿರುವುದು ನಿಜವೆ? ಈ ನಿಂತ ಯೋಜನೆಗಳನ್ನು ಪರಾಮರ್ಶಿಸಲು ಸರ್ಕಾರವು ನಿರ್ಧರಿಸಿದೆಯೆ? ಲಡಾಖ್, ಲೇಹ್, ಪೂರ್ವಾಂಚಲ ರಾಜ್ಯಗಳು, ಉತ್ತರಾಖಂಡ, ಹಿಮಾಚಲ ಪ್ರದೇಶ ಮತ್ತು ಛತ್ತೀಸ್‌ಗಢದಲ್ಲಿ ಹೊಸ ರಸ್ತೆಗಳ ನಿರ್ಮಾಣ ಕೈಗೊಳ್ಳಲಾಗುತ್ತಿದೆಯೆ?**

ಉತ್ತರ (ಶ್ರೀ ಕೃಷ್ಣಪ್ರಸಾದ್ ಗುರ್ಜರ್, ಮಾನ್ಯ ಭೂಸಾರಿಗೆ ಮತ್ತು ಹೆದ್ದಾರಿಗಳ ರಾಜ್ಯ ಸಚಿವರು)

50 ಕೋಟಿ ರೂ.ಗಳಿಗಿಂತ ಹೆಚ್ಚಿನ ಮೊತ್ತದ ಎಲ್ಲಾ ಯೋಜನೆಗಳನ್ನು ಇಪಿಸಿ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರವು ನಿರ್ಧರಿಸಿದೆ. ಹಲವು ರಸ್ತೆ ಯೋಜನೆಗಳು ನಿಂತಿದ್ದರಿಂದ ನಿಷ್ಕರಿಯ ಆಸ್ತಿ ಪ್ರಮಾಣವು ಹೆಚ್ಚಾಗಿದೆ. ಈ ಯೋಜನೆಗಳಿಗೆ ರಭಸ ನೀಡಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಇದಕ್ಕಾಗಿ ಉನ್ನತ ಮಟ್ಟದ ತಜ್ಞ ಸೆಟಲ್‌ಮೆಂಟ್ ಸಲಹಾ ಸಮಿತಿಯನ್ನು ರಚಿಸಲಾಗಿದೆ. ಗುತ್ತಿಗೆ ಪಡೆದ ಮೊತ್ತದ ಹಣವು ಸುಭದ್ರ ಎಂದು ಪರಿಗಣಿಸಲು ಹೂಡಿಕೆ ರಂಗವನ್ನು ಮುಕ್ತಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ (ಮೂಲ) ಯೋಜನೆಯಡಿಯಲ್ಲಿ ನೀವು ಉಲ್ಲೇಖಿಸಿದ ಪ್ರದೇಶಗಳಲ್ಲಿ ವಿವಿಧ ಬಗೆಯ ರಸ್ತೆಗಳ ನಿರ್ಮಾಣವನ್ನು ತೆಗೆದುಕೊಳ್ಳಲಾಗಿದೆ.

## 17. ಕಡಿಮೆ ವೆಚ್ಚದ ಟರ್ಮಿನಲ್‌ಗಳ ಸ್ಥಾಪನೆ

**ಪ್ರಶ್ನೆ: (ದಿನಾಂಕ 21 ಜುಲೈ 2014)**

**ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ನಿಯಂತ್ರಣದಲ್ಲಿ ಇರುವ ಕಾರ್ಯಾಚರಣಸಹಿತ/ರಹಿತ ವಿಮಾನ ರನ್‌ವೇಗಳ ಪಟ್ಟಿಯನ್ನು ಕೊಡಿ. ದಿಲ್ಲಿ, ಮುಂಬಯಿ, ಬೆಂಗಳೂರು ಸೇರಿದಂತೆ ಹಲವು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ರನ್‌ವೇಗಳನ್ನು ದುರಸ್ತಿ ಮಾಡುವ ಅಗತ್ಯ ಇದೆಯೆ? ದೇಶದೆಲ್ಲೆಡೆ ಹೆಚ್ಚಿನ ಪ್ರಮಾಣದ ವಿಮಾನ ಸಂಪರ್ಕ ಸಾಧಿಸಲು ಅತಿ ಕನಿಷ್ಠ ಸೌಲಭ್ಯದ ವಿಮಾನ ಟರ್ಮಿನಲ್‌ಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆಯೆ? ಇದ್ದರೆ ಇವುಗಳ ವಿವರಗಳನ್ನು ನೀಡಿರಿ**

ಉತ್ತರ (ಶ್ರೀ ಜಿ.ಎಂ. ಸಿದ್ದೇಶ್ವರ, ನಾಗರಿಕ ವಿಮಾನಯಾನ ರಾಜ್ಯ ಸಚಿವರು)

ದೇಶದಲ್ಲಿ ಈಗ ಎಲ್ಲಾ ಬಗೆಯ ವಿಮಾನ ನಿಲ್ದಾಣಗಳು, ರನ್‌ವೇಗಳು, ರಾಜ್ಯ ಸರ್ಕಾರಕ್ಕೆ, ಸೇನೆಗೆ ಸೇರಿದ ನಿಲ್ದಾಣಗಳು ಸೇರಿದಂತೆ ಒಟ್ಟು 476 ಟರ್ಮಿನಲ್‌ಗಳಿವೆ. ದೇಶದ ಯಾವುದೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇಗಳಿಗೆ ಈಗ ದುರಸ್ತಿಯ ಅಗತ್ಯ ಇಲ್ಲ. ಆದರೆ ಚೆನ್ನೈ ಮತ್ತು ಕೋಲ್ಕತಾಗಳ ರನ್‌ವೇಗಳಿಗೆ ಮರುಹೊದಿಕೆ ನೀಡಲು ನಿರ್ಧರಿಸಿದೆ.

ಸರ್ಕಾರವು ಒಟ್ಟು 50 ಪ್ರದೇಶಗಳಲ್ಲಿ ಪ್ರಾದೇಶಿಕ ವಿಮಾನ ಸಂಪರ್ಕ ಏರ್ಪಡಿಸಲು ನಿರ್ಧರಿಸಿದೆ: ಆಂಧ್ರಪ್ರದೇಶದ ಕಡಪ, ತಿರುಪತಿ, ವಿಜಯವಾಡ, ವಾರಂಗಲ್; ಅರುಣಾಚಲ ಪ್ರದೇಶದ ಅಲೋಂಗ್, ದಾಪಾರಿಜೋ, ಪಸಿಘಾಟ್ ಮತ್ತು ತೇಜು; ಅಸಾಂನ ಜೋರ್ಹತ್, ರೂಪಸ್‌ಇ, ಸಿಲ್ಚಾರ್, ಬಿಹಾರದ ಗಯಾ ಮತ್ತು ರಕ್ಸೌಲ್, ಛತ್ತೀಸ್‌ಗಢದ ಬಿಲಾಸ್‌ಪುರ ಮತ್ತು ರಾಯಗಢ, ದಮನ್, ದಿಯು, ಗುಜರಾತಿನ ಭಾವನಗರ, ಜಾಮನಗರ, ಕಾಂಡ್ಲಾ, ಕೆಶೋಡ್; ಹರ್ಯಾನಾದ ಹಿಸ್ಸಾರ್ ಮತ್ತು ಕರ್ನಾಲ್, ಜಮ್ಮು ಮತ್ತು ಕಾಶ್ಮೀರದ ಕಿಶ್ತ್‌ವಾರ್, ಜಾರ್ಖಂಡದಲ್ಲಿ ದೇವ್‌ಗಢ, ಜಮಶೇಡ್‌ಪುರ; ಕರ್ನಾಟಕದ ಹುಬ್ಬಳ್ಳಿ ಮತ್ತು ಬೆಳಗಾವಿ, ಮಧ್ಯಪ್ರದೇಶದಲ್ಲಿ ಗ್ವಾಲಿಯರ್, ಜಬಲ್‌ಪುರ ಮತ್ತು ರೇವಾ; ಮಹಾರಾಷ್ಟ್ರದ ಅಕೋಲಾ, ಅಮರಾವತಿ, ಜಲಗಾಂವ್, ಕೊಲ್ಹಾಪುರ ಮತ್ತು ಸೋಲಾಪುರ; ಒರಿಸ್ಸಾದ ಜರ್ಸುಗುಡ, ಪಂಜಾಬಿನ ಲೂಧಿಯಾನ, ರಾಜಾಸ್ಥಾನದ



I want to ask every mother and father, you ask your daughters 'where are you going, who are you going with'. But do you ever ask your sons these questions? I appeal to the doctors not to kill the girl-child in the mother's womb. I request the parents not to kill the girl-child because they want a son.

■ Sri Narendra Modi, Prime Minister of India

ಬಿಕಾನೇರ್, ಕಿಶನ್‌ಗಢ, ಕೋಟ, ತಮಿಳುನಾಡಿನ ತಂಜಾವೂರು ಮತ್ತು ಉತ್ತರ ಪ್ರದೇಶದ ಆಗ್ರಾ, ಅಲಹಾಬಾದ್, ಬರೇಲಿ, ಫೈಜಾಬಾದ್, ಕಾನ್ಪುರ, ಮೇರಠ್, ಮೊರಾದಾಬಾದ್ ಮತ್ತು ಶಹರನ್‌ಪುರ. ಆಯಾ ರಾಜ್ಯಗಳಲ್ಲಿ ಸಿಗುವ ಭೂಪ್ರದೇಶ ಹಾಗೂ ಸಂಚಾರ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಇವುಗಳ ಅಭಿವೃದ್ಧಿ ಮಾಡಲಾಗುವುದು.

## 18. ವಿಶಿಷ್ಟ ಗುರುತಿನ ಚೀಟಿಯ ವಿಷಯಗಳು

**ಪ್ರಶ್ನೆ: (ದಿನಾಂಕ 1 ಆಗಸ್ಟ್ 2014)**

**ವಿಶಿಷ್ಟ ಆಧಾರ್ ಕಾರ್ಡ್ (ಯುಐಡಿ) ಕಾರ್ಡುಗಳ ವಿತರಣೆ ಕುರಿತಂತೆ ಯಾವುದೇ ದೂರುಗಳು ಬಂದಿವೆಯೆ? ಇದ್ದರೆ ವಿವರಗಳನ್ನು ಕೊಡಿ. ಈ ದೂರುಗಳ ನಿರ್ವಹಣೆಗೆ ಇರುವ ವ್ಯವಸ್ಥೆಯ ವಿವರಗಳನ್ನು ಒದಗಿಸಿ. ಕಾರ್ಡುಗಳಲ್ಲಿ ಇರುವ ತಪ್ಪುಗಳನ್ನು ಸರಿಪಡಿಸಲು ಇರುವ ನಿಯಮಾವಳಿಗಳೇನು?**

ಉತ್ತರ (ಶ್ರೀ ರಾವ್ ಇಂದರ್‌ಜಿತ್ ಸಿಂಗ್, ಮಾನ್ಯ ಯೋಜನೆ, ಅಂಕಿಅಂಶ ಮತ್ತು ಕಾರ್ಯಕ್ರಮ ಜಾರಿ, ರಕ್ಷಣೆ ಇಲಾಖೆಗಳ ರಾಜ್ಯ ಸಚಿವರು)

ಆಧಾರ್ ಕಾಡ್‌ನಲ್ಲಿ ಇರುವ ಲೋಪಗಳನ್ನು ಸರಿಪಡಿವು ಬಗ್ಗೆ 18003001947 ಎಂಬ ಶುಲ್ಕರಹಿತ ದೂರವಾಣಿಯನ್ನು ಸ್ಥಾಪಿಸಲಾಗಿದೆ. ಅಲ್ಲದೆ help@uidai.gov.in ಇದಕ್ಕೆ ಈಮೈಲ್ ಕೂಡಾ ಮಾಡಬಹುದಾಗಿದೆ. ದೇಶದಲ್ಲಿ ಎಂಟು ಪ್ರಾದೇಶಿಕ ಕೇಂದ್ರಗಳಿವೆ.

ಯಾವುದೇ ಲೋಪಗಳಿದ್ದರೆ 96 ಗಂಟೆಗಳಲ್ಲಿ ಅದನ್ನು ಸರಿಪಡಿಸುವ ವ್ಯವಸ್ಥೆಯನ್ನು ಆಧಾರ್ ಕಾರ್ಡ್ ವ್ಯವಸ್ಥೆಯು ಹೊಂದಿದೆ. ನಾಗರಿಕರು ಆನ್‌ಲೈನ್‌ನಲ್ಲಿ ಅವರೇ ಸರಿಪಡಿಸಬಹುದು ಅಥವಾ ಖಾಯಂ ಎನ್‌ರೋಲ್‌ಮೆಂಟ್ ಕೇಂದ್ರಗಳಲ್ಲೂ ಸರಿಪಡಿಸಬಹುದು. ಈವರೆಗೆ ಒಟ್ಟು 37,34,584 ತಿದ್ದುಪಡಿಗಳನ್ನು ಮತ್ತು 22,61,830 ಮಾಹಿತಿ ತತ್‌ಸಾಮಯಿಕಗೊಳಿಸುವುದನ್ನು ಮಾಡಲಾಗಿದೆ.

## 19. ಸಾವಯವ ಕೃಷಿ ಕುರಿತ ಪೈಲಟ್ ಯೋಜನೆ

**ಪ್ರಶ್ನೆ: (ದಿನಾಂಕ 5 ಆಗಸ್ಟ್ 2014)**

**ದೇಶದಲ್ಲಿ ಈಗ ಸಾವಯವ ಕೃಷಿಗೆ ಒಳಪಟ್ಟಿರುವ ಪ್ರದೇಶದ ವಿವರಗಳನ್ನು ಒದಗಿಸಿರಿ. ಸಾವಯವ ಕೃಷಿ ರಂಗದಲ್ಲಿ ಸರ್ಕಾರವು ಯಾವುದೇ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಂಡಿದೆಯೆ? ಅವುಗಳ ವಿವರ ನೀಡಿರಿ. ಕರ್ನಾಟಕದ ಸಾವಯವ ಕೃಷಿ ತಜ್ಞರು ಸರ್ಕಾರಕ್ಕೆ ತಮ್ಮ ನಿರೂಪಣೆಯನ್ನು ನೀಡಿದ್ದಾರೆಯೆ? ದೇಶದ ಇತರೆ ಪ್ರದೇಶಗಳಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸಲು ಮತ್ತು ಸಾವಯವ ಕೃಷಿ ಉತ್ಪನ್ನಗಳ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದೆಯೆ?**

ಉತ್ತರ (ಡಾ॥ ಸಂಜೀವ್‌ಕುಮಾರ್ ಬಲ್ಯಾನ್, ಮಾನ್ಯ ಕೃಷಿ ಮತ್ತು ಆಹಾರ ಸಂಸ್ಕರಣೆ ಉದ್ಯಮದ ರಾಜ್ಯ ಸಚಿವರು)

ದೇಶದ ಎಲ್ಲ ರಾಜ್ಯಗಳನ್ನೂ ಸೇರಿಸಿದರೆ ಒಟ್ಟು 4719816.28 ಹೆಕ್ಟೇರುಗಳಲ್ಲಿ ಸಾವಯವ ಕೃಷಿ ನಡೆಯುತ್ತಿದೆ. ಐಸಿಎಆರ್ ಸಂಸ್ಥೆಯು ದೇಶದ ವಿವಿಧ ಕೃಷಿ ಪಾರಿಸರಿಕ ಪ್ರದೇಶಗಳಲ್ಲಿ ಸಾವಯವ ಕೃಷಿಯ ಬಗ್ಗೆ ವಿಧಾನಗಳನ್ನು ರೂಪಿಸುವ ಬಗ್ಗೆ ಸಂಶೋಧನೆಗಳನ್ನು ಕೈಗೊಂಡಿದೆ. ಈಗ ಯೋಜನೆಯು 13 ಸಹಕಾರಿ ಕೇಂದ್ರಗಳಲ್ಲಿ ನಡೆಯುತ್ತಿದೆ. ಬಾಸಮತಿ ಅಕ್ಕಿ, ಮಳೆನೀರಿನ ಗೋಧಿ, ಮೆಕ್ಕೆಜೋಳ, ಕಡಲೆಬೇಳೆ, ಬಟಾಣಿ, ಸೋಯಾ, ನೆಲಗಡಲೆ, ಸಾಸಿವೆ, ಇಸಬಗೋಲ್, ಕರಿಮೆಣಸು, ಶುಂಠಿ, ಟೊಮ್ಯಾಟೋ, ಕೋಸು ಮತ್ತು ಗೆಡ್ಡೆಕೋಸು ಕುರಿತ ಸಾವಯವ ಕೃಷಿ ವಿಧಾನಗಳನ್ನು ರೂಪಿಸಲಾಗಿದೆ.

ಕರ್ನಾಟಕದ ತಂಡವು ಸಾವಯವ ಕೃಷಿ ಕುರಿತು ನಿರೂಪಣೆ ನೀಡಿದೆ. ಹಲವು ಯೋಜನೆಗಳ ಮುಖಾಂತರ ಸರ್ಕಾರವು



ಸಾವಯವ ಕೃಷಿಗೆ ಪ್ರೋತ್ಸಾಹ ನೀಡುತ್ತಿದೆ.

## 20. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅನ್ವೇಷಣೆಗೆ ಪ್ರೋತ್ಸಾಹ

**ಪ್ರಶ್ನೆ: (ದಿನಾಂಕ 30 ಜುಲೈ 2014)**

**ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನವೋನ್ವೇಷಣೆಗೆ ಪ್ರೋತ್ಸಾಹ ನೀಡುವುದಕ್ಕೆ ಸಾಂಸ್ಥಿಕ ಚೌಕಟ್ಟನ್ನು ಸ್ಥಾಪಿಸಿದೆಯೆ? ಹಾಗಿದ್ದರೆ ವಿವರಗಳನ್ನು ಒದಗಿಸಿ. ಈ ಅನ್ವೇಷಣೆಗಳನ್ನು ತಂತ್ರಜ್ಞಾನ ಅಥವಾ ಉತ್ಪನ್ನವಾಗಿ ಮಾಡುವುದರಲ್ಲಿ ಸರ್ಕಾರವು ಸಾಧಿಸಿದ ಅಂಶಗಳೇನು? ಈ ಕುರಿತ ಸಹಭಾಗಿತ್ವದ ಯೋಜನೆಗಳಿವೆಯೆ?**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಭೂವಿಜ್ಞಾನ, ಪ್ರಧಾನಮಂತ್ರಿಯವರ ಕಚೇರಿ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಖಾತೆಗಳ ರಾಜ್ಯ ಸಚಿವರು)

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನವೋನ್ವೇಷಣೆಗಳಿಗೆ ಪ್ರೋತ್ಸಾಹ ನೀಡಲು ಭಾರತ ಸರ್ಕಾರವು ನ್ಯಾಶನಲ್ ಇನ್ನೋವೇಶನ್ ಫಂಡ್ ಸ್ಥಾಪಿಸಿದೆ. ತಳಮಟ್ಟದ ಸಂಶೋಧಕರಿಗೆ ಇದು ಬೆಂಬಲ ನೀಡುತ್ತಿದೆ. ಇದಲ್ಲದೆ ತಂತ್ರಜ್ಞಾನ ಅಭಿವೃದ್ಧಿ ಮಂಡಳಿಯು ತಂತ್ರಜ್ಞಾನಗಳನ್ನು ಜಾರಿಗೆ ತರುವಲ್ಲಿ ಹಣಕಾಸಿನ ನೆರವನ್ನು ನೀಡುತ್ತದೆ. ಬಯೋಟೆಕ್ನಾಲಜಿ ಇಲಾಖೆಯು ಲಾಭರಹಿತ ಬಯೋಟೆಕ್ನಾಲಜಿ ಇಂಡಸ್ಟ್ರಿ ರಿಸರ್ಚ್ ಅಸಿಸ್ಟನ್ಸ್ ಕೌನ್ಸಿಲ್‌ನ್ನು ಸ್ಥಾಪಿಸಿ ಉದ್ಯಮಕ್ಕೆ ಬೆಂಬಲ ನೀಡುತ್ತಿದೆ. ಸರ್ಕಾರವು ಹೀಗೆ ಸಾಕಷ್ಟು ಬೌದ್ಧಿಕ ಹಕ್ಕುಸ್ವಾಮ್ಯವನ್ನು  ರೂಪಿಸಿದೆ. ಎನ್‌ಐಎಫ್ ಈವರೆಗೆ 70 ತಂತ್ರಜ್ಞಾನ ಪರವಾನಗಿಯನ್ನು ನೀಡಿದೆ. ನ್ಯಾನೋಟೆಕ್ನಾಲಜಿ ಬಳಸಿ ನೀರಿನ ಶುದ್ಧೀಕರಣ, ಕರಷ್ನಗಿರಿ ಮಾವಿನಹಣ್ಣುಗಳ ಕಾಲಾವಧಿಯನ್ನು 7ರಿಂದ 35 ದಿನಗಳಿಗೆ ಹೆಚ್ಚಿಸಿದ್ದು, ಹೋಲೋಗ್ರಾಫಿಕ್ ಪಲ್ಸಡ್ ಪೋರ್ಟ್‌ರೈಟ್ ಕ್ಯಾಮೆರಾ, ಪರಿಸರ ಸ್ನೇಹಿ ಮುದ್ರಣ ಇಂಕು – ಇವುಗಳನ್ನು ಇಲ್ಲಿ ಉದಾಹರಿಸಬಹುದು. ಅನ್ವೇಷಣೆ ಮತ್ತು ತಂತ್ರಜ್ಞಾನಗಳನ್ನು ಸಂಶೋಧಿಸುವ ಹಿನ್ನೆಲೆಯಲ್ಲಿ ಸರ್ಕಾರವು ಹಲವು ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಹೊಂದಿದೆ.

## 21. ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳು

**ಪ್ರಶ್ನೆ: (ದಿನಾಂಕ 31 ಜುಲೈ 2014)**

**ಸರ್ಕಾರವು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳನ್ನು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ವರ್ಗಾಯಿಸುವುದಕ್ಕೆ ರಾಜ್ಯ ಸರ್ಕಾರಗಳಿಗೆ ಒತ್ತಾಯಿಸಿದೆಯೆ? ಹಾಗಿದ್ದರೆ ವಿವರಗಳನ್ನು ಒದಗಿಸಿರಿ. ಅನಂತರ ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀ ಉಪೇಂದ್ರ ಕುಶಹವಾ, ಮಾನ್ಯ ಕುಡಿಯುವ ನೀರು ಮತ್ತು ನೈರ್ಮಲ್ಯ ರಾಜ್ಯ ಸಚಿವರು)

ಹೌದು. ಗ್ರಾಮೀಣ ಕುಡಿಯುವ ನೀರಿನ ಒಟ್ಟು 5889797 ಯೋಜನೆಗಳನ್ನು ಗ್ರಾಮಪಂಚಾಯತ್‌ಗಳಿಗೆ ವಹಿಸಿಕೊಡಲಾಗಿದೆ. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (ಎನ್‌ಆರ್‌ಡಿಡಬ್ಲ್ಯುಪಿ) ಯೋಜನೆಯಡಿಯಲ್ಲಿ ರಾಜ್ಯಸರ್ಕಾರಗಳಿಗೆ ಈ ಹಸ್ತಾಂತರಕ್ಕಾಗಿ ಉತ್ತೇಜನಗಳನ್ನು ನೀಡಲಾಗಿದೆ. ವಿಕೇಂದ್ರೀಕರಣವನ್ನು ಅನುಸರಿಸುವ ರಾಜ್ಯಗಳಿಗೆ ನಿಧಿ ನಿಗದಿಪಡಿಸುವಲ್ಲಿ ಶೇ. 10ರಷ್ಟು ಹೆಚ್ಚಿನ ವೈಟೇಜ್ ನೀಡಲಾಗುವುದು.

## 22. ಕಿರು ಅರಣ್ಯ ಉತ್ಪನ್ನಗಳು

**ಪ್ರಶ್ನೆ: (ದಿನಾಂಕ 18 ಜುಲೈ 2014)**

**ದೇಶದಲ್ಲಿ ಕಿರು ಅರಣ್ಯ ಉತ್ಪನ್ನಗಳನ್ನು ನಿಯಂತ್ರಿಸಲು ಸರ್ಕಾರವು ಕೈಗೊಂಡ ಯೋಜನೆಗಳ ವಿವರಗಳನ್ನು ಒದಗಿಸಿರಿ. ಈ**



Come, Make in India. I invite our youth involved in manufacturing to ensure that all over the world, products say 'Made in India'. We import electronic goods, but if we start manufacturing these, it will benefit the country.

■ Sri Narendra Modi, Prime Minister of India

**ಪಟ್ಟಿಯಡಿಯಲ್ಲಿ ಇನ್ನೂ ಹಲವು ಉತ್ಪನ್ನಗಳನ್ನು ಸೇರಿಸಲು ಸರ್ಕಾರವು ಬಯಸಿದೆಯೆ? ಇದ್ದರೆ ವಿವರಗಳನ್ನು ಒದಗಿಸಿರಿ.**

ಉತ್ತರ (ಶ್ರೀ ಮನಸುಖಬಾಯ್ ಧಾಂಜಿಬಾಯ್ ಮೆಹ್ತಾ, ಮಾನ್ಯ ಗುಡ್ಡಗಾಡು ವ್ಯವಹಾರಗಳ ರಾಜ್ಯ ಸಚಿವರು)

ಈ ಸಚಿವಾಲಯವು ಕಿರು ಅರಣ್ಯ ಉತ್ಪನ್ನಗಳ ಕುರಿತಂತೆ ರಾಜ್ಯ ಸರ್ಕಾರಗಳಿಗೆ ಎಸ್‌ಟಿಡಿಸಿಸಿ ಕಾರ್ಯಾಚರಣೆ ಮತ್ತು ಕನಿಷ್ಠ ಬೆಂಬಲ ಬೆಲೆಗೆ ನೆರವಿನ ಅನುದಾನವನ್ನು ನೀಡುತ್ತಿದೆ. ಇನ್ನೂ ಹೆಚ್ಚಿನ ಉತ್ಪನ್ನಗಳನ್ನು ಈ ಪಟ್ಟಿಗೆ ಸೇರಿಸುವ ಪ್ರಸ್ತಾಪವು ಸರ್ಕಾರದ ಮುಂದೆ ಇಲ್ಲ. ಪರಿಶಿಷ್ಟ ವರ್ಗದ ಮತ್ತು ಇತರೆ ಸಾಂಪ್ರದಾಯಿಕ ಕಾಡು ಅಲೆಮಾರಿಗಳು ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ವಿವಿಧ ಕಾಯ್ದೆಗಳ ಮೂಲಕ ಅನುಮತಿ ನೀಡಲಾಗಿದೆ.

## 23. ರಕ್ಷಣಾ ಸಾಮಗ್ರಿಗಳ ಖರೀದಿ

**ಪ್ರಶ್ನೆ: (ದಿನಾಂಕ 18 ಜುಲೈ 2014)**

**ರಕ್ಷಣಾ ಸಾಮಗ್ರಿಗಳ ಖರೀದಿಯಲ್ಲಿ ಭಾರೀ ವಿಳಂಬ ಆಗಿದೆಯೆ? ಆಗಿದ್ದರೆ ಅದಕ್ಕೆ ಕಾರಣಗಳೇನು? ಇಂಥ ಖರೀದಿಗಳನ್ನು ತ್ವರಿತಗತಿಯಲ್ಲಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು? ರಕ್ಷಣಾ ಸಾಮಗ್ರಿ ಖರೀದಿಯಲ್ಲಿ ಪಾರದರ್ಶಕತೆ ತರಲು ಮಾಡಿರುವ ಪ್ರಯತ್ನಗಳೇನು?**

ಉತ್ತರ: (ಶ್ರೀ ಅರುಣ್ ಜೈಟ್ಲಿ, ಮಾನ್ಯ ರಕ್ಷಣಾ ಸಚಿವರು)

ರಕ್ಷಣಾ ಸಾಮಗ್ರಿ ಖರೀದಿ ನಿಯಮಾವಳಿಗಳ ಪ್ರಕಾರವೇ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ. ಇಲ್ಲಿ ಗರಿಷ್ಠ ಮಟ್ಟದ ಪಾರದರ್ಶಕತೆ, ಹೊಣೆಗಾರಿಕೆ ಇರುತ್ತದೆ. ಇದಲ್ಲದೆ ತುರ್ತು ಖರೀದಿಗಾಗಿ ಫಾಸ್ಟ್ ಟ್ರಾಕ್ ಖರೀದಿ ಪ್ರಾವಧಾನವೂ ಇದೆ. 10 ಲಕ್ಷ ರೂ. ಮೇಲ್ಪಟ್ಟ ಯಾವುದೇ ರಕ್ಷಣಾ ಸಾಮಗ್ರಿಯನ್ನು ಇ–ಪ್ಲಾಟ್‌ಫಾರಂ ಮೂಲಕವೇ ಖರೀದಿಸಬೇಕೆಂಬ ಬಗ್ಗೆ ಯಾವುದೇ ನಿರ್ಣಯವನ್ನೂ ತೆಗೆದುಕೊಳ್ಳಲಾಗಿಲ್ಲ.

## 24. ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು

**ಪ್ರಶ್ನೆ: (ದಿನಾಂಕ 18 ಜುಲೈ 2014)**

**ಕಳೆದ ಮೂರು ವರ್ಷ ಮತ್ತು ಈ ವರ್ಷ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳಿಂದ ಉಂಟಾದ ಸಾವುಗಳ ಅಂಕಿಅಂಶಗಳನ್ನು ಒದಗಿಸಿರಿ. ಇವುಗಳ ನಿರ್ವಹಣೆಗೆ ಕೈಗೊಂಡ ಕ್ರಮಗಳು ಹಾಗೂ ತೆಗೆದಿರಿಸಿದ ನಿಧಿಗಳ ಬಗ್ಗೆ ಮಾಹಿತಿ ನೀಡಿರಿ. ಈ ಕುರಿತು ವಿದೇಶಿ ನೆರವು ಪಡೆದಿದ್ದರೆ ಅವುಗಳ ವಿವರಗಳನ್ನು ನೀಡಿರಿ. ಈಗಿರುವ ವ್ಯವಸ್ಥೆಯು ರೋಗ ನಿರ್ವಹಣೆಗೆ ಸಾಕಾಗುತ್ತದೆಯೆ? ಇಲ್ಲವಾದರೆ ಈ ಕುರಿತು ಕೈಗೊಳ್ಳಲಿರುವ ಕ್ರಮಗಳೇನು?**

ಉತ್ತರ (ಡಾ॥ ಹರ್ಷವರ್ಧನ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಮಲೇರಿಯಾ, ಡೆಂಗ್ಯೂ, ಚಿಕುನ್‌ಗೂನ್ಯಾ, ಜಪಾನೀಸ್ ಎನ್‌ಸೆಫಲಾಟಿಸ್, ಲೆಪ್ರೊಸಿ, ಟಿಬಿ ಮತ್ತು ಎಚ್‌ಐವಿ ಏಯ್ಡ್ಸ್ ರೋಗಗಳಿಗೆ ತುತ್ತಾದವರ ಅಂಕಿ ಅಂಶವನ್ನು ಅನುಬಂಧದಲ್ಲಿ ನೀಡಲಾಗಿದೆ. 2011ರಿಂದ ಈವರೆಗಿನ ನಾಲ್ಕು ವರ್ಷಗಳಲ್ಲಿ ಮಲೇರಿಯಾ ರೋಗಕ್ಕೆ ಕ್ರಮವಾಗಿ 754, 519, 440 ಮತ್ತು 48 ಸಾವುಗಳು, ಡೆಂಗ್ಯೂ ರೋಗಕ್ಕೆ 169, 242, 193 ಮತ್ತು 2 ಸಾವುಗಳು ಸಂಭವಿಸಿವೆ; ಚಿಕೂನ್‌ಗುನ್ಯಾ ರೋಗಕ್ಕೆ 20402, 15977, 18840 ಮತ್ತು 4803 ಜನರು ತುತ್ತಾಗಿದ್ದಾರೆ; ಜಪಾನ್ ಆನೆಕಾಲು ರೋಗಕ್ಕೆ 181, 140, 2012 ಮತ್ತು 14 ಸಾವುಗಳು ಸಂಭವಿಸಿವೆ; ಕುಷ್ಠ ರೋಗಕ್ಕೆ 127295, 134752, 126913 ಮತ್ತು 16067 ಜನರು ತುತ್ತಾಗಿದ್ದಾರೆ; ಕ್ಷಯ ರೋಗಕ್ಕೆ 63781, 63265, 61887 ಜನರು ತುತ್ತಾಗಿದ್ದಾರೆ; ಎಚ್‌ಐವಿ ಏಯ್ಡ್ಸ್ ರೋಗಕ್ಕೆ 285152, 245859,239763 ಮತ್ತು 35436 ರೋಗಿಗಳು ತುತ್ತಾಗಿದ್ದಾರೆ;





ಅಲ್ಲದೆ 31990, 35265, 29466 ಮತ್ತು 9752 ಜನರು ತೀರಿಕೊಂಡಿದ್ದಾರೆ. ಕ್ಯಾನ್ಸರ್ ರೋಗಕ್ಕೆ 452541, 465169, 478185 ಮತ್ತು 491597 ಜನರು ಬಲಿಯಾಗಿದ್ದಾರೆ.

ಅಸಾಂಕ್ರಾಮಿಕ ರೋಗಗಳಾದ ಐಎಚ್‌ಡಿಯಿಂದ ಒಟ್ಟು 5.5. ಲಕ್ಷ ಜನರು ಸಾವಿಗೀಡಾಗಿದ್ದಾರೆ; ಮಧುಮೇಹದಿಂದ 1 ಲಕ್ಷ ಜನರು ತೀರಿಕೊಂಡಿದ್ದಾರೆ.

ಈ ರೋಗಗಳ ನಿರ್ವಹಣೆಗೆ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಪಡೆದ ನಿಧಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

## 25. ಮಾದಕದ್ರವ್ಯ ಸೇವನೆ ವಿರುದ್ಧದ ಕ್ರಮಗಳು

**ಪ್ರಶ್ನೆ: (ದಿನಾಂಕ 22 ಜುಲೈ 2014)**

**ದೇಶದ ಕ್ರೀಡಾರಂಗದಲ್ಲಿ ಮಾದಕದ್ರವ್ಯ ಸೇವನೆ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ನ್ಯಾ॥ ಮುಕುಲ್ ಮುದಗಲ್ ಸಮಿತಿಯ ಶಿಫಾರಸುಗಳ ಪ್ರಕಾರ ಮಾದಕದ್ರವ್ಯ ಸೇವನೆ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆಯೆ? ಈವರೆಗೆ ಮಾದಕದ್ರವ್ಯ ಸೇವನೆ ಆರೋಪಕ್ಕೆ ಒಳಗಾದ ಕ್ರೀಡಾಳುಗಳ ಮಾಹಿತಿ ನೀಡಿರಿ. ಈ ಕುರಿತು ಜಾಗೃತಿ ಮೂಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀ ಸರ್ಬಾನಂದ ಸೊನೊವಾಲ್, ಮಾನ್ಯ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ, ಯುವ ವ್ಯವಹಾರಗಳು ಮತ್ತು ಕ್ರೀಡೆ ಇಲಾಖೆಯ ರಾಜ್ಯ ಸಚಿವರು)

ಭಾರತದ ಕ್ರೀಡಾರಂಗದಲ್ಲಿ ಮಾದಕದ್ರವ್ಯ ಸೇವನೆ ಮುಕ್ತ ವಾತಾವರಣವನ್ನು ಕಲ್ಪಿಸಲು ಸರ್ಕಾರ ಮತ್ತು ರಾಷ್ಟ್ರೀಯ ಮಾದಕದ್ರವ್ಯಸೇವನೆ ವಿರೋಧಿ ಸಂಸ್ಥೆಯು (ನಾಡಾ) ಬದ್ಧವಾಗಿವೆ. ಈ ಕುರಿತು ಸಾಕಷ್ಟು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಮುಕುಲ್ ಮುದಗಲ್ ಸಮಿತಿಯ ಶಿಫಾರಸಿನಂತೆ ಸರ್ಕಾರವು ಈ ಪಿಡುಗಿನ ವಿರುದ್ಧ ಹಲವು ಕ್ರಮಗಳನ್ನು ಕೈಗೊಂಡಿದೆ. ಇದಲ್ಲದೆ ತಜ್ಞರ ಒಂದು ಸಮಿತಿಯನ್ನೂ ನೇಮಿಸಿದ್ದು ಇದು ಮಾದಕದ್ರವ್ಯ ಸೇವನೆ ವಿರೋಧಿ ಶಿಕ್ಷಣದ ರೂಪುರೇಷೆಗಳನ್ನು ರೂಪಿಸಲಿದೆ. ಒಟ್ಟಾರೆ 425 ಕ್ರೀಡಾಳುಗಳು ಮಾದಕದ್ರವ್ಯ ಸೇವನೆಗಾಗಿ ಶಿಕ್ಷೆಗಳನ್ನು ಪಡೆದಿದ್ದಾರೆ. ಈ ಕುರಿತ ಹೆಚ್ಚಿನ ಕ್ರಮಗಳಿಗಾಗಿ ರಾಷ್ಟ್ರೀಯ ಕ್ರೀಡಾ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲಾಗುವುದು.

## 26. ವಿಶೇಷಚೇತನರಿಗೆ ಮೀಸಲಾತಿ

**ಸರ್ಕಾರವು ವಿಶೇಷಚೇತನ ವ್ಯಕ್ತಿಗಳ ಖಾಯ್ದೆ 1995 ಅನ್ವಯ ಅಂಥವರಿಗೆ ಸರ್ಕಾರಿ ಹುದ್ದೆಗಳಲ್ಲಿ ಶೇ. 3ರಷ್ಟನ್ನು ಮೀಸಲಿಟ್ಟಿದೆಯೆ? ಇದ್ದರೆ ಇದರ ವಿವರಗಳನ್ನು ಒದಗಿಸಿರಿ. ಈ ಮೀಸಲಾತಿ ಪ್ರಮಾಣವನ್ನು ಶೇ. 5ಕ್ಕೆ ಹೆಚ್ಚಿಸುವ ಪ್ರಸ್ತಾಪ ಇದೆಯೆ? ಎಲ್ಲಾ ಸಚಿವಾಲಯಗಳಲ್ಲೂ ವಿಶೇಷ ಸಬಲರಿಗಾಗಿ ಬಜೆಟರಿ ಮೊತ್ತವನ್ನು ನಿಗದಿಪಡಿಸಲಾಗುತ್ತಿದೆಯೆ? ವಿವರಗಳನ್ನು ನೀಡಿರಿ**

ಉತ್ತರ (ಶ್ರೀ ಸುದರ್ಶನ್ ಭಗತ್, ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರು)

1995ರ ಕಾಯ್ದೆಯ ಪ್ರಕಾರ ಎಲ್ಲಾ ಇಲಾಖೆಗಳಲ್ಲೂ ಶೇ. 3ಕ್ಕಿಂತ ಕಡಿಮೆಯಿಲ್ಲದಂತೆ ವಿಶೇಷ ಸಬಲರಿಗೆ ಮೀಸಲಾತಿ ನೀಡುವುದಕ್ಕೆ ಒಂದು ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಕುರುಡುತನ ಅಥವಾ ಕನಿಷ್ಠ ದೃಷ್ಟಿ, ಶ್ರವಣದೋಷ, ಚಲನದೋಷ ಅಥವಾ ಸೆರೆಬ್ರಲ್ ಪಾಲ್ಸಿ ಇವುಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಮೀಸಲಾತಿ ನೀಡಲಾಗುವುದು. 2014ರ ಫೆಬ್ರುವರಿ 7ರಂದು ಮಂಡಿಸಿದ ವಿಶೇಷ ಸಬಲ ವ್ಯಕ್ತಿಗಳ ಹಕ್ಕು ಕಾಯ್ದೆ 2014ರ ಅಡಿಯಲ್ಲಿ ಈ ಮೀಸಲಾತಿ ಪ್ರಮಾಣವನ್ನು ಶೇ. 3ರಿಂದ ಶೇ. 5ಕ್ಕೆ ಹೆಚ್ಚಿಸುವ ಪ್ರಸ್ತಾಪವಿದೆ. ಸಚಿವಾಲಯವು ಈ ಕುರಿತು ಬಜೆಟರಿ ಮೊತ್ತವನ್ನು ನಿಗದಿ ಮಾಡುವುದಕ್ಕಾಗಿ



Let us think about zero-defect production with no adverse effect on the environment.

■ Sri Narendra Modi, Prime Minister of India

ಎಲ್ಲಾ ಕೇಂದ್ರ ಸಚಿವಾಲಯಗಳೊಂದಿಗೆ ಸಂವಹನ ನಡೆಸಿದೆ.

## 27. ನೇರ ಹಣ ವರ್ಗಾವಣೆ

**ಪ್ರಶ್ನೆ: (ದಿನಾಂಕ 25 ಜುಲೈ 2014)**

**ಸರ್ಕಾರವು ನೇರ ಹಣ ವರ್ಗಾವಣೆ ಯೋಜನೆಯನ್ನು ಜಾರಿಗೊಳಿಸಿದೆಯೆ? ಹಾಗಿದ್ದರೆ ಅರ್ಹತಾ ಮಾಹಿತಿಗಳನ್ನು ನೀಡಿರಿ. ಅಲ್ಲದೆ ಇಲ್ಲಿ ಗುರುತಿಸಲಾದ ಸಂಗತಿಗಳು, ಫಲಾನುಭವಿಗಳು ಮತ್ತು ಈವರೆಗೆ ವರ್ಗಾವಣೆಯಾದ ಮೊತ್ತದ ವಿವರಗಳನ್ನು ನೀಡಿರಿ. ಈ ಯೋಜನೆಯನ್ನು ವಿಸ್ತರಿಸುವ ಪ್ರಸ್ತಾಪವೇನಾದರೂ ಇದೆಯೆ?**

ಉತ್ತರ (ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಖಾತೆ ರಾಜ್ಯ ಸಚಿವರು)

ನೇರ ಹಣ ವರ್ಗಾವಣೆ ಯೋಜನೆಯನ್ನು 2013ರ ಜನವರಿ 1ರಿಂದ ಆರಂಭಿಸಲಾಗಿದ್ದು 27 ಯೋಜನೆಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ. 121 ಸೂಚಿತ ಜಿಲ್ಲೆಗಳಲ್ಲಿ ಇದನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯನ್ನು ವಿಸ್ತರಿಸುವ ಪ್ರಸ್ತಾಪವು ಸರ್ಕಾರದ ಮುಂದೆ ಇಲ್ಲ. ಒಟ್ಟು 9281196 ಫಲಾನುಭವಿಗಳಿಗೆ 21530863544 ರೂ.ಗಳನ್ನು ನೇರ ಹಣ ವರ್ಗಾವಣೆ ಯೋಜನೆಯಲ್ಲಿ ವರ್ಗಾಯಿಸಲಾಗಿದೆ.

## 28. ಕೇಂದ್ರೀಯ ವಿದ್ಯಾಲಯ ಸಂಘಟನೆ ಸಿಬ್ಬಂದಿಗಳಿಗೆ ಸೌಲಭ್ಯ

**ಪ್ರಶ್ನೆ: (ದಿನಾಂಕ 9 ಜುಲೈ 2014)**

**ಕೇಂದ್ರೀಯ ವಿದ್ಯಾಲಯ ಸಂಘಟನೆಯ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ವಿವಿಧ ಸೌಕರ್ಯಗಳು ಮತ್ತು ಸೌಲಭ್ಯಗಳ ಮಾಹಿತಿಯನ್ನು ನೀಡಿರಿ. ಇಲ್ಲಿ ಸಿಬ್ಬಂದಿ ಕಲ್ಯಾಣ ನಿಧಿಗೆ ವೇತನದಿಂದ ಹಣ ಸಂಗ್ರಹ ಮಾಡಲಾಗುತ್ತಿದೆಯೆ? ಈ ಕೇಂದ್ರಗಳ ಈಜುಕೊಳ, ಜಿಮ್ ಮುಂತಾದವುಗಳನ್ನು ಖಾಸಗಿ ವ್ಯಕ್ತಿಗಳು ನಿರ್ವಹಿಸುತ್ತಿದ್ದಾರೆಯೆ? ಈ ಕುರಿತ ನಿಯಮಾವಳಿಗಳೇನು? ಸಿಬ್ಬಂದಿಗಳ ಕಲ್ಯಾಣಕ್ಕೆ ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

ಕೇಂದ್ರೀಯ ವಿದ್ಯಾಲಯ ಸಂಘಟನೆಗಳು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಕೆಳಗಿರುವ ಸ್ವಾಯತ್ತ ಸಂಸ್ಥೆ. ಇಲ್ಲಿ ಸಿಬ್ಬಂದಿ ವತಿಯಿಂದ ಸಿಬ್ಬಂದಿ ಕಲ್ಯಾಣ ನಿಧಿಗಾಗಿ ಹಣವನ್ನು ಸಂಗ್ರಹಿಸಲಾಗುತ್ತಿದೆ. 2010–13ರ ಅವಧಿಯ ಕೊನೆಯಲ್ಲಿ ಇದರ ಬಾಬ್ತಿನಲ್ಲಿ 528986146 ರೂ.ಗಳು ಉಳಿದಿವೆ. 21 ಈಜುಕೊಳಗಳನ್ನು ನಿರ್ಮಿಸಿದ್ದು ಇವುಗಳ ನಿರ್ವಹಣೆ ಬಗ್ಗೆ ವಿವಿಧ ಖಾಸಗಿ ಸಂಸ್ಥೆಗಳೊಂದಿಗೆ ಒಪ್ಪಂದಕ್ಕೆ ಬರಲಾಗಿದೆ. ಸಿಬ್ಬಂದಿಯ ಮಕ್ಕಳಿಗೆ ವಿದ್ಯಾಲಯಗಳಲ್ಲಿ ಪ್ರವೇಶ, ಮತ್ತು ಅವರಿಗೆ ವೃತ್ತಿಪರ ಶಿಕ್ಷಣಕ್ಕೆ ಹಣಕಾಸಿನ ನೆರವು – ಈ ಯೋಜನೆಗಳು ಜಾರಿಯಲ್ಲಿವೆ.

## 29. ಅಲೆಮಾರಿ ವರ್ಗದವರಿಗೆ ಕಲ್ಯಾಣ ಯೋಜನೆಗಳು

**ಪ್ರಶ್ನೆ: (ದಿನಾಂಕ 15 ಜುಲೈ 2014)**

**ಕರ್ನಾಟಕವೂ ಸೇರಿದಂತೆ ದೇಶದ ಎಲ್ಲೆಡೆ ಇರುವ ಅಲೆಮಾರಿ ವರ್ಗದ ಜನರಿಗೆ ಇರುವ ಕಲ್ಯಾಣ ಯೋಜನೆಗಳೇನು? ಕಳೆದ ಮೂರು ವರ್ಷಗಳಲ್ಲಿ ಅವರಿಗೆ ನೀಡಿದ ನೆರವಿನ ರಾಜ್ಯಶಃ ವಿವರಗಳನ್ನು ನೀಡಿರಿ. ಇಂಥ ಯೋಜನೆಗಳು ಅಲೆಮಾರಿ, ಅಧಿಸೂಚನೆಯೇತರ ಮತ್ತು ಅರೆ–ಅಲೆಮಾರಿ ವರ್ಗದ ಜನರಿಗೆ ಸಾಕಾಗುತ್ತದೆಯೆ? ಇವರಿಗೆ ವಸತಿ ಕಲ್ಪಿಸುವ ಮತ್ತಿತರ ನೆರವು ನೀಡುವ ಪ್ರಸ್ತಾವನೆ ಇದೆಯೆ?**





ಉತ್ತರ (ಶ್ರೀ ಸುದರ್ಶನ್ ಭಗತ್, ಮಾನ್ಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರು)

ಅಲೆಮಾರಿ ವರ್ಗದವರಿಗೆ ಪ್ರತ್ಯೇಕವಾದ ಕಲ್ಯಾಣ ಯೋಜನೆಗಳು ಸರ್ಕಾರದಲ್ಲಿ ಇಲ್ಲ. ಆದರೆ ರಾಷ್ಟ್ರೀಯ ಸಾಗರೋತ್ತರ ಸ್ಕಾಲರ್‌ಶಿಪ್‌ನಲ್ಲಿ ಅವರಿಗೆ ಮೀಸಲಾತಿ ನೀಡಲಾಗಿದೆ. ಆದ್ದರಿಂದ ರಾಜ್ಯಗಳಲ್ಲೂ ಈ ಬಗೆಯ ಪ್ರತ್ಯೇಕ ನಿಧಿ ಇರುವುದಿಲ್ಲ. ಇವರಿಗೆ ಹೆಚ್ಚಿನ ನೆರವು ನೀಡುವ ಬಗ್ಗೆ ಸೂಕ್ತ ಕ್ರಮಗಳನ್ನು ಶಿಫಾರಸು ಮಾಡಲು ಒಂದು ಸಮಿತಿಯನ್ನು ನೇಮಿಸಲಾಗಿದೆ.

## 30. ಸಿಬಿಐ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು

**ಪ್ರಶ್ನೆ: (ದಿನಾಂಕ 16 ಜುಲೈ 2014)**

**ಸಿಬಿಐ ನ್ಯಾಯಾಲಯಗಳಲ್ಲಿ ಭಾರಿ ಪ್ರಮಾಣದಲ್ಲಿ ಪ್ರಕರಣಗಳು ಬಾಕಿ ಉಳಿದಿವೆಯೆ? ಹಾಗಿದ್ದರೆ ಈ ಪ್ರಕರಣಗಳ ಅಂಕಿ ಅಂಶಗಳನ್ನು ತಿಳಿಸಿರಿ. ಈ ಮೂರು ವರ್ಷಗಳಲ್ಲಿ ಸಿಬಿಐಗೆ ವಹಿಸಿದ ಪ್ರಕರಣಗಳ ವಿವರ ತಿಳಿಸಿರಿ. ಈ ಪ್ರಕರಣಗಳ ತ್ವರಿತ ವಿಲೇವಾರಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ ಮತ್ತು ಪ್ರಧಾನಮಂತ್ರಿಯವರ ಕಚೇರಿ ಇಲಾಖೆಗಳ ರಾಜ್ಯ ಸಚಿವರು)

2014ರ ಮೇ 31ರ ಹೊತ್ತಿಗೆ ದೇಶದಲ್ಲಿ ಸಿಬಿಐಗೆ ವಹಿಸಿದ ಒಟ್ಟು 6562 ಪ್ರಕರಣಗಳು ಸಿಬಿಐ ನ್ಯಾಯಾಲಯಗಳಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆಯಲ್ಲಿವೆ. ಈ ಕುರಿತ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಭ್ರಷ್ಟಾಚಾರ ವಿರೋಧಿ ಕಾಯ್ದೆಯ ಅಡಿಯಲ್ಲಿ ಸಿಬಿಐಯು ಒಟ್ಟು 2220 ಪ್ರಕರಣಗಳನ್ನು ದಾಖಲಿಸಿಕೊಂಡಿದೆ. ಸರ್ಕಾರವು ಈ ಪ್ರಕರಣಗಳ ಇತ್ಯರ್ಥಕ್ಕಾಗಿ ದೇಶದಾದ್ಯಂತ ಒಟ್ಟು 70 ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸಿದೆ. ಇದಲ್ಲದೆ ಇನ್ನೂ 22 ವಿಶೇಷ ನ್ಯಾಯಾಲಯಗಳನ್ನು ಸರ್ಕಾರವು ಸ್ಥಾಪಿಸಲು ಮುಂದಾಗಿದ್ದು ಇವುಗಳಲ್ಲಿ 7 ನ್ಯಾಯಾಲಯಗಳು ಕಾರ್ಯಾರಂಭ ಮಾಡಿವೆ.

## 31. ಮಾಲಿನ್ಯಕಾರಕ ಉದ್ದಿಮೆಗಳು

**ಪ್ರಶ್ನೆ: (ದಿನಾಂಕ 16 ಜುಲೈ 2014, ಚುಕ್ಕಿರಹಿತಪ್ರಶ್ನೆ)**

**ಸರ್ಕಾರವು ಮಾಲಿನ್ಯಕಾರಕ ಉದ್ಯಮಗಳಿಗಾಗಿ ಪಾರಿಸರಿಕ ಮಾನದಂಡಗಳನ್ನು ನೀಡಿದೆಯೆ? ಹಾಗಿದ್ದರೆ ಇವುಗಳನ್ನು ಉಲ್ಲಂಘಿಸಿದ ಉದ್ದಿಮೆಗಳ ಮಾಹಿತಿ ನೀಡಿರಿ. ಸಾರ್ವಜನಿಕ ಉದ್ದಿಮೆಗಳೂ ಸೇರಿದಂತೆ ದೇಶದ ಪ್ರಮುಖ ಮಾಲಿನ್ಯಕಾರಕ ಉದ್ದಿಮೆಗಳಲ್ಲಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆಯೆ? ಇಂಥ ಉದ್ಯಮಗಳ ಮಾಲಿನ್ಯವನ್ನು ತಡೆಯಲು ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀ ಪ್ರಕಾಶ್ ಜಾವಡೇಕರ್, ಮಾನ್ಯ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

ಸರ್ಕಾರವು ಒಟ್ಟು 102 ಬಗೆಯ ಉದ್ಯಮ ಸಂಬಂಧೀ ಮಾಲಿನ್ಯಗಳನ್ನು ಗುರುತಿಸಿದೆ. ಎಲ್ಲಾ ಉದ್ಯಮಗಳೂ ಈ ಪಾರಿಸರಿಕ ನೀತಿಯನ್ನು ಪಾಲಿಸಬೇಕಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಬಿ) ಒಟ್ಟು 3266 ಅತಿಯಾದ ಮಾಲಿನ್ಯ ಉಂಟುಮಾಡುವ ಉದ್ದಿಮೆಗಳನ್ನು ಗುರುತಿಸಿದೆ. ಇವುಗಳಲ್ಲಿ 2328 ಉದ್ದಿಮೆಗಳು ಸೂಚಿತ ಮಾನದಂಡವನ್ನು ಪಾಲಿಸುತ್ತಿವೆ. 571 ಉದ್ದಿಮೆಗಳು ಇವನ್ನು ಪಾಲಿಸುತ್ತಿಲ್ಲ; ಅಲ್ಲದೆ 367 ಉದ್ಯಮಗಳನ್ನು ಮುಚ್ಚಲಾಗಿದೆ.

2010ರಿಂದ ಈವರೆಗೆ ಸಿಪಿಸಿಬಿಯು ಪರಿಸರ ರಕ್ಷಣಾ ಕಾಯ್ದೆ ಅನ್ವಯ ಒಟ್ಟು 601 ನಿರ್ದೇಶನಗಳನ್ನು ನೀಡಿದೆ. ಇವಲ್ಲದೆ



The world used to think we are a land of snake charmers and black magic. But our youth has surprised the world with its IT skills. I dream of a digital India.

■ Sri Narendra Modi, Prime Minister of India

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ 138 ನಿರ್ದೇಶನಗಳನ್ನು (ಗುಣಮಟ್ಟ ಪಾಲನೆಗೆ 118 ಮತ್ತು ಉದ್ಯಮ ಮುಚ್ಚುಗಡೆಗೆ 20) ನೀಡಲಾಗಿದೆ.

## 32. ಒಳಚರಂಡಿ ವ್ಯವಸ್ಥೆ

**ಪ್ರಶ್ನೆ: (ದಿನಾಂಕ 16 ಜುಲೈ 2014)**

**2011ರ ಗಣತಿಯ ಪ್ರಕಾರ ಕರ್ನಾಟಕದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ ನಗರ ಜನಸಂಖ್ಯೆ ಎಷ್ಟು? ಈ ಕುರಿತು ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಿರುವ ನೆರವಿನ ವಿವರ ತಿಳಿಸಿ.**

ಉತ್ತರ (ಶ್ರೀ ಎಂ ವೆಂಕಯ್ಯ ನಾಯ್ಡು, ಮಾನ್ಯ ನಗರಾಭಿವೃದ್ಧಿ ಸಚಿವರು)

2011ರ ಗಣತಿಯ ಪ್ರಕಾರ ಒಟ್ಟು ಮನೆಗಳಿಗೆ ಹೋಲಿಸಿದಾಗ ಕರ್ನಾಟಕದಲ್ಲಿ ಒಳಚರಂಡಿ ಸೌಲಭ್ಯ ಹೊಂದಿದ ನಗರ ಪ್ರದೇಶದ ಮನೆಗಳ ಪ್ರಮಾಣ ಶೇ. 53.31ರಷ್ಟಿದೆ. ರಾಜ್ಯ ಸರ್ಕಾರದ ಯತ್ನಗಳಿಗೆ ನೆರವು ನೀಡುವುದಕ್ಕಾಗಿ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ಜೆನರಮ್ ಯೋಜನೆಯಡಿ 21 ಒಳಚರಂಡಿ ಯೋಜನೆಗಳಿಗೆ 343.96 ಕೋಟಿ ರೂ.ಗಳನ್ನು ಒದಗಿಸಿದೆ.

## 33. ಕೇಂದ್ರಕ್ಕೆ ಪ್ರತಿನಿಯೋಜನೆ

**ಪ್ರಶ್ನೆ: (ದಿನಾಂಕ 16 ಜುಲೈ 2014)**

**ಕೇಂದ್ರ ಪ್ರತಿನಿಯೋಜನೆಯ ಪರಿಣಾಮವಾಗಿ (ಡೆಪ್ಯುಟೇಶನ್) ರಾಜ್ಯಗಳಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿ ವರ್ಗದ ಅನುಮೋದಿತ ಬಲಕ್ಕೂ, ಈಗಿರುವ ಬಲಕ್ಕೂ ಭಾರೀ ವ್ಯತ್ಯಾಸ ಇದೆಯೆ? ಇದ್ದರೆ ರಾಜ್ಯಶಃ ಮಾಹಿತಿ ನೀಡಿರಿ. ಪರವಾನಗಿ ಕಾಲಾವಧಿ ಮೀರಿ ಡೆಪ್ಯುಟೇಶನ್ ಮೇಲೆ ಇರುವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಮಾಹಿತಿ ನೀಡಿರಿ. ಇದಕ್ಕೆ ಕಾರಣಗಳನ್ನು ತಿಳಿಸಿರಿ.**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ ಮತ್ತು ಪ್ರಧಾನಮಂತ್ರಿಯವರ ಕಚೇರಿ ಇಲಾಖೆಗಳ ರಾಜ್ಯ ಸಚಿವರು)

ಯಾವುದೇ ರಾಜ್ಯದಲ್ಲಿ ಶೇ. 40ರಷ್ಟು ಹಿರಿಯ ಹುದ್ದೆಗಳು ಕೇಂದ್ರೀಯ ಪ್ರತಿನಿಯೋಜನೆಗೆ ಮೀಸಲಾಗಿರುತ್ತವೆ. ಈ ಕುರಿತ ಹೆಚ್ಚಿನ ಮಾಹಿತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಅಧಿಕಾರಿಗಳ ಕಾಲಾವಧಿಯನ್ನು ಸಂಪುಟದ ನೇಮಕಾತಿ ಸಮಿತಿಯು ನಿರ್ಧರಿಸುತ್ತದೆ. ಸಾಮಾನ್ಯವಾಗಿ ಮೂಲ ಸೇವಾ ಚೌಕಟ್ಟಿನ ಹೊರಗೆ ಗರಿಷ್ಠ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಬಹುದಾಗಿದೆ. ವಿದೇಶಿ ಹುದ್ದೆಯಲ್ಲಿ ಇರುವವರನ್ನು ಹತ್ತು ವರ್ಷಗಳವರೆಗೂ ಮುಂದುವರೆಸಬಹುದಾಗಿದೆ. ಒಟ್ಟಾರೆ ವಿವಿಧ ರಾಜ್ಯಗಳನ್ನು ಸೇರಿಸಿದಾಗ 6217 ಐಎಎಸ್, 2579 ಐಪಿಎಸ್ ಹುದ್ದೆಗಳನ್ನು ಅಧಿಕೃತವಾಗಿ ಮಂಜೂರು ಮಾಡಲಾಗಿದೆ. ಇವರಲ್ಲಿ 1345 ಐಎಎಸ್ ಮತ್ತು 1022 ಐಪಿಎಸ್ ಅಧಿಕಾರಿಗಳು ಪ್ರತಿನಿಯೋಜನೆ ಮೀಸಲಿನಲ್ಲಿ ಇದ್ದಾರೆ. ಈ ಪೈಕಿ 650 ಐಎಎಸ್ ಮತ್ತು 478 ಐಪಿಎಸ್ ಅಧಿಕಾರಿಗಳು ಕೇಂದ್ರದಲ್ಲಿದ್ದಾರೆ. ಒಟ್ಟು 30 ಅಧಿಕಾರಿಗಳು ಕಾರಣ ಸಹಿತ ತಮ್ಮ ಪ್ರತಿನಿಯೋಜನೆಯಲ್ಲಿ ಮುಂದುವರೆದಿದ್ದಾರೆ.





## 34. ಎಸ್‌ಪಿಎ ಮತ್ತು ಐಐಐಟಿಡಿ&ಎಂ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

**ಪ್ರಶ್ನೆ: (ಚುಕ್ಕಿರಹಿತ ಪ್ರಶ್ನೆ, ದಿನಾಂಕ 16 ಜುಲೈ 2014)**

**ಭೋಪಾಲ್ ಮತ್ತು ವಿಜಯವಾಡಗಳಲ್ಲಿ ಇರುವ ಸ್ಕೂಲ್ ಆಫ್ ಪ್ಲಾನಿಂಗ್ ಎಂಡ್ ಆರ್ಕಿಟೆಕ್ಚರ್ (ಎಸ್‌ಪಿಎ) ಮತ್ತು ಕಾಂಚೀಪುರಂನಲ್ಲಿ ಇರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್ಮೇಶನ್ ಟೆಕ್ನಾಲಜಿ ಡಿಸೈನ್ ಎಂಡ್ ಮ್ಯಾನುಫ್ಯಾಕ್ಚರಿಂಗ್ (ಐಐಐಟಿಡಿ&ಎಂ) ವಿದ್ಯಾರ್ಥಿಗಳಿಗೆ ಇನ್ನೂ ಪದವಿ ಪ್ರದಾನ ಮಾಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದರೆ ಈ ಬಗ್ಗೆ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು? ಈ ಸಂಸ್ಥೆಗಳನ್ನು ಆಫ್ ಕ್ಯಾಂಪಸ್ ಶಿಕ್ಷಣಕೇಂದ್ರಗಳು ಎಂದು ಸರ್ಕಾರವು ಮಾನ್ಯ ಮಾಡುವುದೆ?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

ಹೌದು ಇದು ಸರ್ಕಾರದ ಗಮನಕ್ಕೆ ಬಂದಿದೆ. ಎಸ್‌ಪಿಎಯನ್ನು 2008–09ರಲ್ಲಿ ಆರಂಭಿಸಲಾಯಿತು. ಐಐಐಟಿಡಿ&ಎಂನ್ನು 2007ರಲ್ಲಿ ಆರಂಭಿಸಲಾಯಿತು. ಈ ಸಂಸ್ಥೆಗಳಿಂದ ಒಟ್ಟು 692 ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. ಅವರಿಗೆ ಪದವಿ ಪ್ರಮಾಣಪತ್ರವನ್ನು ಕೊಡಲು ಈ ಸಂಸ್ಥೆಯನ್ನು ಡೀಮ್ಡ್ ವಿಶ್ವವಿದ್ಯಾಲಯ ಎಂದು ಘೋಷಿಸಬೇಕಿದೆ. ಇದಕ್ಕಾಗಿ ಸಂಸತ್ತಿನಲ್ಲಿ ಕಾಯ್ದೆಯೊಂದನ್ನು ಅನುಮೋದಿಸಬೇಕಿದೆ. ಈ ಸಂಸ್ಥೆಗಳನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆಗಳು ಎಂದು ಘೋಷಿಸಲು ಸರ್ಕಾರವು ಸಿದ್ಧತೆಗಳನ್ನು ನಡೆಸಿದೆ. ಅಲ್ಲದೆ ಇವುಗಳನ್ನು ಆಫ್ ಕ್ಯಾಂಪಸ್ ಶಿಕ್ಷಣ ಸಂಸ್ಥೆಗಳು ಎಂದು ಮಾನ್ಯ ಮಾಡಿ ಎಲ್ಲರಿಗೂ ಪದವಿ ಪ್ರದಾನ ಮಾಡುವುದಕ್ಕಾಗಿಯೂ ಪ್ರಯತ್ನಗಳು ನಡೆದಿವೆ.

## 35. ಪಿಪಿಪಿ ಅಡಿಯಲ್ಲಿರುವ ವಿಮಾನ ನಿಲ್ದಾಣಗಳ ಆಧುನೀಕರಣ

**ಪ್ರಶ್ನೆ: (ಚುಕ್ಕಿರಹಿತ ಪ್ರಶ್ನೆ, 14 ಜುಲೈ 2014)**

**ಕಳೆದ ಮೂರು ವರ್ಷಗಳ ಅವಧಿಗಾಗಿ ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ (ಪಿಪಿಪಿ) ಅಡಿಯಲ್ಲಿ ಇರುವ ವಿಮಾನ ನಿಲ್ದಾಣಗಳ ಆಧುನೀಕರಣದ ಯೋಜನೆಗಳ ವಿವರಗಳನ್ನು ನೀಡಿರಿ. ಈ ಆಧುನೀಕರಣದ ಗುರಿಗಳನ್ನು ನಿಗದಿತ ಕಾಲಾವಧಿಯಲ್ಲಿ ಮುಟ್ಟಲಾಗಿದೆಯೆ? ಈ ಯೋಜನೆಗಳಿಗಾಗಿ ಸರ್ಕಾರವು ಹಣಕಾಸಿನ ನೆರವು ಪಡೆದ ವಿವರಗಳನ್ನು ನೀಡಿರಿ.**

ಉತ್ತರ (ಶ್ರೀ ಜಿ.ಎಂ. ಸಿದ್ದೇಶ್ವರ, ನಾಗರಿಕ ವಿಮಾನಯಾನ ರಾಜ್ಯ ಸಚಿವರು)

ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಪಿಪಿಪಿ ಅಡಿಯಲ್ಲಿ ಇರುವ ಯಾವುದೇ ವಿಮಾನ ನಿಲ್ದಾಣದ ಆಧುನೀಕರಣವನ್ನು ಕೈಗೊಂಡಿರುವುದಿಲ್ಲ. ಆದರೆ 12ನೇ ಯೋಜನಾ ಕಾಲಾವಧಿಯಲ್ಲಿ ಇವುಗಳಲ್ಲಿ ವಿಶ್ವಸ್ತರದ ಗುಣಮಟ್ಟವನ್ನು ಸಾಧಿಸಬೇಕೆಂದು ಈ ಕುರಿತ ಕಾರ್ಯಪಡೆಯು ಶಿಫಾರಸು ಮಾಡಿದೆ. ಇದನ್ನು ಸಂಚಾರ ಹೆಚ್ಚಳಕ್ಕೆ ಅನುಗುಣವಾಗಿ ಮಾಡಬೇಕೆಂದು ಅದು ಶಿಫಾರಸು ಮಾಡಿದೆ.

## 36. ರೋಮಿಂಗ್ ಶುಲ್ಕಗಳು

**ಪ್ರಶ್ನೆ: (ದಿನಾಂಕ 14 ಜುಲೈ 2014)**

**ಮೊಬೈಲ್ ಸೇವೆಗಳ ಎಸ್‌ಟಿಡಿ ಶುಲ್ಕವನ್ನು ಹೆಚ್ಚಿಸಬಾರದು ಎಂದು ದೇಶದ ಟೆಲಿಕಾಂ ಆಪರೇಟರ್‌ಗಳಿಗೆ ನಿರ್ದೇಶನ ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೆ? ಇದ್ದರೆ ವಿವರಗಳನ್ನು ನೀಡಿರಿ. ಈಗ ಸಂಸ್ಥೆಶಃ ಇರುವ ರೋಮಿಂಗ್ ಶುಲ್ಕಗಳ ವಿವರಗಳನ್ನು ನೀಡಿರಿ.**





All schools should have toilets. There should be separate toilets for schools. I urge all MPs to spend one year's funds to construct toilets. In 2019, ensuring cleanliness will be the most fitting tribute to Mahatma Gandhi on his 150th birth anniversary.

■ Sri Narendra Modi, Prime Minister of India

ಉತ್ತರ (ಶ್ರೀ ರವಿಶಂಕರ ಪ್ರಸಾದ್, ಮಾನ್ಯ ಸಂವಹನ, ಮಾಹಿತಿ ತಂತ್ರಜ್ಞಾನ ಮತ್ತು ಕಾನೂ ಹಾಗೂ ನ್ಯಾಯಿಕ ಸಚಿವರು)

ರಾಷ್ಟ್ರೀಯ ರೋಮಿಂಗ್ ಸೇವೆಗಳ ಹೊರತಾಗಿ ಮೊಬೈಲ್ ಆಪರೇಟರ್‌ಗಳು ವಿವಿಧ ಶುಲ್ಕಪಟ್ಟಿಯನ್ನು ಕೆಲವು ಮಿತಿಗಳೊಂದಿಗೆ ಹೊಂದಲು ಅವಕಾಶವಿದೆ. ಇಲ್ಲಿ ತಾರತಮ್ಯ ಮಾಡಬಾರದು ಎಂಬಿತ್ಯಾದಿ ನಿಯಮಗಳಿವೆ. 2013ರ ಜುಲೈ 1ರಿಂದ ಟೆಲಿಕಮ್ಯುನಿಕೇಶನ್ ಟಾರಿಫ್ ಆದೇಶವು ಜಾರಿಯಲ್ಲಿದೆ. ಸೂಚಿತ ರಾಷ್ಟ್ರೀಯ ರೋಮಿಂಗ್ ಸೇವೆಗಳ ಪ್ರಕಾರ ಪ್ರಕಾರ ಹೊರಹೋಗುವ ಸ್ಥಳೀಯ ಧ್ವನಿಕರೆಯ ಶುಲ್ಕವು ನಿಮಿಷಕ್ಕೆ 1.00 ರೂ; ಹೊರಹೋಗುವ ದೂರ ಧ್ವನಿಕರೆ (ಇಂಟರ್ ಸರ್ಕಲ್) ಶುಲ್ಕವು ನಿಮಿಷಕ್ಕೆ 1.50 ರೂ; ಒಳಬರುವ ಧ್ವನಿಕರೆಯು ನಿಮಿಷಕ್ಕೆ 0.75 ರೂ. ಹೊರಹೋಗುವ ಸ್ಥಳೀಯ ಎಸ್‌ಎಂಎಸ್ 1.00 ರೂ ಹಾಗೂ ಹೊರಹೋಗುವ ಇಂಟರ್ ಸರ್ಕಲ್ ಎಸ್‌ಎಂಎಸ್ 1.50 ರೂ ಆಗಿರುತ್ತದೆ.

## 37. ಏರ್ ಟ್ರಾಫಿಕ್ ಸೇವೆಗಳು

**ಪ್ರಶ್ನೆ: (ದಿನಾಂಕ 14 ಜುಲೈ 2014)**

**ಎಲ್ಲಾ ಏರ್ ಟ್ರಾಫಿಕ್ ಸರ್ವಿಸ್ ಮಾರ್ಗಗಳನ್ನು ನಿಗಾ ರಾಡಾರ್‌ಗಳ ವ್ಯಾಪ್ತಿಗೆ ತರಲಾಗಿದೆಯೆ? ಹಾಗಿದ್ದರೆ ಈ ಕುರಿತು ವಿವರಗಳನ್ನು ತಿಳಿಸಿ. ಇಲ್ಲವಾದರೆ ಇಂಥ ನಿಗಾಕ್ಕೆ ಒಳಪಡದ ಮಾರ್ಗಗಳ ವಿವರಗಳನ್ನು ನೀಡಿರಿ. ಅಲ್ಲದೆ ವಿಮಾನ ನಿಲ್ದಾಣಗಳ ಕಾರ್ಯಾಚರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾವು ಯೋಚಿಸುತ್ತಿದೆಯೆ ಎಂಬುದನ್ನು ತಿಳಿಸಿರಿ. ಹಾಗಿದ್ದರೆ ಯಾವ ಬಗೆಯ ಬದಲಾವಣೆಗಳನ್ನು ಮಾಡಲಾಗುತ್ತಿದೆ?**

ಉತ್ತರ (ಶ್ರೀ ಜಿ.ಎಂ. ಸಿದ್ದೇಶ್ವರ, ನಾಗರಿಕ ವಿಮಾನಯಾನ ರಾಜ್ಯ ಸಚಿವರು)

ಭಾರತದ ಎಲ್ಲಾ ಎಟಿಎಸ್ ಮಾರ್ಗಗಳೂ ನಿಗಾ ರಾಡಾರ್ ವ್ಯಾಪ್ತಿಯಲ್ಲಿವೆ. ವಿವಿಧ ಬಗೆಯ ರಾಡಾರ್‌ಗಳನ್ನೂ ಇಲ್ಲಿ ಬಳಸಲಾಗಿದೆ. ಏರ್ ಟ್ರಾಫಿಕ್ ನಿಯಂತ್ರಣ ಸಾಮರ್ಥ್ಯವು ಮೂಲಸೌಕರ್ಯವನ್ನು ಅವಲಂಬಿಸಿದೆ. ದಿಲ್ಲಿಯ ಮೂರೂ ರನ್‌ವೇಗಳನ್ನು ಬಳಸಿ ಗಂಟೆಗೆ 75 ಚಲನೆಗಳನ್ನು ಮಾಡಲಾಗುತ್ತಿದ್ದು ಸಂಪೂರ್ಣ ಅವಕಾಶವನ್ನು ಬಳಸಿಕೊಳ್ಳಲಾಗುತ್ತಿದೆ. ಮುಂಬಯಿಯಲ್ಲಿ ಒಂದೇ ರನ್‌ವೇಯಲ್ಲಿ ಗಂಟೆಗೆ 46–48 ಯಾನಗಳನ್ನು ನಿಯಂತ್ರಿಸಲಾಗುತ್ತಿದೆ. ಸಾಮಾನ್ಯವಾಗಿ ಒಂದೇ ರನ್‌ವೇ ಇರುವೆಡೆಗಳಲ್ಲಿ ಗಂಟೆಗೆ 30 ಚಲನೆಗಳನ್ನು ನಿರ್ವಹಿಸಲಾಗುತ್ತಿದೆ. ಅಹಮದಾಬಾದ್, ಬೆಂಗಳೂರು, ಚೆನ್ನೈ, ಗುವಾಹಟಿ, ಹೈದರಾಬಾದ್, ಕೋಲ್ಕತಾ, ತಿರುವನಂತಪುರಂ – ಈ ನಿಲ್ದಾಣಗಳಾಗಿವೆ. ಎಟಿಸಿಗಳ ಆಧುನೀಕರಣವು ವಿಮಾನಯಾನ ನ್ಯಾವಿಗೇಶನ್‌ನ ತಾಂತ್ರಿಕ ಆಧುನೀಕರಣವನ್ನು ಅವಲಂಬಿಸಿದೆ.

## 38. ಇ–ಜಿಲ್ಲೆ ಕಾರ್ಯಕ್ರಮದ ಅನುಷ್ಠಾನ

**ಪ್ರಶ್ನೆ: (ದಿನಾಂಕ 14 ಜುಲೈ 2014)**

**ಇ–ಜಿಲ್ಲೆ ಕಾರ್ಯಕ್ರಮದಡಿ ಬಂದ ಜಿಲ್ಲೆಗಳ ರಾಜ್ಯವಾರು ವಿವರಗಳನ್ನು ನೀಡಿರಿ. ಪ್ರತಿಯೊಂದೂ ಇ–ಜಿಲ್ಲೆ ಕಾರ್ಯಕ್ರಮಕ್ಕೆ ನೀಡಲಾಗುವ ನಿಧಿ, ಆಗಿರುವ ಖರ್ಚುಗಳನ್ನು ಯೋಜನಾವಾರು ನೀಡಿರಿ. 2014–15ರಲ್ಲಿ ಈ ಯೋಜನೆಯಡಿ ಆಯ್ಕೆಯಾಗಿರುವ ಜಿಲ್ಲೆಗಳ ವಿವರಗಳನ್ನು ಹಣಕಾಸಿನ ಮಾಹಿತಿಯೊಂದಿಗೆ ನೀಡಿರಿ.**

ಉತ್ತರ (ಶ್ರೀ ರವಿಶಂಕರ ಪ್ರಸಾದ್, ಮಾನ್ಯ ಸಂವಹನ, ಮಾಹಿತಿ ತಂತ್ರಜ್ಞಾನ ಮತ್ತು ಕಾನೂ ಹಾಗೂ ನ್ಯಾಯಿಕ ಸಚಿವರು)

ದೇಶದ ಎಲ್ಲಾ ಜಿಲ್ಲೆಗಳಲ್ಲೂ ಇ–ಜಿಲ್ಲೆ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. 2014ರ ಜೂನ್ 30ರ ಹೊತ್ತಿಗೆ ಒಟ್ಟು 166039.26 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದ್ದು ಈ ಪೈಕಿ 4135.29 ಲಕ್ಷ ರೂ.ಗಳನ್ನು ಬಳಸಿಕೊಳ್ಳಲಾಗಿದೆ. 2014–





15ರಲ್ಲಿ 200 ಜಿಲ್ಲೆಗಳಲ್ಲಿ ಈ ಯೋಜನೆಯು ಕಾರ್ಯಾರಂಭ ಮಾಡಲಿದೆ.

## 39. ನಾಗರಿಕ ವಿಮಾನಯಾನ ನೀತಿ

**ಪ್ರಶ್ನೆ: (ದಿನಾಂಕ 14 ಜುಲೈ 2014)**

**ಭಾರತ ಸರ್ಕಾರವು ರೂಪಿಸಿದ ನಾಗರಿಕ ವಿಮಾನಯಾನ ರಂಗದ ನೀತಿಯ ಪ್ರಮುಖ ಅಂಶಗಳನ್ನು ತಿಳಿಸಿರಿ. ಈ ನೀತಿಯನ್ನು ಬದಲಾಯಿಸುವ ಪ್ರಸ್ತಾಪವನ್ನು ಸರ್ಕಾರವು ಹೊಂದಿದೆಯೆ? ಹಾಗಿದ್ದರೆ ಈ ಕುರಿತ ಮಾಹಿತಿಗಳನ್ನು ನೀಡಿರಿ. ಹಲವು ಬಗೆಯ ಸುತ್ತೋಲೆಗಳು ಮತ್ತು ವಿಭಿನ್ನ ವ್ಯಾಖ್ಯೆಗಳಿಂದಾಗಿ ಭೂ ಸೇವಾನಿರ್ವಹಣೆಯ ಗುಣಮಟ್ಟವು ತುಂಬಾ ಕುಸಿದಿದೆಯೆ? ವಿಮಾನರಂಗದ ತೆರಿಗೆ ನೀತಿಯಲ್ಲಿ ವಿಮಾನ ಇಂಧನ ತೆರಿಗೆಯೂ ಸೇರಿದ್ದು ಇದು ವಿಮಾನಯಾನ ಸಂಸ್ಥೆಗಳು ಮತ್ತು ಗ್ರಾಹಕರ ಮೇಲೆ ಪರಿಣಾಮ ಬೀರುತ್ತಿದೆಯೆ? ಈ ಬಗ್ಗೆ ವಿವರಗಳನ್ನು ನೀಡಿರಿ.**

ಉತ್ತರ (ಶ್ರೀ ಜಿ.ಎಂ. ಸಿದ್ದೇಶ್ವರ, ನಾಗರಿಕ ವಿಮಾನಯಾನ ರಾಜ್ಯ ಸಚಿವರು)

ನಾಗರಿಕ ವಿಮಾನಯಾನ ರಂಗದಲ್ಲಿ ಹಲವು ಬಗೆಯ ನೀತಿಗಳನ್ನು ಜಾರಿಗೊಳಿಸಲಾಗಿದೆ. ಮಾರುಕಟ್ಟೆ ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ನೀತಿಗಳನ್ನು ಪುನರ್ವಿಮರ್ಶೆ ಮಾಡಲಾಗುತ್ತಿದೆ. ಆದರೆ ವಿವಿಧ ಸುತ್ತೋಲೆಗಳಿಂದ ಯಾವುದೇ ಗೊಂದಲವೂ ಉಂಟಾಗಿಲ್ಲ. ಕೆಲವು ನಿಯಂತ್ರಣಗಳ ಬಗ್ಗೆ ಕೆಲವು ಸಂಸ್ಥೆಗಳು ರಿಟ್ ಅರ್ಜಿಯನ್ನು ಸಲ್ಲಿಸಿ ಅವುಗಳನ್ನು ವಜಾಗೊಳಿಸಲಾಗಿದೆ. ಕೆಲವೆಡೆ ಮೌಲ್ಯವರ್ಧಿತ ತೆರಿಗೆ ಪ್ರಮಾಣವು ಹೆಚ್ಚಾಗಿದೆ. ಈ ತೆರಿಗೆಗಳು ವಿಮಾನಯಾನ ಸಂಸ್ಥೆಗಳ ಮೇಲೆ ಗಂಭೀರವಾದ ಪರಿಣಾಮ ಉಂಟುಮಾಡುತ್ತಿವೆ.

## 30. ಚಿನ್ನದ ಆಭರಣಗಳ ಆಮದು

**ಪ್ರಶ್ನೆ: (ದಿನಾಂಕ 11 ಜುಲೈ 2014)**

**ವಿವಿಧ ದೇಶಗಳಿಂದ ಅದರಲ್ಲೂ ಥೈಲ್ಯಾಂಡ್ ದೇಶದಿಂದ ಭಾರತಕ್ಕೆ ಕಳೆದ ಮೂರು ವರ್ಷಗಳಲ್ಲಿ ಆಮದಾದ ಚಿನ್ನದ ಆಭರಣಗಳ ಪ್ರಮಾಣದ ವಿವರಗಳನ್ನು ನೀಡಿರಿ. ಇಂಥ ಆಮದಿಗೆ ಸರ್ಕಾರವು ನೀಡುತ್ತಿರುವ ಉತ್ತೇಜಕಗಳ ಬಗ್ಗೆ ಮಾಹಿತಿಗಳನ್ನು ನೀಡಿರಿ. ಉಳಿದ ದೇಶಗಳಿಗೆ ಹೋಲಿಸಿದರೆ ಥೈಲ್ಯಾಂಡ್‌ನಿಂದ ಆಮದಾಗುತ್ತಿರುವ ಚಿನ್ನದ ಪ್ರಮಾಣ ಹೆಚ್ಚಾಗಿದೆಯೆ? ಹಾಗಿದ್ದರೆ ಇದಕ್ಕೆ ಕಾರಣವೇನು? ಸರ್ಕಾರವು ಕೆಲವು ದೇಶಗಳಿಂದ ಅದರಲ್ಲೂ ಥೈಲ್ಯಾಂಡ್‌ನಿಂದ ಚಿನ್ನದ ಆಭರಣಗಳ ಆಮದನ್ನು ನಿಷೇಧಿಸುವ ಪ್ರಸ್ತಾವನೆಯನ್ನು ಹೊಂದಿದೆಯೆ?**

ಉತ್ತರ (ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಖಾತೆ ರಾಜ್ಯ ಸಚಿವರು)

ವಿವಿಧ ದೇಶಗಳಿಂಥ ಭಾರತಕ್ಕೆ ಆಮದಾದ ಚಿನ್ನದ ಆಭರಣಗಳ ಅಂಕಿಅಂಶಗಳನ್ನು ನೀಡಲಾಗುತ್ತಿದೆ. ಈ ಪ್ರಕಾರ 2011ರಿಂದ 2014ರವರೆಗೆ ಮೂರು ವರ್ಷಗಳಲ್ಲಿ ಕ್ರಮವಾಗಿ 8853, 27591, 27218 ಕಿಲೋಗ್ರಾಂ ಚಿನ್ನದ ಆಭರಣಗಳು ಆಮದಾಗಿವೆ. ಇದೇ ಅವಧಿಯಲ್ಲಿ ಥೈಲ್ಯಾಂಡ್‌ನಿಂದ 2369, 1822 ಮತ್ತು 351 ಕಿಲೋಗ್ರಾಂ ಆಭರಣಗಳ ಆಮದಾಗಿದೆ. ಒಟ್ಟಾರೆ ಹೋಲಿಸಿದಾಗ ಥೈಲ್ಯಾಂಡ್‌ನ ಆಮದಿನ ಪ್ರಮಾಣವು ಕುಸಿಯುತ್ತಿದೆ. 2013ರಲ್ಲಿ ಭಾರತ ಮತ್ತಯ ಥೈಲ್ಯಾಂಡ್‌ಗಳು ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿವೆ. ಇದರಲ್ಲಿ ಮೊದಲ ಅವಕಾಶವಾಗಿ ಚಿನ್ನದ ಆಭರಣಗಳನ್ನೂ ವಿನಾಯ್ತಿ ವ್ಯಾಪಾರದ ಭಾಗವಾಗಿ ಆಮದು ಮಾಡಿಕೊಳ್ಳಬಹುದಾಗಿದೆ. ಥೈಲ್ಯಾಂಡ್‌ನ ಆಮದಿನ ಬಗ್ಗೆ ವಿಶೇಷ ಆದ್ಯತೆ ನೀಡುವುದನ್ನು ನಿಲ್ಲಿಸಲು ಸಲಹೆ ನೀಡಲಾಗಿದೆ.



Sansad Adarsh Gram Yojana: By 2016, MPs should have at least made one village an ideal village. By the end of five years, each MP should have converted at least five villages into ideal villages.

■ Sri Narendra Modi, Prime Minister of India

## 41. ಜೆನರಂ ಯೋಜನೆಗಳು

**ಪ್ರಶ್ನೆ: (ದಿನಾಂಕ 9 ಜುಲೈ 2014)**

**ಜೆನರಂನ ಭಾಗವಾದ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಗವರ್ನೆನ್ಸ್ (ಯುಐಜಿ) ಮತ್ತು ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಸ್ಕೀಂ ಫಾರ್ ಸ್ಮಾಲ್ ಎಂಡ್ ಮೀಡಿಯಂ ಟೌನ್ (ಯುಐಡಿಎಸ್‌ಎಸ್‌ಎಂಟಿ) ಯೋಜನೆಗಳ ಮಂಜೂರಾತಿ ವಿವರ, ಮುಗಿದ ಕಾಮಗಾರಿಗಳ ವಿವರ ಹಾಗೂ ನಡೆಯುತ್ತಿರುವ ಕಾಮಗಾರಿಗಳ ವಿವರಗಳನ್ನು ನೀಡಿರಿ. ಈ ಕುರಿತು ರಾಜ್ಯಗಳಿಂದ ಬಂದ ವಿಸ್ತರಣಾ ಕೋರಿಕೆಯ ಮಾಹಿತಿಗಳನ್ನು ತಿಳಿಸಿರಿ. ಈ ಯೋಜನೆಗಳನ್ನು ನಿಯಮಿತವಾಗಿ ಪರಾಮರ್ಶಿಸಲು ಇರುವ ವ್ಯವಸ್ಥೆಯೇನು?**

ಉತ್ತರ (ಶ್ರೀ ಎಂ ವೆಂಕಯ್ಯ ನಾಯ್ಡು, ಮಾನ್ಯ ನಗರಾಭಿವೃದ್ಧಿ ಸಚಿವರು)

ಈ ಎರಡೂ ಯೋಜನೆಗಳ ಕುರಿತ ವಿವಿರವಾದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಎಲ್ಲಾ ಯೋಜನೆಗಳನ್ನೂ ಕಾಲಬದ್ಧವಾಗಿ ಸಂಪೂರ್ಣಗೊಳಿಸಲು ರಾಜ್ಯಸರ್ಕಾರಗಳನ್ನು ಕೇಳಿಕೊಳ್ಳಲಾಗಿದೆ. ಈ ಯೋಜನೆಗಳನ್ನು ಸರ್ಕಾರವು ಕೇಂದ್ರೀಯ ಮಂಜೂರಾತಿ ಮತ್ತು ನಿಗಾ ಸಮಿತಿಯ ಮೂಲಕ ಪರಾಮರ್ಶಿಸುತ್ತದೆ. ಇದಲ್ಲದೆ ತ್ರೈಮಾಸಿಕ ಪ್ರಗತಿ ವರದಿಗಳ ಮೂಲಕ ಮತ್ತು ರಾಜ್ಯ ಮಟ್ಟದ ಮಂಜೂರಾತಿ ಸಮಿತಿಗಳ ಮೂಲಕ ಈ ಯೋಜನೆಗಳ ಮೇಲೆ ನಿಗಾ ಇಡಲಾಗಿದೆ.

## 42. ಆಕಾಶ್ ಟ್ಯಾಬ್ಲೆಟ್‌ಗಳು

**ಪ್ರಶ್ನೆ: (ದಿನಾಂಕ 9 ಜುಲೈ 2014)**

**ಕರ್ನಾಟಕವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲೂ ಆಕಾಶ್ ಟ್ಯಾಬ್ಲೆಟ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಪ್ರಸ್ತಾವನೆಯನ್ನು ಸರ್ಕಾರವು ಹೊಂದಿದೆಯೆ? ಹೊಂದಿದ್ದರೆ ಅದರ ವಿವರಗಳನ್ನು ತಿಳಿಸಿರಿ. ಈ ವಿತರಣೆಗೆ ಯಾವುದೇ ಕಾಲಮಿತಿಯನ್ನು ಹೊಂದಲಾಗಿದೆಯೆ? ಇವುಗಳನ್ನು ಪರಿಶಿಷ್ಟ ಜಾತಿ–ವರ್ಗದ, ಅಲ್ಪಸಂಖ್ಯಾತ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸುವ ಪ್ರಸ್ತಾಪವಿದೆಯೆ?**

ಆಕಾಶ್ ಟ್ಯಾಬ್ಲೆಟ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಯಾವುದೇ ಯೋಜನೆಯನ್ನೂ ಸರ್ಕಾರವು ಅನುಮೋದಿಸಿಲ್ಲ. ಆದರೆ ನ್ಯಾಶನಲ್ ಮಿಶನ್ ಆನ್ ಎಜುಕೇಶನ್ ಥ್ರೂ ಇನ್‌ಫಾರ್ಮೇಶನ್ ಟೆಕ್ನಾಲಜಿ (ಎನ್‌ಎಂಇಸಿಐಟಿ) ಯೋಜನೆಯಡಿಯಲ್ಲಿ ಲೋ ಕಾಸ್ಟ್ ಆಕ್ಸೆಸ್ ಡಿವೈಸ್ (ಕಡಿಮೆ ದರದ ಸಾಧನ) ರೂಪಿಸುವ ಯೋಜನೆಯನ್ನು ಐಐಟಿ ರಾಜಸ್ಥಾನಕ್ಕೆ ಅನುಮೋದಿಸಲಾಗಿತ್ತು. ಈ ಯೋಜನೆಯನ್ನು ಮುಂದೆ ಐಐಟಿ ಮುಂಬಯಿಗೆ ವರ್ಗಾಯಿಸಲಾಯಿತು.

## 43. ವನ್ಯಪ್ರಾಣಿಗಳ ಬೇಟೆ

**ಪ್ರಶ್ನೆ: (ದಿನಾಂಕ 9 ಜುಲೈ 2014)**

**ದೇಶದ ರಾಷ್ಟ್ರೀಯ ಉದ್ಯಾನಗಳು ಮತ್ತು ಪ್ರಾಣಿ ಸಂಗ್ರಹಾಲಯಗಳಲ್ಲಿ ವನ್ಯಪ್ರಾಣಿಗಳನ್ನು ಬೇಟೆಯಾಡುವ ಪ್ರಮಾಣವು ಹೆಚ್ಚಾಗಿದೆಯೆ? ಹಾಗಿದ್ದರೆ ಕಳೆದ ಮೂರು ವರ್ಷಗಳಲ್ಲಿ ಈ ಕುರಿತು ವರದಿಯಾದ ಪ್ರಕರಣಗಳ ಮಾಹಿತಿಯನ್ನು ನೀಡಿರಿ. ಅಲ್ಲದೆ ಪ್ರಾಣಿಗಳು ಮತ್ತು ಪ್ರಾಣಿಭಾಗಗಳನ್ನು ಕಳ್ಳಸಾಗಣೆ ಮಾಡಿದ ಪ್ರಕರಣಗಳ ಬಗ್ಗೆಯೂ ಮಾಹಿತಿಗಳನ್ನು ನೀಡಿರಿ. ವನ್ಯಪ್ರಾಣಿಗಳನ್ನು ರಕ್ಷಿಸುವಲ್ಲಿ ಸರ್ಕಾರವು ಯಾವ್ಯಾವ ಕಠಿಣ ಕ್ರಮಗಳನ್ನು ಕೈಗೊಂಡು ಅಪರಾಧಿಗಳನ್ನು ಶಿಕ್ಷಿಸಿದೆ?**





ಉತ್ತರ: ಶ್ರೀ ಪ್ರಕಾಶ್ ಜಾವಡೇಕರ್, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು

ದೇಶದ ರಾಷ್ಟ್ರೀಯ ಉದ್ಯಾನಗಳ ನಿರ್ವಹಣೆಯನ್ನು ಆಯಾ ರಾಜ್ಯಗಳು ನೋಡಿಕೊಳ್ಳುತ್ತವೆ. ರಾಷ್ಟ್ರೀಯ ಉದ್ಯಾನಶಃ ಮಾಹಿತಿಗಳನ್ನು ಸಚಿವಾಲಯವು ಸಂಗ್ರಹಿಸಿಲ್ಲ. ಆದರೆ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಪ್ರಾಣಿ ಸಂಗ್ರಹಾಲಯದಲ್ಲಿ ವನ್ಯಪ್ರಾಣಿಗಳ ಬೇಟೆ ನಡೆದಿಲ್ಲ. ಇಟಾನಗರದಲ್ಲಿ 2012ರಲ್ಲಿ ಒಂದು ಬೆಂಗಾಳ್ ಹುಲಿಯನ್ನು ಸಾಯಿಸಿದ ಪ್ರಕರಣ ವರದಿಯಾಗಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ 2011–14ರ ಮೂರು ವರ್ಷಗಳಲ್ಲಿ 91, 84 ಮತ್ತು 49 ಪ್ರಕರಣಗಳು ವರದಿಯಾಗಿದೆ. ಈ ಕುರಿತು ಅಪರಾಧಿಗಳಿಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

## 44. ಕೀಟನಾಶಕಗಳ ಸರಬರಾಜು

**ಪ್ರಶ್ನೆ: (ದಿನಾಂಕ 8 ಜುಲೈ 2014)**

**ದೇಶದ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಕೀಟನಾಶಕಗಳ ಸರಬರಾಜು ಆಗುತ್ತಿದೆಯೆ? ಈ ಕುರಿತ ವಿವರಗಳನ್ನು ನೀಡಿರಿ. ಕರ್ನಾಟಕವೂ ಸೇರಿದಂತೆ ರಾಜ್ಯಗಳಿಗೆ ರೈತರಿಗೆ ಸಬ್ಸಿಡಿ ದರದಲ್ಲಿ ಕೀಟನಾಶಕಗಳನ್ನು ನೀಡುವ ಕುರಿತು ಹಣಕಾಸಿನ ನೆರವು ನೀಡಲಾದ ವಿವರಗಳನ್ನು ನೀಡಿರಿ. ಈ ಕೀಟನಾಶಕಗಳನ್ನು ಉತ್ಪಾದಿಸುವ ಸಂಸ್ಥೆಗಳ ವಿವರ ನೀಡಿರಿ. ಕೀಟನಾಶಕಗಳು ರೈತರಿಗೆ ಸಬ್ಸಿಡಿ ದರದಲ್ಲಿ ಸೂಕ್ತ ಪ್ರಮಾಣದಲ್ಲಿ ಸರಬರಾಜಾಗುವ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ?**

ಉತ್ತರ (ಡಾ॥ ಸಂಜೀವ್‌ಕುಮಾರ್ ಬಲ್ಯಾನ್, ಮಾನ್ಯ ಕೃಷಿ ಮತ್ತು ಆಹಾರ ಸಂಸ್ಕರಣಾ ಉದ್ಯಮಗಳ ರಾಜ್ಯ ಸಚಿವರು)

ಯಾವುದೇ ರಾಜ್ಯಗಳಲ್ಲಿ ಕೀಟನಾಶಕದ ಕೊರತೆಯಾದ ಬಗ್ಗೆ ವರದಿಗಳು ಬಂದಿಲ್ಲ. ಕೃಷಿ ಮತ್ತು ಸಹಕಾರ ಇಲಾಖೆಯು ರೈತರಿಗೆ ಸಸ್ಯ ಸಂರಕ್ಷಣಾ ರಾಸಾಯನಿಕಗಳು ಮತ್ತು ಜೈವಿಕ ಏಜೆಂಟ್‌ಗಳ ಖರೀದಿಗಾಗಿ ಹೆಕ್ಟೇರಿಗೆ 500 ರೂ. ಅಥವಾ ಶೇ. 50ರಷ್ಟು ಹಣವನ್ನು (ಯಾವುದು ಕಡಿಮೆಯೋ ಅದು) ಕೆಲವು ಗುರುತಿಸಿದ ಜಿಲ್ಲೆಗಳಲ್ಲಿ ನೀಡುತ್ತಿದೆ. ಅಲ್ಲದೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ವಿವಿಧ ವಿಭಾಗಗಳಲ್ಲಿ ನಿಧಿಗಳನ್ನು ನೀಡಲಾಗುತ್ತಿದೆ. ಇಲ್ಲಿ ಯಾವುದೇ ಸಬ್ಸಿಡಿ ಮೊತ್ತವನ್ನು ನಿಗದಿಪಡಿಸಲಾಗಿಲ್ಲ; ರಾಜ್ಯಗಳು ಖರ್ಚಿನ ಅಥವಾ ಸಬ್ಸಿಡಿ ವಿಧಾನವನ್ನು ಅನುಸರಿಸಬಹುದಾಗಿದೆ.

## 45. ಗಂಗಾ ಮಂಥನ

**ಪ್ರಶ್ನೆ: (ದಿನಾಂಕ 24 ಜುಲೈ 2014)**

**ಗಂಗಾ ಮಂಥನ ಎಂಬ ಕಾರ್ಯಕ್ರಮವನ್ನು ಸರ್ಕಾರವು ಇತ್ತೀಚೆಗೆ ಸಂಘಟಿಸಿದೆಯೆ? ಹಾಗಿದ್ದರೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು, ತೆಗೆದುಕೊಂಡ ನಿರ್ಣಯಗಳು, ಮುಂದಿನ ಐದು ವರ್ಷಗಳಿಗೆ ಪ್ರಕಟಿಸಲಾದ ಹಣಕಾಸಿನ ನೆರವು ಮುಂತಾದ ಮಾಹಿತಿಗಳನ್ನು ನೀಡಿರಿ. ಗಂಗಾ ನದಿಯ ಪುನರುಜ್ಜೀವನದ ಬಗ್ಗೆ ಮತ್ತು ದೇಶದ ನದಿಗಳ ಪುನರುಜ್ಜೀವನದ ಬಗ್ಗೆ ಯಾವುದೇ ಕಾರ್ಯಸಾಧ್ಯತಾ ಅಧ್ಯಯನಗಳು ನಡೆದಿವೆಯೆ? ಕಾರ್ಯಕ್ರಮಗಳಿವೆಯೆ? ನದಿಗಳ ಎರಡೂ ಕಡೆಗಳಲ್ಲಿ ಶೌಚಾಲಯಗಳನ್ನು ಸ್ಥಾಪಿಸುವ ಯೋಜನೆಯ ಬಗ್ಗೆ ಕ್ರಮಗಳೇನು? ಗಂಗಾನದಿಗೆ ಹರಿಯುತ್ತಿರುವ ತ್ಯಾಜ್ಯಗಳ ಮಾಹಿತಿ ನೀಡಿರಿ. ಹಾಗೆಯೇ ಪಂಪಾ, ಹಸದೇವ್, ಪಂಬಾ ನದಿಗಳ ಪುನರುಜ್ಜೀವನದ ಬಗ್ಗೆ ಮಾಹಿತಿ ನೀಡಿರಿ.**

ಉತ್ತರ (ಶ್ರೀ ಸಂತೋಷ್‌ಕುಮಾರ್ ಗಂಗ್ವಾರ್, ಮಾನ್ಯ ಜಲ ಸಂಪನ್ಮೂಲ, ಗ್ರಾಮೀಣ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ, ಸಂಸದೀಯ ವ್ಯವಹಾರಗಳು ಹಾಗೂ ಜವುಳಿ ಖಾತೆ ರಾಜ್ಯ ಸಚಿವರು)



It is our social responsibility as citizens of India to help fulfil Gandhiji's vision of Clean India, by his 150th birth anniversary in 2019. Devote 100 hours every year towards the cause of cleanliness.

■ Sri Narendra Modi, Prime Minister of India

2014ರ ಜುಲೈ 7ರಂದು ಹೊಸದಿಲ್ಲಿಯಲ್ಲಿ ಗಂಗಾ ಮಂಥನ ಎಂಬ ರಾಷ್ಟ್ರೀಯ ಮಟ್ಟದ ಅನುಸಂಧಾನ ಸಭೆಯನ್ನು ನಡೆಸಲಾಯಿತು. ಇದರಲ್ಲಿ ಹಲವು ನೀತಿ ನಿರೂಪಕರು, ವಿಷಯ ತಜ್ಞರು, ಪರಿಸರವಾದಿಗಳು, ಆಧ್ಯಾತ್ಮಿಕ ನಾಯಕರು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಇದನ್ನು ನ್ಯಾಶನಲ್ ಮಿಶನ್ ಫಾರ್ ಕ್ಲೀನ್ ಗಂಗಾ ಎಂಬ ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆಯ ನೋಂದಾಯಿತ ಸಂಸ್ಥೆಯ ವತಿಯಿಂದ ಸಂಘಟಿಸಲಾಗಿತ್ತು. ಗಂಗಾ ನದಿಯ ನಿರ್ವಹಣಾ ಯೋಜನೆಯನ್ನು ರೂಪಿಸಲು 7 ಐಐಟಿಗಳ ಜೊತೆಗೆ 10 ವರ್ಷಗಳ ಒಪ್ಪಂದವನ್ನು 2010ರಲ್ಲಿ ಮಾಡಿಕೊಳ್ಳಲಾಗಿದೆ. ಗಂಗಾ ಹೊರತಾಗಿ ಇತರೆ ನದಿಗಳ ಬಗ್ಗೆ ರಾಷ್ಟ್ರೀಯ ನದಿ ಸಂರಕ್ಷಣಾ ನಿರ್ದೇಶನಾಲಯವು ರಾಜ್ಯಗಳೊಂದಿಗೆ ಚರ್ಚಿಸಿ ಯೋಜನೆಗಳನ್ನು ರೂಪಿಸುತ್ತಿದೆ. ಇದು ದೇಶದ 121 ನಗರಗಳಲ್ಲಿನ 40 ನದಿಗಳ ಮಾಲಿನ್ಯದ ಹಾಸನ್ನು ಗುರುತಿಸಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಗಂಗಾ ನದಿಗೆ ಸೇರುತ್ತಿರುವ 144 ತ್ಯಾಜ್ಯ ಹರಿವುಗಳ ಪಟ್ಟಿಯನ್ನು ಮಾಡಿದೆ. ಒಟ್ಟಾರೆ ಗಂಗಾ ನದಿಗೆ ಪ್ರತಿದಿನವೂ 6475 ದಶಲಕ್ಷ ಲೀಟರ್‌ಗಳಷ್ಟು ತ್ಯಾಜ್ಯ ನೀರು ಸೇರುತ್ತಿದೆ. ಪಂಪಾ ಹಸದೇವ್ ನದಿಗಳು 150 ಮಾಲಿನ್ಯದ ನದಿಗಳ ಹಾಸು ಪಟ್ಟಿಯಲ್ಲಿ ಇಲ್ಲ.

## 46. ರೈಲುಗಳಲ್ಲಿ ಆಹಾರ ಕಿಯೋಸ್ಕ್‌ಗಳ ಸ್ಥಾಪನೆ

**ಪ್ರಶ್ನೆ: (ದಿನಾಂಕ 24 ಜುಲೈ 2014)**

**ಇಂಡಿಯನ್ ರೈಲ್ವೆ ಕ್ಯಾಟರಿಂಗ್ ಎಂಡ್ ಟೂರಿಸಂ ಕಾರ್ಪೋರೇಶನ್ (ಐಆರ್‌ಸಿಟಿಸಿ) ಸಂಸ್ಥೆಯು ದೇಶದ ಮೆಟ್ರೋ ನಗರಗಳಲ್ಲಿ ಆಹಾರ ಕಿಯೋಸ್ಕ್‌ಗಳನ್ನು ಸ್ಥಾಪಿಸುವ ಪ್ರಸ್ತಾಪವನ್ನು ಹೊಂದಿದೆಯೆ? ಇದ್ದರೆ, ವಿವರಗಳನ್ನು ನೀಡಿರಿ.**

ಉತ್ತರ (ಶ್ರೀ ಡಿ ವಿ ಸದಾನಂದ ಗೌಡ, ಮಾನ್ಯ ರೈಲ್ವೆ ಸಚಿವರು)

ಐಆರ್‌ಸಿಟಿಸಿಯು ದಿಲ್ಲಿ ಮೆಟ್ರೋ ರೈಲು ಕಾರ್ಪೋರೇಶನ್ ಜೊತೆಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದು ದಿಲ್ಲಿ/ಎನ್‌ಸಿಆರ್ ಪ್ರದೇಶಗಳ ಮೆಟ್ರೋ ನಿಲ್ದಾಣಗಳಲ್ಲಿ 95 ಆಹಾರ ಕಿಯೋಸ್ಕ್‌ಗಳನ್ನು ಸ್ಥಾಪಿಸಲು ಮುಂದಾಗಿದೆ. ಈಗ ಐಆರ್‌ಸಿಟಿಸಿಯು 64 ನಿಲ್ದಾಣಗಳಲ್ಲಿ ಇಂಥ ಆಹಾರ ಕಿಯೋಸ್ಕ್‌ಗಳನ್ನು ನಿರ್ವಹಿಸುತ್ತಿದೆ.

## 47. ಅಪ್ರಾಪ್ತ ನ್ಯಾಯ ಕಾಯ್ದೆ

**ಪ್ರಶ್ನೆ: (ದಿನಾಂಕ 18 ಜುಲೈ 2014)**

**ಅಪ್ರಾಪ್ತ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಕಾಯ್ದೆ ಅಡಿಯಲ್ಲಿ ವಿವಿಧ ರಾಜ್ಯಗಳಲ್ಲಿ ಸ್ಥಾಪನೆಯಾಗಿರುವ ಬಾಲ ಕಲ್ಯಾಣ ಸಮಿತಿಗಳ ಮಾಹಿತಿಯನ್ನು ಒದಗಿಸಿರಿ. ಈ ಕಾಯ್ದೆಯನ್ನು ರದ್ದುಮಾಡಿ ಹೊಸ ಕಾಯ್ದೆಯನ್ನು ತರುವ ಪ್ರಸ್ತಾಪವಿದೆಯೆ? ಈಗಿರುವ ಕಾಯ್ದೆಗೇ ತಿದ್ದುಪಡಿ ತರಬೇಕೆಂದು ಹಲವರು ಬಯಸಿದ್ದಾರೆಯೆ? ಇದಕ್ಕೆ ಸರ್ಕಾರದ ಪ್ರತಿಕ್ರಿಯೆಯೇನು?**

ಉತ್ತರ (ಶ್ರೀಮತಿ ಮನೇಕಾ ಸಂಜಯ್ ಗಾಂಧಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ)

ದೇಶದಲ್ಲಿ ಒಟ್ಟು 626 ಬಾಲ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ. ಬಾಲ ನ್ಯಾಯ ಕಾಯ್ದೆಯ ಬಗ್ಗೆ ಹಲವರು ಕಳವಳ ವ್ಯಕ್ತಪಡಿಸಿದ್ದಾರೆ. ಸಂಸ್ಥೆಗಳಲ್ಲಿ, ಕುಟುಂಬಗಳಲ್ಲಿ ಮತ್ತು ಸಮುದಾಯಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಕಾಯ್ದೆಯನ್ನು ಬದಲಿಸುವ ಬದಲು ಈಗಿರುವುದಕ್ಕೇ ಹಲವು ಬದಲಾವಣೆಗಳನ್ನು ತರಬೇಕು ಎಂದು ಕೆಲವು ಭಾಗೇದಾರಿಗಳು ಹೇಳಿದ್ದಾರೆ. ಆದರೆ ಈ ಕಾಯ್ದೆಯನ್ನು ರದ್ದು ಮಾಡಿ ಮತ್ತೆ ಅದನ್ನು ಜಾರಿ ಮಾಡಲು ಸಚಿವಾಲಯವು ನಿರ್ಧರಿಸಿದೆ.





## 48. ಕ್ರೀಡೆಗಳನ್ನು ಅಭಿವೃದ್ಧಿಪಡಿಸಲು ಯೋಜನೆಗಳು

**ಪ್ರಶ್ನೆ: (ದಿನಾಂಕ 22 ಜುಲೈ 2014)**

**ಕರ್ನಾಟಕದಲ್ಲಿ ಪ್ರಸಕ್ತ ವರ್ಷದಲ್ಲಿ ಕ್ರೀಡೆಗಳನ್ನು ಅಭಿವೃದ್ಧಿಪಡಿಸಲು ಜಾರಿಮಾಡಿದ ಯೋಜನೆಗಳ ವಿವರಗಳನ್ನು ನೀಡಿರಿ. ಈ ಯೋಜನೆಗಳಿಗೆ ನೀಡಿದ ಹಣಕಾಸಿನ ನೆರವೆಷ್ಟು? ಕರ್ನಾಟಕದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸ್ಟೇಡಿಯಂ ನಿರ್ಮಿಸುವ ಪ್ರಸ್ತಾಪವು ಸರ್ಕಾರದ ಮುಂದೆ ಇದೆಯೆ? ಇದ್ದರೆ ವಿವರಗಳನ್ನು ನೀಡಿರಿ.**

ಉತ್ತರ (ಶ್ರೀ ಸರ್ಬಾನಂದ ಸೊನೊವಾಲ್, ಮಾನ್ಯ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ, ಯುವವ್ಯವಹಾರಗಳು ಮತ್ತು ಕ್ರೀಡೆ ಇಲಾಖೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

ಈ ಹಣಕಾಸು ವರ್ಷದಲ್ಲಿ ರಾಜೀವ್ ಗಾಂಧಿ ಖೇಲ್ ಅಭಿಯಾನದ (ಆರ್‌ಜಿಕೆಎ) ಯೋಜನೆಯಡಿ ಪ್ರತಿಯೊಂದೂ ಬ್ಲಾಕ್‌ನಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸುವ ಯೋಜನೆ ಇದೆ. ಇದರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದ್ದು ಒಟ್ಟು 634 ಜಿಲ್ಲೆಗಳಲ್ಲಿನ 6545 ಬ್ಲಾಕ್‌ಗಳಲ್ಲಿ ಈ ಕ್ರೀಡಾ ಸಂಕೀರ್ಣಗಳನ್ನು ನಿರ್ಮಿಸಲಾಗುವುದು. ಇದಲ್ಲದೆ ಕೇಂದ್ರ ಸರ್ಕಾರವು ಅರ್ಬನ್ ಸ್ಪೋರ್ಟ್ಸ್ ಇನ್‌ಫ್ರಾಸ್ಟ್ರಕ್ಚರ್ ಸ್ಕೀಮ್‌ನ್ನು (ಯುಎಸ್‌ಐಎಸ್) ಜಾರಿ ಮಾಡುತ್ತಿದ್ದು ಇದರ ಅಡಿಯಲ್ಲಿ ರಾಜ್ಯ ಸರ್ಕಾರಗಳು, ಸ್ಥಳೀಯಾಡಳಿತ ಸಂಸ್ಥೆಗಳು, ಶಾಳೆ–ಕಾಲೇಜುಗಳು–ವಿಶ್ವವಿದ್ಯಾಲಯಗಳು, ಕ್ರೀಡಾ ನಿಯಂತ್ರಣ ಪ್ರಾಧಿಕಾರಗಳು ನೆರವು ಪಡೆಯಬಹುದು. ಆರ್‌ಜಿಕೆಎ ಯೋಜನೆಯಡಿ ಮತ್ತು ಯುಎಸ್‌ಐಎಸ್‌ಯೋಜನೆಯಡಿ ಕ್ರಮವಾಗಿ 200 ಹಾಗೂ 40 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.

## 49. ಕೇಂದ್ರೀಯ ವಿದ್ಯಾಲಯದ ಪ್ರವೇಶ ನಿಯಮಾವಳಿಗಳು

**ಪ್ರಶ್ನೆ: (ದಿನಾಂಕ 6 ಆಗಸ್ಟ್ 2014, ಚುಕ್ಕಿ ರಹಿತ ಪ್ರಶ್ನೆ)**

**ದೇಶದೆಲ್ಲೆಡೆ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರವೇಶ ಪಡೆಯುವುದಕ್ಕೆ ವಿದ್ಯಾರ್ಥಿಗಳು ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದಕ್ಕೆ ಕಾರಣಗಳೇನು? ಕೇಂದ್ರೀಯ ವಿದ್ಯಾಲಯ ಸಂಘಟನೆಗಳನ್ನು ಸ್ಥಾಪಿಸಿದ ಮೂಲ ಉದ್ದೇಶಗಳೇನು? ಪ್ರವೇಶಾವಕಾಶ ಸರಳೀಕರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

ಸೇನಾ ಸಿಬ್ಬಂದಿಯೂ ಸೇರಿದಂತೆ ಕೇಂದ್ರ ಸರ್ಕಾರದ ವರ್ಗಾವಣೆಗೆ ಒಳಗಾಗುವ ಸಿಬ್ಬಂದಿವರ್ಗದ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಕೇಂದ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಇವುಗಳ ಪ್ರವೇಶ ನೀತಿಗಳನ್ನು ಕಟ್ಟುನಿಟ್ಟಾಗಿ ರೂಪಿಸಲಾಗಿದೆ. ಆದ್ದರಿಂದ ಇಲ್ಲಿ ಪಾಲಕರಿಗೆ ಪ್ರವೇಶದ ಕುರಿತು ಗೊಂದಲ ಉಂಟಾಗುವ ಸಾಧ್ಯತೆ ಇಲ್ಲ.

## 50. ವಿಮಾ ಕಂಪನಿಗಳಿಂದ ಉಂಟಾದ ನಷ್ಟ

**ಪ್ರಶ್ನೆ: (ದಿನಾಂಕ 8 ಆಗಸ್ಟ್ 2014)**

**ಜನರಲ್ ಇನ್‌ಶೂರೆನ್ಸ್ ಕಂಪನಿಯೂ ಸೇರಿದಂತೆ ಹಲವು ವಿಮಾ ಕಂಪನಿಗಳಿಂದ ವಂಚನೆ ನಡೆದಿರುವ ಪ್ರಕರಣಗಳು ಇವೆಯೆ? ಇದ್ದರೆ ಇದರಿಂದ ವಿಮಾ ಸಂಸ್ಥೆಗಳು ನಷ್ಟ ಹೊಂದಿದ ಪ್ರಮಾಣವನ್ನು ತಿಳಿಸಿರಿ. ಈ ಕುರಿತು ಸರ್ಕಾರವು ತನಿಖೆ ನಡೆಸುತ್ತಿದೆಯೆ? ಇವುಗಳ ಫಲಿತಾಂಶವೇನು? ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)



Cleaning up the country cannot be the sole responsibility of sweepers. Do citizens have no role in this? We have to change this mindset. Though it is a difficult task, it can be achieved and for that people will have to change their habits.

■ Sri Narendra Modi, Prime Minister of India

ವಿಮಾ ಕಂಪನಿಗಳ ಸೇವೆಗಳ ಬಗ್ಗೆ ಕಾಲಕಾಲಕ್ಕೆ ದೂರುಗಳನ್ನು ಸ್ವೀಕರಿಸಲಾಗುತ್ತಿದೆ. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಈ ಬಗ್ಗೆ ಏಕೀಕೃತ ದೂರು ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸಿದೆ. ಪ್ರತಿಯೊಂದೂ ವಿಮಾ ಸಂಸ್ಥೆಯೂ ತನ್ನ ಕಚೇರಿಗಳಲ್ಲಿ ನಡೆಯಬಹುದಾದ ವಂಚನೆ ಪ್ರಕರಣಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಚೌಕಟ್ಟನ್ನು ಅಳವಡಿಸಿಕೊಳ್ಳಬೇಕಿದೆ.

## 51. ಎನ್‌ಜಿಓ / ವಿಓಗಳ ಮೂಲಕ ಕಲ್ಯಾಣ ಯೋಜನೆಗಳು

**ಪ್ರಶ್ನೆ: (ದಿನಾಂಕ 8 ಆಗಸ್ಟ್ 2014)**

**ಸ್ವಯಂಸೇವಾ ಸಂಸ್ಥೆಗಳು (ವಿಓ)/ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಓ)ಗಳ ಮೂಲಕ ದೇಶದೆಲ್ಲೆಡೆ ನಡೆಯುತ್ತಿರುವ ಬುಡಕಟ್ಟು ಸಮುದಾಯದ ಕಲ್ಯಾಣ ಯೋಜನೆಗಳ ಮಾಹಿತಿ ನೀಡಿರಿ. ಕಳೆದ ಮೂರು ವರ್ಷಗಳಲ್ಲಿ ಇದಕ್ಕಾಗಿ ಈ ಸಂಸ್ಥೆಗಳಿಗೆ ನೀಡಿದ ಹಣಕಾಸು ಅನುದಾನದ ಮಾಹಿತಿ ನೀಡಿರಿ. ಈ ಯೋಜನೆಗಳ ಜಾರಿಗೆ ಇಟ್ಟುಕೊಂಡ ಗುರಿಗಳಾವುವು? ಈ ಹಣವನ್ನು ಸಂಸ್ಥೆಗಳು ದುರುಪಯೋಗ ಮಾಡಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದ್ದರೆ ಇದರ ವಿವರಗಳನ್ನು ನೀಡಿ. ಈ ಸಂಸ್ಥೆಗಳು ಹಣವನ್ನು ಸೂಕ್ತವಾಗಿ ಬಳಸುವಂತೆ ನೋಡಿಕೊಳ್ಳಲು ಸರ್ಕಾರವು ಹೊಂದಿರುವ ವ್ಯವಸ್ಥೆಯೇನು?**

ಉತ್ತರ (ಶ್ರೀ ಜುವಾಲ್ ಓರಂ, ಮಾನ್ಯ ಬುಡಕಟ್ಟು ವ್ಯವಹಾರಗಳ ಖಾತೆಯ ಸಚಿವರು)

ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿರುವ, ತರಬೇತಿ ನೀಡುತ್ತಿರುವ, ವಿದ್ಯಾರ್ಥಿನಿಯರ ಶಿಕ್ಷಣವನ್ನು ಬಲಪಡಿಸುವ ಮತ್ತು ಅಪಾಯದಲ್ಲಿರುವ ಬುಡಕಟ್ಟು ಸಮೂಹಗಳ ಅಭಿವೃದ್ಧಿಗೆ ನೆರವಾಗುತ್ತಿರುವ ವಿಓ ಮತ್ತು ಎನ್‌ಜಿಓಗಳಿಗೆ ಅನುದಾನ ನೀಡಲಾಗುತ್ತಿದೆ. ಈ ಕೆಲಸಗಳ ಮೇಲುಸ್ತುವಾರಿಯನ್ನು ಜಿಲ್ಲಾ ಅಧಿಕಾರಿಗಳ ವಾರ್ಷಿಕ ತಪಾಸಣೆಯ ಮೂಲಕ, ಲೆಕ್ಕಪರಿಶೋಧನೆಯ ಮೂಲಕ, ಕನ್‌ಕರೆಂಟ್ ನಿಗಾ ಮೂಲಕ ನಿರ್ವಹಿಸಲಾಗುತ್ತಿದೆ.

## 52. ಡಿಎಎಸ್ ವ್ಯವಸ್ಥೆಯ ಜಾರಿ

**ಪ್ರಶ್ನೆ: (ದಿನಾಂಕ 13 ಆಗಸ್ಟ್ 2014)**

**ದೇಶದಲ್ಲಿ ನಾಲ್ಕು ಹಂತಗಳಲ್ಲಿ ಜಾರಿಯಾಗಬೇಕಿದ್ದ ಡಿಜಿಟಲ್ ಅಡ್ರೆಸಬಲ್ ಸಿಸ್ಟಂನ ಜಾರಿಯಲ್ಲಿ ಏನಾದರೂ ವಿಳಂಬವಾಗಿದೆಯೆ? ಈ ವಿಳಂಬವಾಗಿದ್ದರೆ ಅದಕ್ಕೆ ಕಾರಣಗಳೇನು? ಮುಂದಿನ ವಿಳಂಬ ತಪ್ಪಿಸಲು ಕೈಗೊಂಡ ಕ್ರಮಗಳೇನು?**

ಉತ್ತರ: (ಶ್ರೀ ಪ್ರಕಾಶ್ ಜಾವಡೇಕರ್, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

2011ರ ನವೆಂಬರ್ 11ರ ಸುತ್ತೋಲೆಯ ಪ್ರಕಾರ ಕೇಬಲ್ ಟಿವಿಯ ಡಿಜಿಟೈಸೇಶನ್ ಕಾರ್ಯಕ್ರಮವು ಒಟ್ಟು ನಾಲ್ಕು ಹಂತಗಳಲ್ಲಿ 2014ರ ಡಿಸೆಂಬರ್ ಕೊನೆಯ ಹೊತ್ತಿಗೆ ಸಂಪೂರ್ಣಗೊಳ್ಳಬೇಕಿದೆ. ಇದರ ಒಂದನೇ ಮತ್ತು 2ನೇ ಹಂತದ ಕಾರ್ಯವು ಮುಗಿದಿದೆ. ಮೂರನೇ ಹಂತವನ್ನು 2014ರ ಸೆಪ್ಟೆಂಬರ್ ಒಳಗೆ ಮುಗಿಸಲಾಗುವುದು. ಇದನ್ನು ಕಾಲಬದ್ಧವಾಗಿ ಜಾರಿಗೊಳಿಸಲು ಒಂದು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಂನ್ನು ಸ್ಥಾಪಿಸಲಾಗಿದೆ. ಇದಲ್ಲದೆ ಪ್ರಸಾರ ಭಾರತಿ ಮತ್ತು ಬೆಸಿಲ್ ಸಂಸ್ಥೆಗಳು ಈ ಕಾರ್ಯದ ಮೇಲುಸ್ತುವಾರಿ ಮಾಡುತ್ತಿವೆ.

## 53. ಬುಡಕಟ್ಟು ಪ್ರದೇಶದಲ್ಲಿ ಶಿಕ್ಷಣ

**ಪ್ರಶ್ನೆ: (ದಿನಾಂಕ 13 ಆಗಸ್ಟ್ 2014)**

**ಬುಡಕಟ್ಟು ಜನರು ಶಿಕ್ಷಣದಲ್ಲಿ ಹಿಂದೆ ಬೀಳುತ್ತಿದ್ದಾರೆಯೆ? ಹಾಗಿದ್ದರೆ ಈ ಕುರಿತು ಮಾಹಿತಿಗಳನ್ನು ನೀಡಿರಿ. ಬುಡಕಟ್ಟು ಪ್ರದೇಶಗಳಲ್ಲಿ ಮತ್ತು ದೂರದ ಪ್ರದೇಶಗಳಲ್ಲಿ ಹೆಚ್ಚಿನ ಶಾಲೆಗಳನ್ನು ತೆರೆಯಲು ಸರ್ಕಾರವು ಉದ್ದೇಶಿಸಿದೆಯೆ? ಈ ಕುರಿತು ಕೈಗೊಂಡಿರುವ ಕಾರ್ಯಯೋಜನೆಗಳೇನು?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

ಪ್ರಾಥಮಿಕ ಶಿಕ್ಷಣದ ಪ್ರವೇಶದ ಪ್ರಮಾಣದಲ್ಲಿ ಪರಿಶಿಷ್ಟ ವರ್ಗದ ನೋಂದಾವಣೆಯು ಶೇಕಡಾ 10.63ರಷ್ಟಿದೆ. ಇದು ಈ ಜನರ ಜನಸಂಖ್ಯೆಯ ಪ್ರಮಾಣಕ್ಕಿಂತ (ಶೇ.8.6) ಹೆಚ್ಚು ಎಂಬುದು 2011ರ ಜನಗಣತಿಯಲ್ಲಿ ತಿಳಿದುಬಂದಿದೆ. ಹೀಗಿದ್ದೂ ರಾಷ್ಟ್ರೀಯ ಶಾಲೆ ಬಿಡುವ ಪ್ರಮಾಣ ಶೇ. 4.17 ಇದ್ದರೆ, ಬುಡಕಟ್ಟು ಜನರ ಮಕ್ಕಳಲ್ಲಿ ಈ ಪ್ರಮಾಣವು ಶೇ. 8.3 ರಷ್ಟಿದೆ. ಬುಡಕಟ್ಟು ಜನರಿರುವ ಒಟ್ಟು 109 ವಿಶೇಷ ಗಮನದ ಜಿಲ್ಲೆಗಳನ್ನು ಸರ್ಕಾರವು ಗುರುತಿಸಿದೆ. 2014–15ರ ವರ್ಷದಲ್ಲಿ ಸರ್ವ ಶಿಕ್ಷಾ ಅಭಿಯಾನದಲ್ಲಿ 6468.72 ಕೋಟಿ ರೂ.ಗಳನ್ನು ಇದಕ್ಕೆ ಮೀಸಲಿಡಲಾಗಿದೆ. ಹಲವು ಪ್ರಾಥಮಿಕ, ಮಾಧ್ಯಮಿಕ ಮತ್ತು ಕಸ್ತೂರಬಾ ಗಾಂಧಿ ಬಾಲಕಿಯರ ವಿದ್ಯಾಲಯಗಳನ್ನು ಮಂಜೂರು ಮಾಡಲಾಗಿದೆ. ಈ ಜಿಲ್ಲೆಗಳಲ್ಲಿ 2263 ಶಾಲೆಗಳನ್ನು ತೆರೆಯಲಾಗಿದೆ / ಮೇಲ್ದರ್ಜೆಗೇರಿಸಲಾಗಿದೆ; 4388 ಶಾಲೆಗಳನ್ನು ಬಲಪಡಿಸಲಾಗಿದೆ.

## 54. ಪ್ಲಾಸ್ಟಿಕ್ ತ್ಯಾಜ್ಯದಿಂದ ಇಂಧನ

**ಪ್ರಶ್ನೆ: (ದಿನಾಂಕ 13 ಆಗಸ್ಟ್ 2014)**

**ಕೆಲವು ದೇಶಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ದ್ರವ ಹೈಡ್ರೋಕಾರ್ಬನ್ ಉತ್ಪಾದನೆ ಮಾಡಲಾಗುತ್ತಿದೆಯೆ? ಹಾಗಿದ್ದರೆ ಈ ಬಗ್ಗೆ ಮಾಹಿತಿಗಳನ್ನು ನೀಡಿರಿ. ಈ ಕುರಿತು ನಮ್ಮ ದೇಶದಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆಯೆ? ಈಗ ಪ್ಲಾಸ್ಟಿಕ್‌ನಿಂದ ಇಂಧನ ಉತ್ಪಾದಿಸುವ ತಂತ್ರಜ್ಞಾನವು ಯಾವ ಹಂತದಲ್ಲಿದೆ?**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ ಮತ್ತು ಪ್ರಧಾನಮಂತ್ರಿಯವರ ಕಚೇರಿ ಇಲಾಖೆಗಳ ರಾಜ್ಯ ಸಚಿವರು)

ಹೌದು. ಅಮೆರಿಕಾ, ಜರ್ಮನಿ, ಜಪಾನ್, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ದ್ರವ ಹೈಡ್ರೋಕಾರ್ಬನ್ ಉತ್ಪಾದಿಸುವ ತಂತ್ರಜ್ಞಾನದ ಅಭಿವೃದ್ಧಿ ನಡೆಯುತ್ತಿದೆ. ಭಾರತದಲ್ಲಿ ಡೆಹ್ರಾಡೂನ್‌ನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಸಂಸ್ಥೆಯು ಒಂದು ದಶಕದ ಸಂಶೋಧನೆಯ ತರುವಾಯ ಇಂಥ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಗ್ಯಾಸ್ ಅಥಾರಿಟಿ ಆಫ್ ಇಂಡಿಯಾವು ಈ ತಂತ್ರಜ್ಞಾನದಲ್ಲಿ ಪ್ಲಾಸ್ಟಿಕ್‌ನ್ನು ಗ್ಯಾಸೊಲಿನ್ ಆಗಿ ಪರಿವರ್ತಿಸುವುದಕ್ಕೆ ಅಥವಾ ಡೀಸೆಲ್ ಅಥವಾ ಆರೋಮ್ಯಾಟಿಕ್ ವಸ್ತುವಾಗಿ ಪರಿವರ್ತಿಸುವುದಕ್ಕೆ ಬೇಕಾದ ಯೋಜನೆಗೆ ಪ್ರಾಯೋಜಕತ್ವ ನೀಡಿದೆ. ಈ ತಂತ್ರಜ್ಞಾನವನ್ನು ಸಾರ್ವಜನಿಕ ಬಳಕೆಗಾಗಿ ಬಿಡುಗಡೆ ಮಾಡುವುದಕ್ಕೆ ಐಐಪಿಯು ಪ್ರಯತ್ನಗಳನ್ನು ನಡೆಸಿದೆ.



**Sanitation should not be seen as a political tool, but should only be connected to patriotism (rashtrabhakti) and commitment to public health.**

■ Sri Narendra Modi, Prime Minister of India

## 55. ರಾಷ್ಟ್ರೀಯ ಪ್ರಯೋಗಾಲಯಗಳ ಜಾಲ

**ಪ್ರಶ್ನೆ: (ದಿನಾಂಕ 13 ಆಗಸ್ಟ್ 2014)**

**ಪ್ರತಿಯೊಂದೂ ರಾಜ್ಯದಲ್ಲಿ ವಿಜ್ಞಾನದ ಪ್ರಗತಿಯು ಸಮಾನವಾಗಿ ಆಗಬೇಕು ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ದೇಶದಾದ್ಯಂತ ರಾಷ್ಟ್ರೀಯ ಪ್ರಯೋಗಾಲಯಗಳ ಜಾಲವನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೆ? ಇದ್ದರೆ ಈ ವಿವರಗಳನ್ನು ನೀಡಿರಿ. ಭಾರತದಲ್ಲಿ ವೈಜ್ಞಾನಿಕ ಸಮುದಾಯವನ್ನು ರೂಪಿಸಲು ಅತ್ಯುತ್ತಮ ವಿಜ್ಞಾನ ಪ್ರತಿಭೆಗಳನ್ನು ಆಕರ್ಷಿಸುವ ಯಾವುದೇ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಿದೆಯೆ? ರೂಪಿಸಿದ್ದರೆ ಈ ಕುರಿತ ವಿವರಗಳು ಮತ್ತು ಇದಕ್ಕೆ ನೋಂದಾವಣೆಯಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ತಿಳಿಸಿರಿ.**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ ಮತ್ತು ಪ್ರಧಾನಮಂತ್ರಿಯವರ ಕಚೇರಿ ಇಲಾಖೆಗಳ ರಾಜ್ಯ ಸಚಿವರು)

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ದೇಶದಲ್ಲಿ ಒಟ್ಟು 69 ಸಂಶೋಧನಾ ಪ್ರಯೋಗಾಲಯಗಳಿವೆ. ಇವುಗಳ ರಾಜ್ಯಶಃ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಜೀವತಂತ್ರಜ್ಞಾನ ಇಲಾಖೆಯೂ ವಿವಿಧ ರಾಜ್ಯಗಳಲ್ಲಿ 168 ಕೇಂದ್ರಗಳನ್ನು ಸ್ಥಾಪಿಸಿದೆ. ವಿಜ್ಞಾನ ಪ್ರತಿಭೆಗಳನ್ನು ಆಕರ್ಷಿಸಲು ಸರ್ಕಾರವು ಈಗ ಇನ್‌ಸ್ಪೈರ್ (ಇನ್ನೋವೇಶನ್ ಇನ್ ಸೈನ್ಸ್ ಪರ್ಸೂಟ್ ಫಾರ್ ಇನ್‌ಸ್ಪೈರ್ಡ್ ರಿಸರ್ಚ್) ಎಂಬ ಕಾರ್ಯಕ್ರಮವನ್ನು ಆರಂಭಿಸಿದೆ. ಇದರಲ್ಲಿ ಪ್ರತೀ ವರ್ಷ ಎರಡು ಲಕ್ಷ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರಿಗೆ ವಿಜ್ಞಾನದ ಮಾದರಿಗಳನ್ನು ರೂಪಿಸಲು 5000 ರೂ.ಗಳನ್ನು ನೀಡಲಾಗುವುದು. ಇದಲ್ಲದೆ ಇನ್‌ಸ್ಪೈರ್ ಮೂಲಕ 50 ಸಾವಿರ ಜನರಿಗೆ ವಿದ್ಯಾರ್ಥಿವೇತನವನ್ನೂ ನೀಡಲಾಗುತ್ತಿದೆ. ಪ್ರತೀ ವರ್ಷವೂ 80 ಸಾವಿರ ರೂ.ಗಳ ಸ್ಕಾಲರ್‌ಶಿಪ್ ನೀಡಿ ಉನ್ನತ ಶಿಕ್ಷಣಕ್ಕೆ ಬೆಂಬಲ ನೀಡಲಾಗಿದೆ. ಕಿಶೋರ್ ವೈಗ್ಯಾನಿಕ್ ಪ್ರೋತ್ಸಾಹನ್ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸಂಶೋಧನಾ ರಂಗದಲ್ಲಿ ಅಧ್ಯಯನ ನಡೆಸಲು ಉತ್ತೇಜನ ನೀಡಲಾಗುತ್ತಿದೆ. ಪ್ರತೀ ವರ್ಷ ಸ್ನಾತಕೋತ್ತರ ಮಟ್ಟದಲ್ಲಿ ಮೊದಲ ರ್‍ಯಾಂಕ್ ಪಡೆದವರಿಗೆ 1000 ಫೆಲೋಶಿಪ್‌ಗಳನ್ನು ಮತ್ತು ಸಿಬ್ಬಂದಿ ಪ್ರಶಸ್ತಿಯನ್ನೂ ನೀಡಲಾಗುತ್ತಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 14074 ರಾಷ್ಟ್ರೀಯ ಫೆಲೋಶಿಪ್‌ಗಳನ್ನು ನೀಡಲಾಗಿದೆ.

## 56. ಅಂಬೇಡ್ಕರ್ ಹಸ್ತಶಿಲ್ಪ ವಿಕಾಸ ಯೋಜನೆ

**ಪ್ರಶ್ನೆ: (ದಿನಾಂಕ 14 ಅಗಸ್ಟ್ 2014)**

**ಕರ್ನಾಟಕದಲ್ಲಿ ಅಂಬೇಡ್ಕರ್ ಹಸ್ತಶಿಲ್ಪ ವಿಕಾಸ್ ಯೋಜನಾ (ಎಎಚ್‌ವಿವೈ) ಅಡಿಯಲ್ಲಿ ಮಂಜೂರಾದ ಮತ್ತು ಸಂಪೂರ್ಣವಾದ ಯೋಜನೆಗಳ ಮಾಹಿತಿ ಕೊಡಿ. ಈ ಯೋಜನೆಯ ಫಲಶ್ರುತಿ ಮತ್ತು ಫಲಾನುಭವಿಗಳ ಮಾಹಿತಿಯನ್ನೂ ಕೊಡಿ. ಈ ಯೋಜನೆಯಲ್ಲಿ ಎಸ್‌ಸಿ ಮತ್ತು ಒಬಿಸಿಗಳನ್ನೂ ಸೇರಿಸಲಾಗಿದೆಯೆ? ಈ ಯೋಜನೆಯನ್ನು ವಿಸ್ತರಿಸಲು ಸರ್ಕಾರವು ಹಾಕಿಕೊಂಡ ಕ್ರಮಗಳೇನು?**

ಉತ್ತರ (ಶ್ರೀ ಸಂತೋಷ್‌ಕುಮಾರ್ ಗಂಗ್ವಾರ್, ಮಾನ್ಯ ಜಲ ಸಂಪನ್ಮೂಲ, ಗ್ರಾಮೀಣ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ, ಸಂಸದೀಯ ವ್ಯವಹಾರಗಳು ಹಾಗೂ ಜವುಳಿ ಖಾತೆ ರಾಜ್ಯ ಸಚಿವರು)

ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 22 ಸಂಸ್ಥೆಗಳ ಮೂಲಕ ವಿದ್ಯಾರ್ಥಿಗಳಿಗೆ ನೆರವು ನೀಡಲಾಗಿದೆ. ಕೌಶಲ್ಯ ಅಭಿವೃದ್ಧಿ, ವಿನ್ಯಾಸ ಅಭಿವೃದ್ಧಿ, ಮಾರುಕಟ್ಟೆ, ಸಾಧನಗಳ ಸರಬರಾಜು – ಹೀಗೆ ಹಲವು ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಲಾಭವಾಗಿದೆ. ಈ ಯೋಜನೆಯನ್ನು 12ನೇ ಪಂಚವಾರ್ಷಿಕ ಯೋಜನೆಯಲ್ಲೂ ಮುಂದುವರಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ಯೋಜನೆಯನ್ನು 12 ಕ್ಲಸ್ಟರ್‌ಗಳಿಗೆ ಅನ್ವಯಿಸಲಾಗುವುದು.





## 57. ಕಾಂಕ್ರೀಟ್ ರಸ್ತೆಗಳು

**ಪ್ರಶ್ನೆ: (ದಿನಾಂಕ 7 ಆಗಸ್ಟ್ 2014)**

**ಸರ್ಕಾರವು ದೇಶದ ರಾಷ್ಟ್ರೀಯ ಹೆದ್ದಾರಿಗಳನ್ನು ಬಿಟ್ಯುಮೆನ್ ಬದಲಿಗೆ ಕಾಂಕ್ರೀಟ್ ಬಳಸಿ ನಿರ್ಮಿಸುವ ಪ್ರಸ್ತಾವನೆಯನ್ನು ಹೊಂದಿದೆಯೆ? ಇದ್ದರೆ ಈ ಕುರಿತ ತಕ್ಷಣದ ಹೂಡಿಕೆ ವಿವರಗಳನ್ನು ತಿಳಿಸಿ.ಈ ಕಾಂಕ್ರೀಟ್ ರಸ್ತೆಗಳ ಖರ್ಚುವೆಚ್ಚ ಮತ್ತು ಬಾಳಿಕೆ ಕುರಿತು ಅಧ್ಯಯನ ನಡೆದಿದೆಯೆ? ಪಿಪಿಪಿ ಮಾದರಿ ಮೂಲಕ ರಸ್ತೆ ನಿರ್ಮಿಸುವ ಖಾಸಗಿ ಸಂಸ್ಥೆಗಳು ತಮ್ಮದೇ ವಿನ್ಯಾಸಗಳನ್ನು ಅಳವಡಿಸಲು ಅವಕಶ ಇದೆಯೆ? ಕಾಂಕ್ರೀಟ್ ರಸ್ತೆಗಳ ದುರಸ್ತಿ ವೆಚ್ಚವು ಡಾಂಬರು ರಸ್ತೆಗಿಂತ ದುಬಾರಿಯೆ?**

ಉತ್ತರ (ಶ್ರೀ ಕೃಷ್ಣಪಾಲ್ ಗುರ್ಜರ್, ಭೂಸಾರಿಗೆ ಮತ್ತು ಹೆದ್ದಾರಿ ರಾಜ್ಯ ಸಚಿವರು)

ತಾಳಿಕೆ ಮತ್ತು ಜೀವಿತಾವಧಿಯ ಹಿನ್ನೆಲೆಯಲ್ಲಿಯೇ ರಸ್ತೆಗಳನ್ನು ನಿರ್ಮಿಸಬೇಕು ಎಂಬುದು ಸಚಿವಾಲಯದ ಉದ್ದೇಶ. ನಿಜಕ್ಕೂ ಕಾಂಕ್ರೀಟ್ ರಸ್ತೆಗಳ ಆರಂಭಿಕ ವೆಚ್ಚವು ಬಿಟ್ಯುಮೆನ್ ರಸ್ತೆಗಳಿಗಿಂತ ಹೆಚ್ಚಾದರೂ, ಮುಂದಿನ ದಿನಗಳಲ್ಲಿ ಕಾಂಕ್ರೀಟ್ ರಸ್ತೆಗಳನ್ನೇ ಹೊಂದಲು ನಿರ್ಧರಿಸಲಾಗಿದೆ. ಆದರೆ ಈ ಕುರಿತ ಹೆಚ್ಚಿನ ಅಧ್ಯಯನ ನಡೆದಿಲ್ಲ. ಹೆದ್ದಾರಿ ನೀತಿ ನಿಯಮಾವಳಿಗಳ ಪ್ರಕಾರ ಪಿಪಿಪಿ ಆಧಾರದ ಖಾಸಗಿ ರಸ್ತೆ ನಿರ್ಮಾಣ ಗುತ್ತಿಗೆದಾರರು ಅಂತಾರಾಷ್ಟ್ರೀಯ ಗುಣಮಟ್ಟದ ಅಂಶಗಳನ್ನು, ಪರ್ಯಾಯ ನಿರ್ದಿಷ್ಟತೆಗಳನ್ನು ಅಳವಡಿಸಿಕೊಳ್ಳಬಹುದಾಗಿದೆ; ಆದರೆ ಇವು ಭಾರತೀಯ ಗುಣಮಟ್ಟದ ಅಂಶಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಇರಬೇಕಾಗುತ್ತದೆ. ಕಾಂಕ್ರೀಟ್ ರಸ್ತೆಗಳು ಬಿಟ್ಯುಮೆನ್ ರಸ್ತೆಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ; ಇವುಗಳಿಗೆ ಹೆಚ್ಚಿನ ದುರಸ್ತಿ ಅಗತ್ಯ ಇರುವುದಿಲ್ಲ.

## 58. ಖಾಲಿ ಇರುವ ಹುದ್ದೆಗಳು

**ಪ್ರಶ್ನೆ: (ದಿನಾಂಕ 7 ಆಗಸ್ಟ್ 2014)**

**ರೈಲ್ವೆ ವಲಯಗಳಲ್ಲಿ ಮೀಸಲಾತಿ ಸೇರಿದಂತೆ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಕೊಡಿ; ಈ ಹುದ್ದೆಗಳು ಎಷ್ಟು ಕಾಲಾವಧಿಯಿಂದ ಖಾಲಿ ಇವೆ ಎಂಬುದನ್ನೂ ತಿಳಿಸಿ. ಈ ಸನ್ನಿವೇಶದಿಂದಾಗಿ ರೈಲ್ವೆಯ ದಕ್ಷತೆಯ ಮೇಲೆ ದುಷ್ಪರಿಣಾಮ ಉಂಟಾಗಿಲ್ಲವೆ? ಆಗಿದ್ದರೆ ವಿವರಗಳನ್ನು ಕೊಡಿ. ಖಾಲಿ ಹುದ್ದೆಗಳನ್ನು ತುಂಬಲು ಕೈಗೊಂಡ ಕ್ರಮಗಳನ್ನು ತಿಳಿಸಿ.**

ಉತ್ತರ (ಶ್ರೀ ಮನೋಜ್ ಸಿನ್ಹಾ, ಮಾನ್ಯ ರೈಲ್ವೆ ಖಾತೆ ರಾಜ್ಯ ಸಚಿವರು)

ರೈಲ್ವೆ ವಲಯಗಳಲ್ಲಿ 2014ರ ಏಪ್ರಿಲ್ 1ರಂದು ಇದ್ದಹಾಗೆ ಮೀಸಲಾತಿ ಹುದ್ದೆಗಳೂ ಸೇರಿದಂತೆ ಒಟ್ಟು 225863 ಹುದ್ದೆಗಳು ಖಾಲಿ ಇದ್ದವು ಎಂದು ಅಂದಾಜಿಸಲಾಗಿದೆ. ನಿವೃತ್ತಿ, ಸ್ವಯಂನಿವೃತ್ತಿ, ಸಾವು, ಹೊಸ ಹುದ್ದೆಗಳ ಸೃಜನೆ – ಇವುಗಳಿಂದಾಗಿ ಹುದ್ದೆಗಳು ಖಾಲಿಯಾಗುತ್ತವೆ. ಹುದ್ದೆಗಳನ್ನು ತುಂಬುವುದು ಒಂದು ನಿರಂತರ ಪ್ರಕ್ರಿಯೆಯಾಗಿದ್ದು ಈ ಕುರಿತ ಪ್ರಕ್ರಿಯೆಗಳು ಜಾರಿಯಲ್ಲಿವೆ. ಆದರೆ ಹುದ್ದೆಗಳು ಖಾಲಿ ಇರುವುದರಿಂದ ದಕ್ಷತೆಯ ಮೇಲೆ ಯಾವುದೇ ಪರಿಣಾಮ ಉಂಟಾಗಿಲ್ಲ; ಸುರಕ್ಷತೆಯ ವಿಷಯದಲ್ಲೂ ಯಾವುದೇ ರಾಜಿ ಮಾಡಿಲ್ಲ. 2013–14ರ ವರ್ಷದಲ್ಲಿ 73005 ವ್ಯಕ್ತಿಗಳನ್ನು ಸೇರಿಸಿಕೊಳ್ಳಲಾಯಿತು ಮತ್ತು 81000 ಹುದ್ದೆಗಳಿಗೆ ಇಂಡೆಂಟ್ ಮಾಡಲಾಯಿತು.

## 59. ಆರ್‌ಜಿಜಿವಿವೈ ಯೋಜನೆಯಲ್ಲಿ ಗ್ರಾಮಗಳಿಗೆ ವಿದ್ಯುತ್

**ಪ್ರಶ್ನೆ: (ದಿನಾಂಕ 7 ಆಗಸ್ಟ್ 2014)**

**ಕರ್ನಾಟಕ, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡುಗಳಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ (ಆರ್‌ಜಿಜಿವಿವೈ) ಹೆಚ್ಚುವರಿ ಯೋಜನೆಯನ್ನು ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ**



I have invited nine people and asked them to come to public places and work towards a Clean India. I ask them to invite 9 more people too.

■ Sri Narendra Modi, Prime Minister of India

**ಮುಂದಿದೆಯೆ? ಇದ್ದರೆ ವಿವರಗಳನ್ನು ತಿಳಿಸಿ. ಈ ಕುರಿತು ಹೊಂದಿರುವ ಕಾಲಮಿತಿಗಳನ್ನು ತಿಳಿಸಿರಿ.**

ಉತ್ತರ: (ಶ್ರೀ ಪೀಯೂಶ್ ಗೋಯೆಲ್, ಮಾನ್ಯ ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ (ಸ್ವತಂತ್ರ ಖಾತೆ) ರಾಜ್ಯ ಸಚಿವರು)

ಆರ್‌ಜಿಜಿವಿವೈ ಯೋಜನೆಯನ್ನು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರಿಸಬೇಕೆಂದು ಸರ್ಕಾರವು ಅನುಮೋದನೆ ನೀಡಿದೆ. 100ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಇದನ್ನು ಜಾರಿಗೊಳಿಸಲಾಗುವುದು. ಇವುಗಳಲ್ಲಿ ಮೇಲೆ ಉಲ್ಲೇಖಿಸಿದ ರಾಜ್ಯಗಳ ಸ್ಥಳಗಳೂ ಸೇರಿವೆ. ಈ ಯೋಜನೆ ಅಡಿಯಲ್ಲಿ ಈ ರಾಜ್ಯಗಳಿಂದ 273 ಯೋಜನಾ ಪ್ರಸ್ತಾವನೆಗಳು ಬಂದಿದ್ದು ಒಟ್ಟು 12468 ವಿದ್ಯುತ್ ಸಂಪರ್ಕ ಇಲ್ಲದ ಹಳ್ಳಿಗಳಿಗೆ ವಿದ್ಯುತ್ ನೀಡಲು ಮಂಜೂರು ಮಾಡಲಾಗಿದೆ. ಆರ್‌ಜಿಜಿವಿವೈ ನಿಯಮಾವಳಿಗಳ ಪ್ರಕಾರ ಈ ಯೋಜನೆಗಳನ್ನು ಗುತ್ತಿಗೆ ನೀಡಿದ 24 ತಿಂಗಳುಗಳ ಒಳಗೆ ಮುಗಿಸಬೇಕಿರುತ್ತದೆ.

## 60. ಹೊಸ ಕೃಷಿ ಸಂಸ್ಥೆಗಳ ಆರಂಭ

**ಪ್ರಶ್ನೆ: (ದಿನಾಂಕ 5 ಆಗಸ್ಟ್ 2014)**

**ಸರ್ಕಾರವು ಈಗ ದೇಶದ ವಿವಿಧ ಭಾಗಗಳಲ್ಲಿ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಗ್ಯಾನ್ ಕೇಂದ್ರ, ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್‌ನಂಥ ಹೊಸ ಕೃಷಿ ಸಂಸ್ಥೆಗಳನ್ನು ಆರಂಭಿಸುವ ಪ್ರಸ್ತಾಪವನ್ನು ಹೊಂದಿದೆಯೆ? ಇದ್ದರೆ ಇವುಗಳ ವಿವರಗಳನ್ನು ತಿಳಿಸಿರಿ. ಈ ಸಂಸ್ಥೆಗಳನ್ನು ಯಾವಾಗ ಆರಂಭಿಸುವ ಸಾಧ್ಯತೆ ಇದೆ?**

ಉತ್ತರ (ಡಾ|| ಸಂಜೀವ್‌ಕುಮಾರ್ ಬಲ್ಯಾನ್, ಮಾನ್ಯ ಕೃಷಿ ಮತ್ತು ಆಹಾರ ಸಂಸ್ಕರಣೆ ಖಾತೆ ರಾಜ್ಯ ಸಚಿವರು)

ಹೌದು. ಐಸಿಎಆರ್ ಸಂಸ್ಥೆಯು ಆಂಧ್ರಪ್ರದೇಶ ಮತ್ತು ರಾಜಸ್ಥಾನದಲ್ಲಿ ತಲಾ ಒಂದು ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಯೋಜನೆ ಹೊಂದಿದೆ. ತೆಲಂಗಾಣ ಮತ್ತು ಹರ್ಯಾನಾದಲ್ಲಿ ತಲಾ ಒಂದು ತೋಟಗಾರಿಕೆ ವಿಶ್ವವಿದ್ಯಾಲಯಗಳ ಸ್ಥಾಪನೆ ಪ್ರಸ್ತಾಪ ಇದೆ. ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮಾದರಿಯಲ್ಲಿ ಅಸಾಂ ಮತ್ತು ಜಾರ್ಖಂಡದಲ್ಲಿ ತಲಾ ಒಂದು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ಇದೆ. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಿಹಾರ ಮತ್ತು ಮೇಘಾಲಯದಲ್ಲಿ ತಲಾ ಒಂದು ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗುವುದು. ಅಲ್ಲದೆ 12ನೇ ಪಂಚವಾರ್ಷಿಕ ಯೋಜನಯಲ್ಲಿ ಐಸಿಎಆರ್ ಸಂಸ್ಥೆಯು 60 ಹೆಚ್ಚುವರಿ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ಹೊಂದಿದೆ.

## 61. ಮಧ್ಯಾಹ್ನದ ಬಿಸಿಯೂಟ ಯೋಜನೆ

**ಪ್ರಶ್ನೆ: (ದಿನಾಂಕ 30 ಜುಲೈ 2014)**

**ಸರ್ಕಾರವು ಈಗಿನ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಹೈಯರ್ ಸೆಕೆಂಡರಿ ಶಾಲೆಗಳಿಗೆ ವಿಸ್ತರಿಸುವ ಪ್ರಸ್ತಾಪವನ್ನು ಹೊಂದಿದೆಯೆ? ಈಗಿರುವ ವ್ಯವಸ್ಥೆಯಲ್ಲಿ ಕಳಪೆ ಊಟವನ್ನು ನೀಡುತ್ತಿರುವ ಬಗ್ಗೆ ದೂರುಗಳು ಬಂದಿವೆಯೆ? ಕಳೆದ ಮೂರು ವರ್ಷಗಳಲ್ಲಿ ಹೀಗೆ ಬಂದ ದೂರುಗಳ ಮಾಹಿತಿ ಕೊಡಿ. ಈ ಯೋಜನೆಯಲ್ಲಿ ವಿಷಾಹಾರ ನೀಡಿದ ಪ್ರಕರಣಗಳು ದಾಖಲಾಗಿವೆಯೆ? ಇದ್ದರೆ ಮಾಹಿತಿ ಕೊಡಿ. ಈ ಪ್ರಕರಣಗಳ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

ಕಳಪೆ ಊಟ ನೀಡಲಾಗಿದೆ ಎಂದು ದೇಶದೆಲ್ಲೆಡೆಯಿಂದ ಒಟ್ಟು 108 ದೂರುಗಳನ್ನು ಕಳೆದ ಮೂರು ವರ್ಷಗಳಲ್ಲಿ





ಸ್ವೀಕರಿಸಲಾಗಿದೆ. ಈ ದೂರುಗಳ ಪೈಕಿ 66 ಪ್ರಕರಣಗಳ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ; 28 ಪ್ರಕರಣಗಳಲ್ಲಿ ಆರೋಪಗಳು ಸಾಬೀತಾಗಿಲ್ಲ. ಇನ್ನುಳಿದ 38 ಪ್ರಕರಣಗಳ ಬಗ್ಗೆ ರಾಜ್ಯ ಸರ್ಕಾರಗಳು ಕ್ರಮ ಕೈಗೊಂಡಿವೆ. ಈ ಕುರಿತ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

## 62. ಕೆಳ ಮತ್ತು ಮಧ್ಯಮ ಆದಾಯದ ಗುಂಪುಗಳಿಗೆ ಅಗ್ಗದ ಮನೆಗಳ ನಿರ್ಮಾಣ

**ಪ್ರಶ್ನೆ: (ದಿನಾಂಕ 30 ಜುಲೈ 2014)**

**ಕೆಳ ಮತ್ತು ಮಧ್ಯಮ ಆದಾಯಕ್ಕೆ ಸೇರಿದ ಗುಂಪುಗಳಿಗೆ ಅಗ್ಗದ ಮನೆಗಳನ್ನು ನೀಡುವ ವಿವಿಧ ಯೋಜನೆಗಳು ತಮ್ಮ ಗುರಿಯನ್ನು ಸಾಧಿಸುವಲ್ಲಿ ವಿಫಲವಾಗಿವೆಯೆ? ಈಗ ನಗರ/ಮೆಟ್ರೋ ಪ್ರದೇಶಗಳಲ್ಲಿ ಇಂಥವರಿಗೆ ಮನೆಗಳನ್ನು ಪಡೆಯುವುದೇ ಎಟುಕಲಾರದ ಸಂಗತಿಯಾಗಿದೆಯೆ? ಹಾಗಿದ್ದರೆ ಇದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು? ನಗರ ಪ್ರದೇಶಗಳಲ್ಲಿ ಅಗ್ಗದ ಮನೆಗಳನ್ನು ಕಟ್ಟಲು ಇರುವ ತೊಡಕುಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು?**

ಉತ್ತರ (ಶ್ರೀ ಎಂ ವೆಂಕಯ್ಯ ನಾಯ್ಡು, ಮಾನ್ಯ ನಗರಾಭಿವೃದ್ಧಿ ಸಚಿವರು)

ರಾಜೀವ್ ಆವಾಸ್ ಯೋಜನೆಯಡಿ ಒಟ್ಟು 120912 ಮನೆಗಳನ್ನು ಮಂಜೂರು ಮಾಡಲಾಗಿದ್ದು ಒಟ್ಟು 1154 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಜೆನರಂ ಯೋಜನೆಯ ಬಿಎಸ್‌ಯುಪಿ ಮತ್ತು ಐಎಚ್‌ಎಸ್‌ಡಿಪಿ ಯೋಜನೆಗಳ ಅಡಿಯಲ್ಲಿ 2012ರವರೆಗೆ ಮಂಜೂರಾಗಿದ್ದ 1442186 ಮನೆಗಳ ಪೈಕಿ 826263 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಭೂಮಿಯ ಬೆಲೆ ಹೆಚ್ಚಳ ಮತ್ತು ನಿರ್ಮಾಣ ಪದಾರ್ಥಗಳ ಬೆಲೆ ಹೆಚ್ಚಳದಿಂದ ಮನೆ ಕಟ್ಟುವುದು ನಗರಪ್ರದೇಶಗಳಲ್ಲಿ ದುಬಾರಿಯಾಗಿದೆ. ರಾಷ್ಟ್ರಪತಿಯವರು ಜಂಟಿ ಸದನವನ್ನು ಉದ್ದೇಶಿಸಿ ಕಳೆದ ಜೂನ್ 9ರಂದು ಮಾಡಿದ ಭಾಷಣದಲ್ಲಿ ಹೇಳಿದಂತೆ 2022ರ ಹೊತ್ತಿಗೆ ಎಲ್ಲಾ ನಿವಾಸಿಗಳಿಗೂ ಪಕ್ಕಾ ಮನೆಗಳನ್ನು ನೀಡುವ ಕುರಿತಂತೆ ಸರ್ಕಾರವು ಕಾರ್ಯಪ್ರವೃತ್ತವಾಗಿದೆ.

## 63. ಕುಡಿಯುವ ನೀರಿನ ಯೋಜನೆಗಳು

**ಪ್ರಶ್ನೆ: (ದಿನಾಂಕ 31 ಜುಲೈ 2014)**

**ಕುಡಿಯುವ ನೀರು ಮತ್ತು ನೈರ್ಮಲ್ಯದ ಯೋಜನೆಗಳಿಗೆ ಹಣಕಾಸು ನೆರವು ನೀಡುವ ಮಾನದಂಡಗಳನ್ನು ಒದಗಿಸಿರಿ. ವಿವಿಧ ರಾಜ್ಯಗಳಿಂದ ಕಳೆದ ಮೂರು ವರ್ಷಗಳಲ್ಲಿ ಈ ಕುರಿತು ಬಂದ ಯೋಜನಾ ಪ್ರಸ್ತಾಪಗಳು ಮತ್ತು ಅವುಗಳನ್ನು ಅನುಮೋದಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಮಾಹಿತಿ ನೀಡಿರಿ. ದೇಶದ ವಿವಿಧ ಭಾಗಗಳಲ್ಲಿ ಸರ್ಕಾರವು ಕೊಳೆನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆಯೆ?**

ಉತ್ತರ (ಶ್ರೀ ಉಪೇಂದ್ರ ಕುಶಹವಾ, ಮಾನ್ಯ ಕುಡಿಯುವ ನೀರು ಮತ್ತು ನೈರ್ಮಲ್ಯದ ರಾಜ್ಯ ಸಚಿವರು)

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದ ಕೆಳಗೆ ಗ್ರಾಮೀಣ ಪ್ರದೇಶಕ್ಕೆ ಶೇ. 40ರಷ್ಟು ಹಾಗೂ ಗ್ರಾಮೀಣ ಎಸ್‌ಟಿ ಮತ್ತು ಎಸ್‌ಸಿ ಜನಸಂಖ್ಯೆಗೆ ಶೇ. 10ರಷ್ಟು ಗುಡ್ಡಗಾಡು ವಿಶೇಷ ವರ್ಗಕ್ಕೆ ಶೇ. 40ರಷ್ಟು ಮತ್ತು ಇತರೆ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿದೆ. ನಿರ್ಮಲ ಭಾರತ ಅಭಿಯಾನದ ಕೆಳಗೆ ಒಟ್ಟು 607 ಯೋಜನೆಗಳನ್ನು ಮಂಜೂರು ಮಾಡಲಾಗಿದೆ. 2011ರಿಂದ 2014–15ರ ವರ್ಷಗಳ ವರೆಗೆ ಕ್ರಮವಾಗಿ 340684, 411912, 414844 ಮತ್ತು 268961 ಯೋಜನೆಗಳನ್ನು ಜಾರಿಗೊಳಿಸಲಾಗಿದೆ.



If people of India can reach Mars with minimal expenditure, why can they not keep their streets and colonies clean. If we make it a public movement, we can make our country being counted as one among the cleanest nations.

■ Sri Narendra Modi, Prime Minister of India

## 64. ವಿಮಾನ ನಿಲ್ದಾಣಗಳ ಅಭಿವೃದ್ಧಿ

**ಪ್ರಶ್ನೆ: (ದಿನಾಂಕ 7 ಜುಲೈ 2014)**

**ಕೆಲವು ರಾಜ್ಯಗಳು ತಮ್ಮದೇ ಖರ್ಚಿನಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿವೆಯೆ? ಹಾಗಿದ್ದರೆ ಈ ರಾಜ್ಯಗಳು ಮತ್ತು ವಿಮಾನ ನಿಲ್ದಾಣಗಳ ಮಾಹಿತಿ ನೀಡಿರಿ. ಈ ಕುರಿತು ಕೇಂದ್ರ ಸರ್ಕಾರವು ಪ್ರಸ್ತಾಪಗಳನ್ನು ಸ್ವೀಕರಿಸಿದೆಯೆ? ಇವುಗಳ ಈಗಿನ ಸ್ಥಿತಿ ಏನು?**

ವಿವಿಧ ರಾಜ್ಯಗಳು ತೋರಿದ ಆಸಕ್ತಿಯನ್ನು ಗಮನಿಸಿ 2008ರಲ್ಲಿಯೇ ಸರ್ಕಾರವು ಗ್ರೀನ್‌ಫೀಲ್ಡ್ ಪಾಲಿಸಿಗೆ ಅನುಮೋದನೆ ನೀಡಿದೆ. ಈ ಪ್ರಸ್ತಾಪಗಳನ್ನು ರಾಜ್ಯ ಸರ್ಕಾರಗಳು ಸರ್ಕಾರದ ಸಮಿತಿಗೆ ಸಲ್ಲಿಸಬೇಕಿದೆ. ಪಿಪಿಪಿ ಮಾದರಿಯಲ್ಲಿ ಮಹಾರಾಷ್ಟ್ರ (ನವೀ ಮುಂಬಯಿ), ಕರ್ನಾಟಕ (ಬಿಜಾಪುರ, ಗುಲಬರ್ಗಾ, ಹಾಸನ ಮತ್ತು ಶಿವಮೊಗ್ಗ) ಕೇರಳ (ಕಣ್ಣೂರು), ಉತ್ತರ ಪ್ರದೇಶ (ಖುಷಿನಗರ್) ಮತ್ತು ಗೋವಾ (ಎಂಒಪಿಎ) ಮುಂದೆ ಬಂದಿವೆ. ಇದಲ್ಲದೆ ರಾಜಸ್ಥಾನದ ಕೋಟ್ಕಾಸಿಮ್, ಕರ್ನಾಟಕದ ಕಾರವಾರ, ಕೇರಳದ ಅಣ್ಣಕ್ಕರ, ಅಂದ್ರೋತ್, ಉತ್ತರಪ್ರದೇಶದ ಹಿರನ್‌ಗಾವ್‌ಗಳಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳ ಪ್ರಸ್ತಾಪವೂ ಬಂದಿದೆ.

## 65. ನೈಸರ್ಗಿಕ ಅನಿಲದ ಬೇಡಿಕೆ ಮತ್ತು ಸರಬರಾಜು

**ಪ್ರಶ್ನೆ: (ದಿನಾಂಕ 7 ಜುಲೈ 2014)**

**ಮುಂದಿನ ಮೂರು ವರ್ಷಗಳಲ್ಲಿ ಭಾರತವು ಹೊಂದಿರುವ ನೈಸರ್ಗಿಕ ಅನಿಲದ ಬೇಡಿಕೆ ಮತ್ತು ಸರಬರಾಜಿನ ಪ್ರಮಾಣ, ಇದನ್ನು ಸಾಧಿಸುವುದಕ್ಕೆ ಕೈಗೊಂಡಿರುವ ಕ್ರಮಗಳನ್ನು ತಿಳಿಸಿರಿ. ಇದಲ್ಲದೆ ವಿದ್ಯುತ್ ಮತ್ತು ರಸಗೊಬ್ಬರ ಕ್ಷೇತ್ರಕ್ಕೆ ಬೇಕಾದ ನೈಸರ್ಗಿಕ ಅನಿಲದ ಬೇಡಿಕೆಯನ್ನು ಪೂರೈಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ? ಈ ಅನಿಲದ ಉತ್ಪಾದನಾ ವೆಚ್ಚ ಮತ್ತು ಖರೀದಿ ಬೆಲೆಯ ಮಾಹಿತಿಗಳನ್ನು ನೀಡಿರಿ.**

ಉತ್ತರ (ಶ್ರೀ ಧರ್ಮೇಂದ್ರ ಪ್ರಧಾನ್, ಮಾನ್ಯ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ರಾಜ್ಯ ಖಾತೆ (ಸ್ವತಂತ್ರ) ಸಚಿವರು

2013–14 ಸಾಲಿನಲ್ಲಿ ದಿನವಹಿ ಒಟ್ಟು 371 ಮಿಲಿಯನ್ ಮೆಟ್ರಿಕ್ ಸ್ಟಾಂಡರ್ಡ್ ಕ್ಯುಬಿಕ್ ಮೀಟರ್ ನೈಸರ್ಗಿಕ ಅನಿಲದ (ಎಂಎಂಎಸ್‌ಸಿಎಂಡಿ) ಬೇಡಿಕೆ ಇತ್ತು. ಇದರಲ್ಲಿ 153 ಎಂಎಂಎಸ್‌ಸಿಎಂಡಿಯು ವಿದ್ಯುತ್ ರಂಗದ ಮತ್ತು 110 ಎಂಎಂಎಸ್‌ಸಿಎಂಡಿಯು ರಸಗೊಬ್ಬರ ರಂಗದ ಪಾಲು ಸರ್ಕಾರವು ಅನಿಲದ ಬೇಡಿಕೆಯನ್ನು ಪೂರೈಸಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ನೈಸರ್ಗಿಕ ಅನಿಲದ ಉತ್ಪಾದನಾ ವೆಚ್ಚವು 2012–13ರಲ್ಲಿ ಒಂದು ಎಂಎಂಬಿಟಿಯುಗೆ 3.62 ಡಾಲರ್‌ಗಳಾಗಿತ್ತು. ಅನಿಲದ ಬೆಲೆಯೂ ವಿವಿಧ ಮಾದರಿಗೆ ತಕ್ಕಂತೆ ಒಂದು ಎಂಎಂಬಿಟಿಯುಗೆ 4.2 ಡಾಲರ್‌ಗಳಿಂದ ಹಿಡಿದು 6.87 ಡಾಲರ್‌ವರೆಗೆ ಇದೆ.

## 66. ಅಂಚೆ ಕಚೇರಿಗಳ ಆರಂಭ

**ಪ್ರಶ್ನೆ: (ದಿನಾಂಕ 7 ಜುಲೈ 2014)**

**ದೇಶದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇರುವ ಅಂಚೆ ಕಚೇರಿಗಳ ಸಂಖ್ಯೆಯ ವಿವರಗಳನ್ನು ನೀಡಿರಿ. ಈ ವರ್ಷ ತೆರೆಯಲಾಗುವ ಅಂಚೆ ಕಚೇರಿಗಳ ಸಂಖ್ಯೆಯ ಮಾಹಿತಿಯನ್ನು ನೀಡಿರಿ. ಕಳೆದ ಮೂರು ವರ್ಷಗಳಲ್ಲಿ ಮುಚ್ಚಿದ ಅಂಚೆ ಕಚೇರಿಗಳ ಮಾಹಿತಿ ನೀಡಿರಿ. ಅಂಚೆ ಕಚೇರಿಗಳ ಮೂಲಕ ರೈಲ್ವೆ ಪ್ರಯಾಣದ ಆರಕ್ಷಣಾ ಟಿಕೆಟ್‌ಗಳನ್ನು ಮಾರುವ ಪ್ರಸ್ತಾಪ**





ಇದೆಯೆ? ಇದ್ದರೆ ಈ ಕುರಿತು ಕೈಗೊಂಡ ಕ್ರಮಗಳೇನು?

ಉತ್ತರ (ಶ್ರೀ ರವಿಶಂಕರ ಪ್ರಸಾದ್, ಮಾನ್ಯ ಸಂವಹನ, ಮಾಹಿತಿ ತಂತ್ರಜ್ಞಾನ ಮತ್ತು ಕಾನೂ ಹಾಗೂ ನ್ಯಾಯಿಕ ಸಚಿವರು)

2014ರ ಮಾರ್ಚ್ 31ರ ಹೊತ್ತಿಗೆ ದೇಶದ ನಗರ ಪ್ರದೇಶಗಳಲ್ಲಿ 15700 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 139182 ಅಂಚೆ ಕಚೇರಿಗಳಿದ್ದವು. 2014–15ರಲ್ಲಿ ಒಟ್ಟು 160 ಅಂಚೆ ಕಚೇರಿಗಳನ್ನು ತೆರೆಯಲು ಉದ್ದೇಶಿಸಲಾಗಿದೆ. 2011ರಿಂದ 2014ರ ಜೂನ್ 30ರ ವರೆಗೆ ಒಟ್ಟು 150 ಅಂಚೆಕಚೇರಿಗಳನ್ನು ಮುಚ್ಚಲಾಗಿದೆ. 2007ರಿಂದಲೇ ಅಂಚೆ ಕಚೇರಿಗಳ ಮೂಲಕ ರೈಲ್ವೆ ರಿಸರ್ವೇಶನ್ ಸೇವೆಗಳನ್ನು ನೀಡಲಾಗುತ್ತಿದೆ. ಈಗ 281 ಅಂಚೆ ಕಚೇರಿಗಳು ಈ ಸೇವೆ ನೀಡುತ್ತಿವೆ.

## 67. ಆನ್‌ಲೈನ್ ಮಾರ್ಕೆಟಿಂಗ್

**ಪ್ರಶ್ನೆ: (ದಿನಾಂಕ 8 ಜುಲೈ 2014)**

ಆನ್‌ಲೈನ್ ಮಾರ್ಕೆಟಿಂಗ್ ಮೂಲಕ ಮಾರಿದ ವಸ್ತುಗಳ ಗುಣಮಟ್ಟದ ಬಗ್ಗೆ ಈವರೆಗೆ ಯಾವುದೇ ದೂರುಗಳು ಬಂದಿವೆಯೆ? ಬಂದಿದ್ದರೆ ಇಂಥ ಬೆಳವಣಿಗೆಗಳನ್ನು ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳೇನು? ಆನ್‌ಲೈನ್ ಖರೀದಿಯನ್ನು ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ತರುವುದಕ್ಕೆ ಸರ್ಕಾರವು ಕ್ರಮಗಳನ್ನು ಕೈಗೊಂಡಿದೆಯೆ? ಇದ್ದರೆ ಮಾಹಿತಿ ಕೊಡಿ.

ಉತ್ತರ (ಶ್ರೀ ರಾವ್‌ಸಾಹೇಬ್ ಪಾಟೀಲ್ ದಾನ್ವೆ, ಮಾನ್ಯ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ರಾಜ್ಯ ಸಚಿವರು)

ಆನ್‌ಲೈನ್ ಅಥವಾ ಖುದ್ದು ಖರೀದಿಯ ಎಲ್ಲಾ ವ್ಯವಹಾರಗಳೂ ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಬರುತ್ತವೆ. ಇವುಗಳನ್ನು ಪರಿಹರಿಸಲು ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ.

## 68. ಬಹುರಾಷ್ಟ್ರೀಯ ಸಂಸ್ಥೆಗಳಿಂದ ಔಷಧಗಳ ಮಾರಾಟ

**ಪ್ರಶ್ನೆ: (ದಿನಾಂಕ 8 ಜುಲೈ 2014)**

ಕೆಲವು ಬಹುರಾಷ್ಟ್ರೀಯ ಸಂಸ್ಥೆಗಳು ರಾಷ್ಟ್ರೀಯ ಅತ್ಯವಶ್ಯ ಔಷಧಗಳನ್ನು (ಎನ್‌ಎಲ್‌ಇಎಂ) ಅತಿ ದುಬಾರಿ ಬೆಲೆಗೆ ಮಾರುತ್ತಿವೆಯೆ? ಹಾಗಿದ್ದರೆ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು? ಕ್ಯಾನ್ಸರ್ ಔಷಧಗಳನ್ನು ಅತ್ಯವಶ್ಯ ಔಷಧಗಳ ಪಟ್ಟಿಗೆ ಸೇರಿಸುವ ಪ್ರಸ್ತಾಪ ಇದೆಯೆ? ದೇಶದಲ್ಲಿ ಕ್ಯಾನ್ಸರ್ ಔಷಧಗಳನ್ನು ಅಗ್ಗದ ಬೆಲೆಗೆ ನೀಡುವಲ್ಲಿ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಉತ್ತರ (ಶ್ರೀ ನಿಹಾಲ್ ಚಂದ್, ಮಾನ್ಯ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ರಾಜ್ಯ ಸಚಿವರು)

2011ರ ಅತ್ಯವಶ್ಯ ಪಟ್ಟಿಯಲ್ಲಿರುವ ಎಲ್ಲಾ ಔಷಧಗಳನ್ನೂ 2013ರ ಔಷಧ ಬೆಲೆ ನಿಯಂತ್ರಣ ಆದೇಶ (ಡಿಪಿಸಿಓ 2013) ಪಟ್ಟಿಯಲ್ಲಿ ಸೇರಿಸಲಾಗಿದೆ. ಆದ್ದರಿಂದ ಈ ಔಷಧಗಳನ್ನು ನ್ಯಾಶನಲ್ ಫಾರ್ಮಾಸೂಟಿಕಲ್ ಪ್ರೈಸಿಂಗ್ ಅಥಾರಿಟಿಯು (ಎನ್‌ಪಿಪಿಎ) ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಲು ಸಾಧ್ಯವಿಲ್ಲ. 2013ರ ಡಿಪಿಸಿಓ ಕಾಯ್ದೆ ಪ್ರಕಾರ ಸರ್ಕಾರವು 451 ಫಾರ್ಮುಲೇಶನ್‌ಗಳ ವಿರುದ್ಧ ಕ್ರಮ ಜರುಗಿಸಿದೆ. ಇವುಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಔಷಧಗಳೂ ಸೇರಿವೆ. ಇದಲ್ಲದೆ ಎರಡು ಪ್ರಕರಣಗಳಲ್ಲಿ ಎನ್‌ಪಿಪಿಎಯು 54.03 ಕೋಟಿ ರೂಗಳ ವಸೂಲಾತಿಗೆ ಆದೇಶ ನೀಡಿ 54.01 ಕೋಟಿ ರೂ.ಗಳನ್ನು ಸಂಗ್ರಹಿಸಿದೆ.





Government has only one religion - India first! Government has one holy book - the Constitution. The Government must be immersed in only one Bhakti- Bharat Bhakti! The Government's only strength is Jan Shakti! Government's only ritual is the well being of the 125 crore Indians! The only code of conduct of the Government should be 'Sabka Saath, Sabka Vikas!

■ Sri Narendra Modi, Prime Minister of India

## 69. ರಸಗೊಬ್ಬರದ ಸರಬರಾಜು

**ಪ್ರಶ್ನೆ: (ದಿನಾಂಕ 8 ಜುಲೈ 2014)**

**ದೇಶದ ರೈತರಿಗೆ ಸೂಕ್ತ ಪ್ರಮಾಣದಲ್ಲಿ ರಸಗೊಬ್ಬರವನ್ನು ಸರಬರಾಜು ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೆ? ಹಾಗಿದ್ದರೆ ವಿವರಗಳನ್ನು ತಿಳಿಸಿ. ಕರ್ನಾಟಕವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ಅತ್ಯವಶ್ಯ ರಸಗೊಬ್ಬರವನ್ನು ಸಬ್ಸಿಡಿ ದರದಲ್ಲಿ ನೀಡುವ ಬಗ್ಗೆ, ಹಣಕಾಸಿನ ಬೆಂಬಲ ನೀಡುವ ಬಗ್ಗೆ ಕೈಗೊಂಡ ಕ್ರಮಗಳನ್ನು ಮತ್ತು ರಸಗೊಬ್ಬರವನ್ನು ಸರಬರಾಜು ಮಾಡುತ್ತಿರುವ ಸಂಸ್ಥೆಗಳ ಮಾಹಿತಿಯನ್ನು ನೀಡಿರಿ.**

ಉತ್ತರ (ಶ್ರೀ ನಿಹಾಲ್ ಚಂದ್, ಮಾನ್ಯ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ರಾಜ್ಯ ಸಚಿವರು)

2014ರ ಖಾರಿಫ್ ಬೆಳೆಗೆ ದೇಶದಾದ್ಯಂತ ಬೇಕಾದ ರಸಗೊಬ್ಬರದ ಬೇಡಿಕೆಯನ್ನು ಪಟ್ಟಿ ಮಾಡಲಾಗಿದ್ದು ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಹೊಂದಲಾಗಿದೆ.

## 60. ವರ್ಜೀನಿಯಾ ತಂಬಾಕು ಉತ್ಪನ್ನಗಳ ಆಮದು ರಫ್ತು

**ಪ್ರಶ್ನೆ: (ದಿನಾಂಕ 11 ಜುಲೈ 2014)**

**ವರ್ಜೀನಿಯಾ ತಂಬಾಕು ಉತ್ಪನ್ನಗಳನ್ನು ಆಮದು ಮತ್ತು ರಫ್ತು ಮಾಡುವಲ್ಲಿ ಸರ್ಕಾರವು ತಂಬಾಕು ಬೆಳೆಗಾರರಿಗೆ ನೆರವು ನೀಡುವ ಪ್ರಸ್ತಾಪ ಇದೆಯೆ? ಕಳೆದ ಮೂರು ವರ್ಷಗಳಲ್ಲಿ ವಿವಿಧ ದೇಶಗಳಿಗೆ ರಫ್ತಾದ ಸಿಗರೇಟುಗಳ ಮೊತ್ತವನ್ನು ತಿಳಿಸಿರಿ. ಬೇರೆ ದೇಶಗಳಿಗೂ ವರ್ಜೀನಿಯಾ ತಂಬಾಕು ಉತ್ಪನ್ನಗಳನ್ನು ರಫ್ತು ಮಾಡುವುದಕ್ಕೆ ಬೆಳೆಗಾರರಿಗೆ ನೆರವಾಗಲು ಸರ್ಕಾರವು ಅಧ್ಯಯನ ಮಾಡಿದೆಯೆ?**

ಉತ್ತರ (ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ವಾಣಿಜ್ಯ ಮತ್ತು ಉದ್ಯಮದ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

ಸರ್ಕಾರವು ತಂಬಾಕು ಮಂಡಳಿ ಮುಖಾಂತರ ವರ್ಜೀನಿಯಾ ತಂಬಾಕಿನ ವ್ಯಾಪಾರವನ್ನು ಪ್ರೋತ್ಸಾಹಿಸುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕ್ರಮವಾಗಿ 335.11, 438.94 ಮತ್ತು 513.20 ಕೋಟಿ ರೂ. ಮೊತ್ತ ಸಿಗರೇಟುಗಳನ್ನು ರಫ್ತು ಮಾಡಲಾಗಿತ್ತು. 2014–15ರ ಏಪ್ರಿಲ್ ಮೇ ಅವಧಿಯವರೆಗೆ 96.12 ಕೋಟಿ ರೂ.ಗಳ ಮೊತ್ತದ ಸಿಗರೇಟು ರಫ್ತಾಗಿದೆ. ಉಳಿದಂತೆ ಸೌದಿ ಅರೇಬಿಯಾ, ಅಮೇರಿಕಾ, ಯುಎಇ, ಕುವೈಟ್, ಬೆಲ್ಜಿಜ್, ಖತಾರ್ ದೇಶಗಳಿಗೂ ಸಿಗರೇಟು ರಫ್ತಾಗಿದೆ. ಯಾವುದೇ ದೇಶಕ್ಕೆ ವರ್ಜೀನಿಯಾ ತಂಬಾಕು ರಫ್ತು ಮಾಡಲು ಯಾವುದೇ ನಿರ್ಬಂಧ ಇಲ್ಲ.

## 71. ಸಂತ್ರಸ್ತರ ಕರೆ ಸ್ವೀಕರಿಸಲು ಸಿಎಡಿ ಬಳಕೆ

**ಪ್ರಶ್ನೆ: (ದಿನಾಂಕ 11 ಜುಲೈ 2014)**

**ಮಹಿಳೆಯರು ಮತ್ತು ಇತರೆ ಸಂತ್ರಸ್ತರಿಂದ ಕರೆ ಸ್ವೀಕರಿಸಲು ಜಿಯಾಗ್ರಫಿಕಲ್ ಪೊಸಿಶನಿಂಗ್ ಸಿಸ್ಟಂ ಆಧಾರಿತ ಕರೆ ಪತ್ತೆ ಮಾಡುವ ವ್ಯವಸ್ಥೆಯನ್ನು ಒಳಗೊಂಡ ಇಂಟೆಗ್ರೇಟೆಡ್ ಕಂಪ್ಯೂಟರ್ ಏಡೆಡ್ ಡಿಸ್ಪಾಚ್ ವೇದಿಕೆಯನ್ನು (ಸಿಎಡಿ) ಸ್ಥಾಪಿಸುವುದಕ್ಕೆ ಸರ್ಕಾರವು ಅನುಮೋದನೆ ನೀಡಿದೆಯೆ? ಈಗಿನ ಸ್ಥಿತಿ ಏನು? ಇದನ್ನು ಎಷ್ಟು ಕಾಲಾವಧಿಯಲ್ಲಿ ಮಾಡಬಹುದು?**

ಉತ್ತರ (ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ವಾಣಿಜ್ಯ ಮತ್ತು ಉದ್ಯಮದ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

ಮಹಿಳೆಯರು ಮತ್ತು ಇತರೆ ಸಂತ್ರಸ್ತರಿಂದ ಕರೆ ಸ್ವೀಕರಿಸಲು ಜಿಯಾಗ್ರಫಿಕಲ್ ಪೊಸಿಶನಿಂಗ್ ಸಿಸ್ಟಂ ಆಧಾರಿತ ಕರೆ ಪತ್ತೆ





ಮಾಡುವ ವ್ಯವಸ್ಥೆಯನ್ನು ಒಳಗೊಂಡ ಇಂಟೆಗ್ರೇಟೆಡ್ ಕಂಪ್ಯೂಟರ್ ಏಡೆಡ್ ಡಿಸ್ಪಾಚ್ ವೇದಿಕೆಯನ್ನು (ಸಿಎಡಿ) ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಅನುಮೋದಿಸಿದೆ. ಆದರೆ ಇದಕ್ಕೆ ಇನ್ನೂ ನಿಧಿ ನೀಡಿಲ್ಲವಾದ್ದರಿಂದ ಯೋಜನೆಯು ಕಾರ್ಯಗತವಾಗಿಲ್ಲ. ಗೃಹಖಾತೆಯು ಈ ಯೋಜನೆಯ ತ್ವರಿತ ಜಾರಿಗೆ ಎಲ್ಲಾ ಭಾಗೇದಾರಿ ಸಂಸ್ಥೆಗಳಿಗೆ ಸೂಚನೆ ನೀಡಿದೆ.

## 72. ರೋಗಿಗಳಿಗೆ ಉಚಿತ ಔಷಧಗಳ ವಿತರಣೆ

**ಪ್ರಶ್ನೆ: (ದಿನಾಂಕ 11 ಜುಲೈ 2014, ಚುಕ್ಕಿರಹಿತ ಪ್ರಶ್ನೆ)**

**ರಾಷ್ಟ್ರೀಯ ಆರೋಗ್ಯ ಮಿಶನ್ ಅಡಿಯಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಜೀವಾವಶ್ಯಕ ಔಷಧಗಳನ್ನು ಉಚಿತವಾಗಿ ನೀಡುವ ಯಾವುದೇ ಯೋಜನೆಯನ್ನು ಸರ್ಕಾರವು ಆರಂಭಿಸಿದೆಯೆ? ಅಥವಾ ಈ ಕುರಿತ ಪ್ರಸ್ತಾವನೆ ಇದೆಯೆ? ಇದ್ದರೆ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕುರಿತು ನಿಗದಿಪಡಿಸಿದ ಮೊತ್ತದ ವಿವರಗಳನ್ನು ತಿಳಿಸಿರಿ. ಈ ಯೋಜನೆಯನ್ನು ಜಾರಿಗೊಳಿಸಲು, ನಿಗಾ ಇಡಲು ಸರ್ಕಾರವು ಹೊಂದಿರುವ ವ್ಯವಸ್ಥೆಯೇನು?**

ಉತ್ತರ (ಡಾ॥ ಹರ್ಷವರ್ಧನ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಸಾರ್ವಜನಿಕ ಆರೋಗ್ಯವು ರಾಜ್ಯ ಸರ್ಕಾರದ ವಿಷಯವಾಗಿದೆ. ರಾಷ್ಟ್ರೀಯ ಆರೋಗ್ಯ ಮಿಶನ್ ಕೆಳಗೆ ಅತ್ಯವಶ್ಯದ ಔಷಧಗಳನ್ನು ಉಚಿತವಾಗಿ ನೀಡುವ ಕುರಿತು ಹಣಕಾಸಿನ ಬೆಂಬಲ ನೀಡಲಾಗಿದೆ. 2013ರಲ್ಲಿ ಆರಂಭವಾದ 'ರಾಷ್ಟ್ರೀಯ ಆರೋಗ್ಯ ಮಿಶನ್ – ಉಚಿತ ಔಷಧ ಸೇವೆ' ಉಪಕ್ರಮದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳ ಸೇವೆಯನ್ನು ಪಡೆಯುವವರಿಗೆ ಉಚಿತ ಔಷಧಗಳನ್ನು ನೀಡಲಾಗುತ್ತಿದೆ. ಇದಲ್ಲದೆ ಉಚಿತ ಅಂಬ್ಯುಲೆನ್ಸ್ ಸೇವೆ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ, ಕುಟುಂಬ ಯೋಜನೆ ಕಾರ್ಯಕ್ರಮ – ಹೀಗೆ ಹಲವು ಕಾರ್ಯಕ್ರಮಗಳ ಮೂಲಕ ಉಚಿತ ಸೇವೆಗಳನ್ನು ನೀಡಲಾಗುತ್ತಿದೆ. 2012–13ರಲ್ಲಿ ಒಟ್ಟು 2522.60 ಕೋಟಿ ರೂ.ಗಳ ಒಟ್ಟಾರೆ (ನಗದು ಮತ್ತು ಸೇವೆ) 2013–14ರಲ್ಲಿ ಒಟ್ಟು 3023.74 ಕೋಟಿ ರೂ.ಗಳ ಒಟ್ಟಾರೆ ಉಚಿತ ಸೇವೆಯನ್ನು ನೀಡಲಾಗಿದೆ.

## 73. ರಾಸಾಯನಿಕ ಉದ್ಯಮದಲ್ಲಿ ಎಥನಾಲ್ ಬಳಕೆ

**ಪ್ರಶ್ನೆ: (ದಿನಾಂಕ 15 ಜುಲೈ 2014)**

**ದೇಶದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮತ್ತು ಈ ವರ್ಷ ರಾಸಾಯನಿಕ ಉದ್ಯಮಗಳು ಬಳಸಿದ ಎಥನಾಲ್‌ನ ಪ್ರಮಾಣದ ಮಾಹಿತಿ ನೀಡಿರಿ. ಎಥನಾಲ್ ಬ್ಲೆಂಡೆಡ್ ಪೆಟ್ರೋಲ್‌ನ್ನು ಕಡ್ಡಾಯ ಮಾಡಿದಾಗ ರಾಸಾಯನಿಕ ಉದ್ಯಮಗಳ ಮೇಲೆ ಉಂಟಾಗುವ ಪರಿಣಾಮಗಳನ್ನು ತಿಳಿಸಿರಿ. ಈ ನಿರ್ಧಾರವನ್ನು ಸಚಿವಾಲಯವು ವಿರೋಧಿಸಿದೆಯೆ?**

ಉತ್ತರ (ಶ್ರೀ ನಿಹಾಲ್ ಚಂದ್, ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಖಾತೆ ರಾಜ್ಯ ಸಚಿವರು)

2011ರಿಂದ 2014ರವರೆಗಿನ ನಾಲ್ಕು ವರ್ಷಗಳಲ್ಲಿ ಕ್ರಮವಾಗಿ 77,77,84 ಮತ್ತು 85 ಕೋಟಿ ಲೀಟರ್‌ಗಳಷ್ಟು ಎಥನಾಲನ್ನು ರಾಸಾಯನಿಕ ಉದ್ಯಮಗಳು ಬಳಸಿಕೊಂಡಿವೆ. ಪೆಟ್ರೋಲ್‌ನಲ್ಲಿ ಎಥನಾಲನ್ನು ಕಡ್ಡಾಯವಾಗಿ ಮಿಶ್ರಣ ಮಾಡಬೇಕೆಂಬ ಆದೇಶದಿಂದ ಎಥನಾಲಿನ ಬೆಲೆ ಹೆಚ್ಚಾಗಬಹುದು ಎಂದು ರಾಸಾಯನಿಕ ಉದ್ಯಮಗಳು ಆತಂಕ ವ್ಯಕ್ತಪಡಿಸಿವೆ. ಇದಲ್ಲದೆ ಎಥನಾಲ್‌ನ ಲಭ್ಯತೆಯೂ ಕಡಿಮೆ ಆಗಬಹುದು. ಈ ಮಾಹಿತಿಯನ್ನು ಪೆಟ್ರೋಲಿಯಂ ಮತ್ತು ನ್ಯಾಚುರಲ್ ಗ್ಯಾಸ್ ಸಚಿವಾಲಯಕ್ಕೆ ತಿಳಿಸಲಾಗಿದೆ.



Secularism is not only in our constitution but also in our veins. We worship Mother Nature too. We believe that the world is our family.

■ Sri Narendra Modi, Prime Minister of India

## 74. ಕ್ರೀಡಾ / ದೈಹಿಕ ಶಿಕ್ಷಣ

**ಪ್ರಶ್ನೆ: (ದಿನಾಂಕ 15 ಜುಲೈ 2014)**

**ಕಳೆದ ಮೂರು ವರ್ಷಗಳಲ್ಲಿ ದೈಹಿಕ ಶಿಕ್ಷಣ/ ಕ್ರೀಡಾ ಶಿಕ್ಷಣದಲ್ಲಿ ತೊಡಗಿಕೊಂಡಿರುವ ಸರ್ಕಾರಿ ಸಂಸ್ಥೆಗಳ ಮಾಹಿತಿ ನೀಡಿರಿ. ಈ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಿಳಿಸಿರಿ. ಇಂಥ ಇನ್ನೂ ಹಲವು ಸಂಸ್ಥೆಗಳನ್ನು ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳಲ್ಲಿ ಸ್ಥಾಪಿಸಲು ಸರ್ಕಾರವು ಪ್ರಸ್ತಾವನೆ ಹೊಂದಿದೆಯೆ? ಇದ್ದರೆ ಹೆಚ್ಚಿನ ಮಾಹಿತಿ ಕೊಡಿ.**

ಉತ್ತರ (ಶ್ರೀ ಸರ್ಬಾನಂದ ಸೊನೊವಾಲ್, ಮಾನ್ಯ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ, ಯುವ ವ್ಯವಹಾರಗಳು ಮತ್ತು ಕ್ರೀಡೆ ಇಲಾಖೆಯ ರಾಜ್ಯ ಸಚಿವರು)

ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ಗ್ವಾಲಿಯರ್‌ನ ಯೂನಿವರ್ಸಿಟಿ ಆಫ್ ಫಿಸಿಕಲ್ ಎಜುಕೇಶನ್, ಗುವಾಹಟಿಯ ನಾರ್ತ್ ಈಸ್ಟರ್ನ್ ರೀಜನಲ್ ಸೆಂಟರ್, ತಿರುವನಂತಪುರದ ಲಕ್ಷ್ಮೀಬಾಯಿ ನ್ಯಾಶನಲ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಶನ್ ಮತ್ತು ಪಾಟಿಯಾಲಾದ ನೇತಾಜಿ ಸುಭಾಶ್ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಅಲ್ಲದೆ ಬೆಂಗಳೂರು ಮತ್ತು ಕೋಲ್ಕತಾದ ಭಾರತೀಯ ಕ್ರೀಡಾ ಪ್ರಾಧಿಕಾರದ ಕೇಂದ್ರಗಳು – ಇಲ್ಲಿ ದೈಹಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ರಾಜ್ಯ ಸರ್ಕಾರಗಳು ಅಥವಾ ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಸಂಸ್ಥೆಗಳ ಮಾಹಿತಿಯನ್ನು ಕೇಂದ್ರವು ಇಟ್ಟುಕೊಂಡಿಲ್ಲ. ಮೇಲೆ ತಿಳಿಸಿದ ದೈಹಿಕ ಶಿಕ್ಷಣ ಸಂಸ್ಥೆಗಳಲ್ಲಿ 2011ರಿಂದ 2014ರ ವರೆಗೆ 4562 ವಿದ್ಯಾರ್ಥಿಗಳಿಗೆ ಈ ತರಬೇತಿಯನ್ನು ನೀಡಲಾಗಿದೆ. ಇದಲ್ಲದೆ ಮಣಿಪುರದಲ್ಲಿ ನ್ಯಾಶನಲ್ ಸ್ಪೋರ್ಟ್ಸ್ ಯೂನಿವರ್ಸಿಟಿಯನ್ನು ಸ್ಥಾಪಿಸಲು 100 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದೆ. ಕ್ರೀಡೆಯು ರಾಜ್ಯ ವಿಷಯವೂ ಆಗಿರುವುದರಿಂದ ಆಯಾ ರಾಜ್ಯಗಳೂ ಈ ಕುರಿತು ಹೊಣೆಗಾರಿಕೆ ವಹಿಸಿಕೊಳ್ಳಬೇಕಿದೆ.

## 75. ಕರ್ನಾಟಕದಲ್ಲಿ ರೈಲ್ವೆ ಯೋಜನೆಗಳು

**ಪ್ರಶ್ನೆ: (ದಿನಾಂಕ 17 ಜುಲೈ 2014)**

**ಕುಶಾಲನಗರ – ಮೈಸೂರು ವಿಭಾಗವೂ ಸೇರಿದಂತೆ ಗೇಜ್ ಪರಿವರ್ತನೆ, ಡಬ್ಲಿಂಗ್, ವಿದ್ಯುದೀಕರಣ ಮತ್ತು ಹೊಸ ರೈಲು ಮಾರ್ಗಗಳು – ಹೀಗೆ ಕರ್ನಾಟಕದಲ್ಲಿ ಈಗ ಜಾರಿಯಲ್ಲಿರುವ, ಮಂಜೂರಾಗಿರುವ ರೈಲ್ವೆ ಯೋಜನೆಗಳ ಯಥಾಸ್ಥಿತಿ ಮಾಹಿತಿ ನೀಡಿರಿ. ಬೆಂಗಳೂರು–ಕನಕಪುರ–ಸಾತನೂರು–ಮಳವಳ್ಳಿ–ಸತ್ಯಮಂಗಲ ವಿಭಾಗದಲ್ಲಿ ಹೊಸ ರೈಲು ಮಾರ್ಗ ಸ್ಥಾಪಿಸಲು ಪ್ರಸ್ತಾಪವಿದೆಯೆ? ಕರಡಿ ಧಾಮಕ್ಕೆ ಸಂಪರ್ಕ ಏರ್ಪಡಿಸಲು ರೈಲ್ವೆ ಮೂಲಸೌಕರ್ಯ ಸುಧಾರಿಸುವ ಯೋಜನೆ ಇದೆಯೆ? ಈ ಯೋಜನೆಗಳನ್ನು ಸಂಪೂರ್ಣಗೊಳಿಸಲು ಬೇಕಾದ ಕಾಲಾವಧಿಯನ್ನು ತಿಳಿಸಿರಿ.**

ಉತ್ತರ (ಶ್ರೀ ಮನೋಜ್ ಸಿನ್ಹಾ, ಮಾನ್ಯ ರೈಲ್ವೆ ಖಾತೆ ರಾಜ್ಯ ಸಚಿವರು)

ಕಡೂರು–ಚಿಕ್ಕಮಗಳೂರು–ಸಕಲೇಶಪುರ ಹೊಸ ರೈಲುಮಾರ್ಗದ 46 ಕಿಮೀ ರೈಲು ಮಾರ್ಗ ಮುಗಿದಿದೆ. ಹುಬ್ಬಳ್ಳಿ –ಅಂಕೋಲಾದ ಕಾಮಗಾರಿಯನ್ನು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ನಿಲ್ಲಿಸಲಾಗಿದೆ. ಬೆಂಗಳೂರು– ಚಾಮರಾಜನಗರ– ಸತ್ಯಂಗಲ ಮಾರ್ಗದ ಚಾಮರಾಜನಗರದಾಚೆಯ ಕೆಲಸವನ್ನು ಅರಣ್ಯ ಇಲಾಖೆ ಅನುಮತಿಗಾಗಿ ನಿಲ್ಲಿಸಲಾಗಿದೆ. ಮುನಿರಾಬಾದ್ – ಮಹಬೂಬ್‌ನಗರ ರೈಲುಮಾರ್ಗದ 45 ಕಿಮೀ ಕಾರ್ಯ ಮುಗಿದಿದ್ದು ಇನ್ನುಳಿದಂತೆ 27 ಕಿಮೀ ಕಾಮಗಾರಿ ನಡೆದಿದೆ. ಉಳಿದ ಕಡೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹಾಸನ – ಬೆಂಗಳೂರು (ವಯಾ ಶ್ರವಣಬೆಳಗೊಳ) ಮಾರ್ಗದ ಚಿಕ್ಕಬಾಣಾವರವರೆಗಿನ ಕೆಲಸ ಮುಗಿದಿದೆ. ರಾಯದುರ್ಗ–ತುಮಕೂರು ಮಾರ್ಗ, ಬಾಗಲಕೋಟೆ– ಕುಡಚಿ, ತುಮಕೂರು – ದಾವಣಗೆರೆ, ಗದಗ್ – ವಾಡಿ, ಚಿಕ್ಕಬಳ್ಳಾಪುರ – ಪುಟ್ಟಪರ್ತಿ, ಶ್ರೀನಿವಾಸಪುರ





– ಮದನಪಲ್ಲಿ, ಚಿಕ್ಕಬಳ್ಳಾಪುರ – ಗೌರಿಬಿದನೂರು, – ಈ ಮಾರ್ಗಗಳ ಕೆಲಸಗಳು ವಿವಿಧ ಹಂತಗಳಲ್ಲಿವೆ.

ಯಶವಂತಪುರ – ಯಲಹಂಕ ಮಾರ್ಗದ ಡಬ್ಲಿಂಗ್ ಕೆಲಸ ಆರಂಭವಾಗಿದೆ. ಗುಲಬರ್ಗಾ– ಬೀದರ, ಕಡಪ–ಬೆಂಗಳೂರು, ಶಿವಮೊಗ್ಗ – ಹರಿಹರ, ವೈಟ್‌ಫೀಲ್ಡ್ – ಕೋಲಾರ, ಮಾರಿಕುಪ್ಪಂ – ಕುಪ್ಪಂ, ಹೊಸದುರ್ಗ ರೋಡ್ – ಜೂರು, ಕಂಕನಾಡಿ – ಪಣಂಬೂರು, ರಾಮನಗರಂ – ಮೈಸೂರು, ಹೊಸಪೇಟೆ – ಹುಬ್ಬಳ್ಳಿ – ಲೊಂಡಾ – ತಿನಾಯ್‌ಘಾಟ್ – ವಾಸ್ಕೋ ಡ ಗಾಮ, ತೋರಣಗಲ್ಲು – ರಂಜಿತ್‌ಪುರ, ಡಬ್ಲಿಂಗ್ ಕಾಮಗಾರಿಗಳು ವಿವಿಧ ಹಂತಗಳಲ್ಲಿವೆ. ಬೆಂಗಳೂರು – ವೈಟ್‌ಫೀಲ್ಡ್ – ಕೃಷ್ಣರಾಜಪುರಂ ಡಬ್ಲಿಂಗ್ ಅಲೈನ್‌ಮೆಂಟ್‌ನ್ನು ಕರ್ನಾಟಕವು ಒಪ್ಪಿಲ್ಲ. ದೌಂಡ್–ಗುಲಬರ್ಗಾ–ಗುಂತಕಲ್ ವಿದ್ಯುದೀಕರಣವು ಆರಂಭವಾಗಿದೆ. ಹೊಟಗಿ–ಕೂಡಿಗಿ–ಗದಗ ಮಾರ್ಗದ ಸಂಪುಟ ಅನುಮೋದನೆಗಳು ತಲುಪಿಲ್ಲ. ಶೋರನೂರು–ಮಂಗಳೂರು–ಪಣಂಬೂರು, ಯಲಹಂಕ – ಧರ್ಮಾವರಂ – ಗೂಟಿ, ಗುಂತಕಲ್–ಬಳ್ಳಾರಿ–ತೋರಣಗಲ್ಲು – ರಂಜಿತ್‌ಪುರ ಮಾರ್ಗಗಳ ವಿದ್ಯುದೀಕರಣ ಕಾಮಗಾರಿ ಆರಂಭವಾಗಿದೆ. ಮೈಸೂರು – ಕುಶಾಲನಗರ ಸಮೀಕ್ಷೆ ಮುಗಿದಿದೆ ; ಆದರೆ ಅದನ್ನು ಮುಂದೆ ತೆಗೆದುಕೊಂಡು ಹೋಗಿಲ್ಲ. ಕರಡಿ ಧಾಮ ಸಂಪರ್ಕ ಪ್ರಸ್ತಾಪ ಇಲ್ಲ. ಹೆಚ್ಚು ಯೋಜನೆಗಳು ಮತ್ತು ಸೀಮಿತ ನಿಧಿಗಳ ಕಾರಣದಿಂದ ಯೋಜನೆಗಳ ಕಾಲಾವಧಿಯನ್ನು ನಿಗದಿಪಡಿಸಲಾಗುತ್ತಿಲ್ಲ.

## 76. ರೈಲ್ವೆಯ ಹಣಕಾಸು ಸ್ಥಿತಿ

**ಪ್ರಶ್ನೆ: (ದಿನಾಂಕ 17 ಜುಲೈ 2014)**

**ರೈಲ್ವೆಯು ಹಣಕಾಸು ಬಿಕ್ಕಟ್ಟನ್ನು ಎದುರಿಸುತ್ತಿದೆಯೆ? ಎದುರಿಸುತ್ತಿದ್ದರೆ ಅದರ ವಿವರಗಳನ್ನು ಒದಗಿಸಿರಿ. ಇಲ್ಲವಾದರೆ ಕಳೆದ ಮೂರು ವರ್ಷಗಳಲ್ಲಿ ಉತ್ಪತ್ತಿಯಾದ ಹೆಚ್ಚುವರಿ ಸಂಪನ್ಮೂಲದ ವಿವರ ತಿಳಿಸಿರಿ. ರೈಲ್ವೆಗೆ ಆಂತರಿಕ ಮತ್ತು ಬಾಹ್ಯ ಮೂಲಗಳಿಂದ ನಿಧಿ ಸಂಗ್ರಹಿಸುವ ಬಗ್ಗೆ ಕೈಗೊಂಡ ಕ್ರಮಗಳನ್ನು ತಿಳಿಸಿರಿ. ಪಿಪಿಪಿ ಮಾದರಿಯ ನಿಧಿ ಜಮಾವಣೆಯು ಆಕರ್ಷಣೆ ಕಳೆದುಕೊಂಡಿದೆಯೆ? ಹಾಗಿದ್ದರೆ ಇದಕ್ಕೆ ಪರಿಹಾರವೇನು?**

ಉತ್ತರ (ಶ್ರೀ ಮನೋಜ್ ಸಿನ್ಹಾ, ಮಾನ್ಯ ರೈಲ್ವೆ ಖಾತೆ ರಾಜ್ಯ ಸಚಿವರು)

ರೈಲ್ವೆಯು ತನ್ನ ಕಾರ್ಯಕ್ರಮಗಳಿಗೆ ಬೇಕಾದ ಖರ್ಚುಗಳನ್ನು ಹೊಂದಿಸಿಕೊಳ್ಳುವುದರ ಜೊತೆಗೇ ತನ್ನ ಯೋಜನೆಗಳಿಗೆ ಆಂತರಿಕವಾಗಿ ನಿಧಿ ಸಂಗ್ರಹಿಸಲೂ ಸಾಧ್ಯವಾಗಿದೆ. 2011–12ರಲ್ಲಿ 8,266, 2013–14ರ ಪುನರ್ವಿಮರ್ಶಿತ ಅಂದಾಜಿನ ಪ್ರಕಾರ 7,943 ಮತ್ತು 2014–15ರ ಬಜೆಟ್ ಅಂದಾಜಿನ ಪ್ರಕಾರ 6,064 ಕೋಟಿ ರೂ.ಗಳ ಹೆಚ್ಚುವರಿ ನಿಧಿಯನ್ನು ರೈಲ್ವೆಯು ಹೊಂದುತ್ತಿದೆ. 2014–15ರ ರೈಲ್ವೆ ಬಜೆಟಿನಲ್ಲಿ 12,914 ಕೋಟಿ ರೂ.ಗಳನ್ನು ಆಂತರಿಕವಾಗಿ ಆಕರಿಸುವ ಗುರಿಯನ್ನು ಹೊಂದಲಾಗಿದೆ. ಅದೇ ವರ್ಷದಲ್ಲಿ 11790 ಕೋಟಿ ರೂ.ಗಳನ್ನು ಇಂಡಿಯನ್ ರೈಲ್ವೆ ಫೈನಾನ್ಸ್ ಕಾರ್ಪೋರೇಶನ್ ಮೂಲಕ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಪಿಪಿಪಿ ಮಾದರಿಯಲ್ಲಿ 6005 ಕೋಟಿ ರೂ.ಗಳನ್ನು ಹೂಡಲು ನಿರ್ಧರಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ರೈಲ್ವೆಯು ಕ್ರಮವಾಗಿ 21073, 25234 ಹಾಗೂ ಅಂದಾಜು 28102 ಕೋಟಿ ರೂ.ಗಳ ಹಣಕಾಸು ನೆರವನ್ನು ಪಡೆದಿದೆ.

## 77. ಬ್ಯಾಂಕುಗಳಲ್ಲಿ ಖಾಲಿ ಹುದ್ದೆಗಳು

**ಪ್ರಶ್ನೆ: (ದಿನಾಂಕ 25 ಜುಲೈ 2014)**

**ದೇಶದ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳಲ್ಲಿ ಪರಿಶಿಷ್ಟ ವರ್ಗ / ಪರಿಶಿಷ್ಟ ಜಾತಿ/ ಇತರೆ ಹಿಂದುಳಿದ ವರ್ಗ / ವಿಶಿಷ್ಟಚೇತನರು ಮತ್ತು ಮೀಸಲಾತಿ ರಹಿತ ಉದ್ಯೋಗಾವಕಾಶಗಳನ್ನು ಭರ್ತಿ ಮಾಡುವಲ್ಲಿ ಕೊರತೆ ಆಗಿದೆಯೆ? ಹಾಗಿದ್ದರೆ ಕಳೆದ ಮೂರು ವರ್ಷಗಳ ಮಾಹಿತಿಯನ್ನು ಕೊಡಿ. ಈ ಬ್ಯಾಕ್‌ಲಾಗ್ ಆಧಾರದಲ್ಲಿ ಮಾಡಿದ**



India is a nation that thinks about everyone. Using the sword we have never attacked other cultures. Such expansionist mindset is not in our blood. Nation is one. We will not work for Hindus or Muslims, we will work for the people of India.

■ Sri Narendra Modi, Prime Minister of India

**ನೇಮಕಾತಿಗಳ ಮಾಹಿತಿ ನೀಡಿರಿ. ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕಾಲಮಿತಿಯನ್ನು ಹೊಂದಲಾಗಿದೆಯೆ? ಇಲ್ಲದಿದ್ದರೆ ಕಾರಣಗಳನ್ನು ತಿಳಿಸಿ.**

ಉತ್ತರ (ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಖಾತೆ ರಾಜ್ಯ ಸಚಿವರು)

ಈ ಕುರಿತ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಪ್ರಕಾರ ಖಾಲಿ ಇರುವ ಹುದ್ದೆಗಳನ್ನು ಈ ವರ್ಷ ಅಥವಾ ಮುಂದಿನ ವರ್ಷ ತುಂಬಲಾಗುವುದು.

## 78. ವಿಶಿಷ್ಟಚೇತನರ ನೇಮಕಾತಿ

**ಪ್ರಶ್ನೆ: (ದಿನಾಂಕ 23 ಜುಲೈ 2014)**

**ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ವಿವಿಧ ಸಚಿವಾಲಯಗಳಲ್ಲಿ ನೇರವಾಗಿ ನೇಮಕಾತಿಯಾದ ವಿಶಿಷ್ಟ ಚೇತನದ ವ್ಯಕ್ತಿಗಳ ಅಂಕಿಅಂಶಗಳನ್ನು ನೀಡಿರಿ. ಈಗ ಈ ಹುದ್ದೆಗಳನ್ನು ತುಂಬುವಲ್ಲಿ ಇರುವ ಬ್ಯಾಕ್‌ಲಾಗ್ ಮಾಹಿತಿಯನ್ನು ನೀಡಿರಿ. ಈ ಬ್ಯಾಕ್‌ಲಾಗ್‌ನ್ನು ಕೊನೆಗೊಳಿಸಲು ನಡೆಯುತ್ತಿರುವ ಯತ್ನಗಳ ಮಾಹಿತಿ ನೀಡಿರಿ.**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ ಮತ್ತು ಪ್ರಧಾನಮಂತ್ರಿಯವರ ಕಚೇರಿ ಇಲಾಖೆಗಳ ರಾಜ್ಯ ಸಚಿವರು)

ಈ ಕುರಿತ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. 2009ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಈ ಪ್ರಕ್ರಿಯೆಯು 2012ರ ಮಾರ್ಚ್ 31ರಂದು ಮುಕ್ತಾಯಗೊಂಡಿತು. ಈ ಕಾಲಾವಧಿಯಲ್ಲಿ ಖಾಲಿ ಇದ್ದ ಒಟ್ಟು 2388 ಹುದ್ದೆಗಳನ್ನು ತುಂಬಲಾಯಿತು. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದು ಒಂದು ನಿರಂತರ ಪ್ರಕ್ರಿಯೆಯಾಗಿದೆ.

## 79. ಶಿಕ್ಷಣ ಪಡೆಯುವ ಜಾರಿ

**ಪ್ರಶ್ನೆ: (ದಿನಾಂಕ 23 ಜುಲೈ 2014)**

**ರಾಜ್ಯ ಸರ್ಕಾರಗಳು ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕಿನ ಕಾಯ್ದೆಯ (ಆರ್‌ಟಿಇ)ಯ 17ನೇ ಕಲಂನ್ನು ಜಾರಿಗೊಳಿಸುತ್ತಿಲ್ಲ ಎಂಬುದು ನಿಜವೆ? ಈ ಕುರಿತ ವಾಸ್ತವಾಂಶಗಳನ್ನು ತಿಳಿಸಿ. ಕೆಲವು ರಾಜ್ಯಗಳಲ್ಲಿ ಮಕ್ಕಳ ಪಾಲಕರಲ್ಲಿ ಈ ಕುರಿತು ಜಾಗೃತಿ ಮೂಡಿಸಲು ರಾಜ್ಯ ಸರ್ಕಾರಗಳು ಮುಂದಾಗಿಲ್ಲ ಎಂಬ ಬಗ್ಗೆ ದೂರುಗಳು ಬಂದಿವೆಯೆ? ಈ ಕಾಯ್ದೆಯ ಜಾರಿಗಾಗಿ ಮಾಡಬೇಕಿರುವ ಮೂಲಸೌಕರ್ಯಗಳ ಸಿದ್ಧತೆಯ ಅವಧಿಯು 2013ರ ಮಾರ್ಚ್ 31ಕ್ಕೆ ಮುಗಿದಿದೆಯೆ? ಈ ಕಾಲಮಿತಿಯನ್ನು ಸರ್ಕಾರವು ವಿಸ್ತರಿಸುವ ಪ್ರಸ್ತಾಪವನ್ನು ಹೊಂದಿದೆಯೆ?**

ಉತ್ತರ (ಶ್ರೀಮತಿ ಸ್ಮೃತಿ ಜುಬಿನ್ ಇರಾನಿ, ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವೆ)

ಎಲ್ಲಾ ರಾಜ್ಯಗಳು ಶಿಕ್ಷಣ ಪಡೆಯುವ ಹಕ್ಕಿನ ಕಾಯ್ದೆಯ ಬಗ್ಗೆ ಅಧಿಸೂಚನೆ ಹೊರಡಿಸಿವೆ ಮತ್ತು ಅದರ ಪ್ರಾವಧಾನಗಳನ್ನು ಜಾರಿಗೊಳಿಸುತ್ತಿವೆ. ರಾಜ್ಯಗಳು ಪಾಲಕರಲ್ಲೂ ಜಾಗೃತಿಯನ್ನು ಮೂಡಿಸುತ್ತಿದ್ದು ಈ ಕಾರ್ಯಕ್ರಮಕ್ಕಾಗಿ ಕೇಂದ್ರ ಸರ್ಕಾರವು ಸರ್ವ ಶಿಕ್ಷಾ ಅಭಿಯಾನದಡಿ ರಾಜ್ಯ ಸರ್ಕಾರಗಳಿಗೆ ನೆರವನ್ನೂ ನೀಡುತ್ತಿದೆ. ಈ ಕಾಯ್ದೆ ಕುರಿತ ರಾಷ್ಟ್ರೀಯ ಸಲಹಾ ಮಂಡಳಿಯ ಆರು ಸಭೆಗಳು ಈವರೆಗೆ ನಡೆದಿವೆ. ಅಲ್ಲದೆ ವ್ಯಕ್ತಿಗತ ತಜ್ಞರು ವಿವಿಧ ರಾಜ್ಯಗಳಿಗೆ ಭೇಟಿ ನೀಡಿದ್ದಾರೆ. ಮೂಲಸೌಕರ್ಯ ಸೃಷ್ಟಿಸಲು ವಿಧಿಸಿದ್ದ 2013ರ ಮಾರ್ಚ್ 31ರ ಕಾಲಮಿತಿಯನ್ನು ವಿಸ್ತರಿಸಲಾಗಿಲ್ಲ.





## 80. ಪಾಲಿಥೀನ್ ಚೀಲಗಳ ನಿಷೇಧ

**ಪ್ರಶ್ನೆ: (ದಿನಾಂಕ 23 ಜುಲೈ 2014)**

**ಕೆಲವು ರಾಜ್ಯಗಳಲ್ಲಿ ಪಾಲಿಥೀನ್ ಚೀಲಗಳನ್ನು ನಿಷೇಧಿಸಿ/ ನಿರ್ಬಂಧಿಸಿದ ಕ್ರಮಗಳು ಜರುಗಿವೆಯೆ? ಹಾಗಿದ್ದಲ್ಲಿ, ಈ ಬಗ್ಗೆ ವಿವರಗಳನ್ನು ನೀಡಿರಿ ಮತ್ತು ಇದಕ್ಕೆ ನೀಡಿದ ಕಾರಣಗಳನ್ನು ನೀಡಿರಿ. ನಿಷೇಧದ ಹೊರತಾಗಿಯೂ ಕೆಲವು ರಾಜ್ಯಗಳಲ್ಲಿ ಪಾಲಿಥೀನ್ ಚೀಲಗಳನ್ನು ಬಳಸಲಾಗುತ್ತಿದೆಯೆ? ಈ ಬಗ್ಗೆ ವಿವರಗಳನ್ನು ನೀಡಿರಿ. ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು?**

ಉತ್ತರ: (ಶ್ರೀ ಪ್ರಕಾಶ್ ಜಾವಡೇಕರ್, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

40 ಮಿಮೀಗಿಂತ ತೆಳುವಾಗಿರುವ ಪಾಲಿಥೀನ್ ಚೀಲಗಳ ಉತ್ಪಾದನೆ, ದಾಸ್ತಾನು ಮತ್ತು ಮಾರಾಟವನ್ನು ಸರ್ಕಾರವು 2011ರಲ್ಲೇ ನಿಷೇಧಿಸಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಹಿತಿಗಳ ಪ್ರಕಾರ, ಪ್ಲಾಸ್ಟಿಕ್ ಕೈಚೀಲಗಳ ಬಳಕೆಯನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ದಿಲ್ಲಿ, ಚಂಡೀಗಢ, ಹರ್‍ಯಾನಾ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಲಕ್ಷದ್ವೀಪ, ನಾಗಾಲ್ಯಾಂಡ್, ರಾಜಸ್ಥಾನ, ಸಿಕ್ಕಿಂ ಮತ್ತು ತ್ರಿಪುರಾಗಳಲ್ಲಿ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕೆಲವು ಕೇಂದ್ರಾಡಳಿತ ಪ್ರದೇಶಗಳಲ್ಲೂ ಪ್ರವಾಸಿ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ನಿಷೇಧಿಸಲಾಗಿದೆ. ಪ್ಲಾಸ್ಟಿಕ್ ಚೀಲ ತಯಾರಕರು ಆಯಾ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಸೂಕ್ತ ಅನುಮತಿ ಪಡೆದಿರಬೇಕಾಗುತ್ತದೆ. ವಿವಿಧ ರಾಜ್ಯಗಳು ಈ ಕಾಯ್ದೆಯ ಜಾರಿಯಲ್ಲಿ ವಿವಿಧ ಬಗೆಯ ಕ್ರಮಗಳನ್ನು ಅನುಸರಿಸಿವೆ.

## 81. ಕೇಂದ್ರೀಯ ಸಿಬ್ಬಂದಿ ಯೋಜನೆಗಳು

**ಪ್ರಶ್ನೆ: (ದಿನಾಂಕ 23 ಜುಲೈ 2014)**

**ಈಗಿರುವ ಕೇಂದ್ರೀಯ ಸಿಬ್ಬಂದಿ ಯೋಜನೆ (ಸಿಎಸ್‌ಎಸ್)ನ್ನು ಸಂಪೂರ್ಣವಾಗಿ ಮರುವಿಮರ್ಶೆ ಮಾಡುವ ಪ್ರಸ್ತಾಪವು ಕೇಂದ್ರ ಸರ್ಕಾರದ ಮುಂದೆ ಇದೆಯೆ? ಇದ್ದರೆ ಈ ಕುರಿತ ಮಾಹಿತಿ ತಿಳಿಸಿ. ಸಂಬಂಧವೇ ಇಲ್ಲದ ಕಚೇರಿಗಳಿಗೆ ಅಧಿಕಾರಿಗಳನ್ನು ನಿಯುಕ್ತಿ ಮಾಡಿದ ಪ್ರಕರಣಗಳು ಇವೆಯೆ? ಹಾಗಿದ್ದರೆ ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳನ್ನು ತಿಳಿಸಿ. ಈ ಬಗೆಯ ನಿಯುಕ್ತಿಯಲ್ಲಿ ಅರ್ಹತೆಯನ್ನು ಆಧಾರವಾಗಿ ಪರಿಗಣಿಸಲಾಗುತ್ತಿದೆಯೆ?**

ಉತ್ತರ (ಡಾ॥ ಜಿತೇಂದ್ರ ಸಿಂಗ್, ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ ಮತ್ತು ಪ್ರಧಾನಮಂತ್ರಿಯವರ ಕಚೇರಿ ಇಲಾಖೆಗಳ ರಾಜ್ಯ ಸಚಿವರು)

ಕೇಂದ್ರೀಯ ಸಿಬ್ಬಂದಿ ಯೋಜನೆಯ ಕುರಿತ ಪುಸ್ತಕವನ್ನು 1996ರಲ್ಲಿ ಬಿಡುಗಡೆ ಮಾಡಲಾಗಿತ್ತು. ಅಲ್ಲಿಂದ ಈವರೆಗೆ ಈ ಯೋಜನೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಆದರೆ ಎಲ್ಲೂ ವ್ಯಕ್ತಿಗೂ, ವೃತ್ತಿಗೂ ಹೊಂದಾಣಿಕೆ ಆಗದ ಪ್ರಕರಣಗಳು ವರದಿಯಾಗಿಲ್ಲ. ವೃತ್ತಿಪರ ಅರ್ಹತೆಯನ್ನೇ ಇಲ್ಲಿ ಅಧಿಕಾರಿಗಳ ನಿಯುಕ್ತಿಯ ಸಂದರ್ಭದಲ್ಲಿ ಪರಿಗಣಿಸಲಾಗುತ್ತಿದೆ.



I am proud to be from an ideology. Our ideology is that the Nation is bigger than party. We will live and die for the nation. Our ideology is not about aspiring for posts, it's based of sacrifice.

■ Sri Narendra Modi, Prime Minister of India

## 82. ಒಂದೇ ಬಗೆಯ ವಿಷಯಗಳ ಏಕತ್ರಗೊಳಿಸುವಿಕೆ

**ಪ್ರಶ್ನೆ: (ದಿನಾಂಕ 22 ಜುಲೈ 2014)**

**ಪ್ರವಾಸೋದ್ಯಮ ಇಲಾಖೆಯು ಸಂಸ್ಕೃತಿ ಸಚಿವಾಲಯದೊಂದಿಗೆ ಸೇರಿ ಹಲವು ವಿಷಯಗಳನ್ನು ಏಕತ್ರಗೊಳಿಸುವ (ಕಾನ್ವರ್ಜೆನ್ಸ್) ಸಂಗತಿಯನ್ನು ಗುರುತಿಸಿದೆಯೆ? ಈ ಕುರಿತು ಕೈಗೊಂಡ ಕ್ರಮಗಳೇನು?**

ಉತ್ತರ: (ಶ್ರೀ ಶ್ರೀಪಾದ ನಾಯಕ್, ಮಾನ್ಯ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವರು

ಹೌದು. ಪ್ರವಾಸೋದ್ಯಮ ಇಲಾಖೆಯು ಸಂಸ್ಕೃತಿ ಇಲಾಖೆಯೊಂದಿಗೆ ಸೇರಿ ಈ ಕೆಳಗಿನ ಸಾಮಾನ್ಯ ವಿಷಯಗಳನ್ನು ಏಕತ್ರಗೊಳಿಸಿದೆ: ಫೆಸ್ಟಿವಲ್ ಆಫ್ ಇಂಡಿಯಾ / ರೋಡ್ ಶೋ, ಪರಂಪರೆಯ ತಾಣಗಳ ಪ್ರವಾಸೋದ್ಯಮ ಯೋಜನೆಗಳು, ಎಎಸ್‌ಐ ಸ್ಮಾರಕಗಳಲ್ಲಿ ಕ್ಲೀನ್ ಇಂಡಿಯಾ ಅಭಿಯಾನ, 'ಇನ್‌ಕ್ರೆಡಿಬಲ್ ಇಂಡಿಯಾ'ದ ಜಂಟಿ ಅಭಿಯಾನ; ಪ್ರವಾಸಿ ಸರ್ಕೂಟ್‌ಗಳನ್ನು ಅಭಿವೃದ್ಧಿಪಡಿಸುವುದು, ಪ್ರವಾಸ ಮಾರ್ಗದರ್ಶನ ತರಬೇತಿಯಲ್ಲಿ ಜಂಟಿ ಕಾರ್ಯಾಚರಣೆ.

## 83. ಆನೆಗಳ ಬೇಟೆ

**ಪ್ರಶ್ನೆ: (ದಿನಾಂಕ 6 ಆಗಸ್ಟ್ 2014)**

**ವಿವಿಧ ರಾಜ್ಯಗಳಿಂದ ಆನೆಗಳ ಅಸ್ವಾಭಾವಿಕ ಸಾವು ಮತ್ತು ಆನೆಗಳ ಹತ್ಯೆಯ ವರದಿಗಳು ಬಂದಿವೆಯೆ? ಕಳೆದ ಮೂರು ವರ್ಷಗಳ ಮಾಹಿತಿಯನ್ನು ಕೊಡಿ. ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು? ಆನೆಗಳ ಸಂರಕ್ಷಣೆಗೆ ಮತ್ತು ಆನೆ ಕಾರಿಡಾರ್‌ಗಳ ಮರುಸ್ಥಾಪನೆಗೆ ಬಿಡುಗಡೆಯಾದ ನಿಧಿಯ ವಿವರಗಳನ್ನು ನೀಡಿರಿ.**

ಉತ್ತರ: (ಶ್ರೀ ಪ್ರಕಾಶ್ ಜಾವಡೇಕರ್, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

ರೈಲಿಗೆ ಡಿಕ್ಕಿ, ವಿದ್ಯುದಾಘಾತ, ಬೇಟೆ ಮತ್ತು ವಿಷಾಹಾರ, – ಹೀಗೆ ಸತ್ತ ಆನೆಗಳ ಬಗ್ಗೆ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಪ್ರಕಾರ 2011–12ರಲ್ಲಿ 80, 2012–13ರಲ್ಲಿ 88 ಮತ್ತು 2013–14ರಲ್ಲಿ 38 ಮತ್ತು 2014–15ರಲ್ಲಿ ಈವರೆಗೆ 2 ಆನೆಗಳು ಸತ್ತಿವೆ. ಆನೆಗಳ ರಕ್ಷಣೆಯ ಬಗ್ಗೆ ಅರಣ್ಯ ಮತ್ತು ಪರಿಸರ ಸಚಿವಾಲಯ ಹಾಗೂ ರೈಲ್ವೆ ಇಲಾಖೆಯಿಂದ ಜಂಟಿ ಸುತ್ತೋಲೆಗಳನ್ನು ಪ್ರಕಟಿಸಲಾಗಿದೆ. ಈ ಪ್ರಕಾರ ರೈಲ್ವೆ ಹಳಿಗಳ ಅಕ್ಕಪಕ್ಕದ ಗಿಡಗಳನ್ನು ಸವರಬೇಕು, ಅಂಡರ್‌ಪಾಸ್ ಮತ್ತು ಓವರ್‌ಪಾಸ್‌ಗಳಲ್ಲಿ ಆನೆಗಳು ತಪ್ಪಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡಬೇಕು; ರೈಲು ಚಾಲಕರಿಗೆ ಆನೆಗಳ ಇರುವಿಕೆ ಬಗ್ಗೆ ಸೂಚನಾ ಫಲಕಗಳನ್ನು ಹಾಕುವುದು ಮತ್ತು ಅವರಿಗೆ ತರಬೇತಿ ನೀಡುವುದು, ರೈಲು ಮಾರ್ಗಗಳಲ್ಲಿ ಆನೆಗಳನ್ನು ಆಕರ್ಷಿಸುವ ಆಹಾರ ಇರದಂತೆ ನೋಡಿಕೊಳ್ಳುವುದು ಮುಂತಾದವುಗಳು ಸೇರಿವೆ. ವಿವಿಧ ರಾಜ್ಯಗಳಲ್ಲಿ ಒಟ್ಟು 28 ಆನೆ ಮೀಸಲು ಪ್ರದೇಶಗಳನ್ನು ಗುರುತಿಸಲಾಗಿದೆ.

## 84. ಜಾಹೀರಾತು ಬಾಕಿ ಪಾವತಿ

**ಪ್ರಶ್ನೆ: (ದಿನಾಂಕ 30 ಜುಲೈ 2014)**

**ವಿವಿಧ ಸಾರ್ವಜನಿಕ ಉದ್ದಿಮೆಗಳು ಮತ್ತು ಇಲಾಖೆಗಳಿಂದ ವಾಣಿಜ್ಯಕ ಜಾಹೀರಾತುಗಳ ಬಾಬ್ತಿನಲ್ಲಿ ದೂರದರ್ಶನಕ್ಕೆ ಭಾರೀ ಮೊತ್ತದ ಬಾಕಿ ಪಾವತಿ ಆಗಬೇಕಿದೆಯೆ? ಹಾಗಿದ್ದರೆ ಇದರ ವಿವರಗಳನ್ನು ತಿಳಿಸಿರಿ. ಈ ಬಾಕಿಯನ್ನು ತೀರಿಸಲು ಸರ್ಕಾರವು ಡಿಎವಿಪಿ ವಿಭಾಗಕ್ಕೆ ವಿನಂತಿಸಿಕೊಂಡಿದೆಯೆ? ಇಂಥ ಜಾಹೀರಾತುಗಳಿಗೆ ಕಡಿವಾಣ ಹಾಕಲು ಸರ್ಕಾರವು ಪ್ರಸ್ತಾಪಿಸಿದೆಯೆ?**





ಉತ್ತರ: (ಶ್ರೀ ಪ್ರಕಾಶ್ ಜಾವಡೇಕರ್, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ, ಸಂಸದೀಯ ವ್ಯವಹಾರಗಳ ರಾಜ್ಯ (ಸ್ವತಂತ್ರ ಖಾತೆ) ಸಚಿವರು)

ವಿವಿಧ ರಾಜ್ಯ ಮತ್ತು ಕೇಂದ್ರ ಇಲಾಖೆ / ವಿಭಾಗಗಳಿಂದ ಮತ್ತು ಸಾರ್ವಜನಿಕ ರಂಗದ ಉದ್ದಿಮೆಗಳಿಂದ ದೂರದರ್ಶನಕ್ಕೆ 2014ರ ಮೇ 31ರಲ್ಲಿದ್ದಂತೆ ಒಟ್ಟು 79,66,752 ರೂ.ಗಳ ಬಾಕಿ ಪಾವತಿಯಾಗಬೇಕಿದೆ. ಇದಲ್ಲದೆ ಡಿಎವಿಪಿಯು ದೂರದರ್ಶನಕ್ಕೆ 6,94,91,429 ರೂ.ಗಳನ್ನು ಪಾವತಿಸಬೇಕಿದೆ. ಆದರೆ ಇಲ್ಲಿ ಯಾವುದೇ ನಿರ್ಬಂಧವನ್ನೂ ವಿಧಿಸಿಲ್ಲ.

## 85. ಅಸಾಂಪ್ರದಾಯಿಕ ಇಂಧನಕ್ಕೆ ಉತ್ತೇಜನ

**ಪ್ರಶ್ನೆ: (ದಿನಾಂಕ 17 ಜುಲೈ 2014)**

**ದೇಶದಲ್ಲಿ ಅಸಾಂಪ್ರದಾಯಿಕ ಇಂಧನ ಮೂಲಗಳ ಮೂಲಕ ವಿದ್ಯುತ್ತನ್ನು ಉತ್ಪಾದಿಸುತ್ತಿರುವ ವಿದ್ಯುತ್‌ಸ್ಥಾವರಗಳ ಸಂಖ್ಯೆ ಎಷ್ಟು? ಇಲ್ಲಿ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆಯಾಗುತ್ತಿದೆ? ದೇಶದಲ್ಲಿ ವಿದ್ಯುತ್ ಬಿಕ್ಕಟ್ಟು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಅಸಾಂಪ್ರದಾಯಿಕ ಇಂಧನವನ್ನು ಬಳಸಿಕೊಳ್ಳಲು ಮತ್ತು ಉತ್ತೇಜಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ?**

ಉತ್ತರ: (ಶ್ರೀ ಪೀಯೂಶ್ ಗೋಯೆಲ್, ಮಾನ್ಯ ವಿದ್ಯುತ್, ಕಲ್ಲಿದ್ದಲು, ಹೊಸ ಮತ್ತು ನವೀಕರಿಸಬಹುದಾದ ಇಂಧನ (ಸ್ವತಂತ್ರ ಖಾತೆ) ರಾಜ್ಯ ಸಚಿವರು)

ದೇಶದಲ್ಲಿ ಈಗ ಒಟ್ಟಾರೆ 31,693 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಅಸಾಂಪ್ರದಾಯಿಕ ಮೂಲದ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ನವೀಕರಿಸಬಹುದಾದ ಇಂಧನ ಮೂಲಗಳಿಂದ 3619 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಸೃಜಿಸಲಾಗಿದೆ. ಇದರಲ್ಲಿ 946 ಮೆಗಾವ್ಯಾಟ್ ಸೌರಶಕ್ತಿ, 2079 ಮೆಗಾವ್ಯಾಟ್ ಗಾಳಿ ವಿದ್ಯುತ್, 171ಕಿರು ಜಲವಿದ್ಯುತ್ ಮತ್ತು 423 ಮೆಗಾವ್ಯಾಟ್ ಜೈವಿಕ ಶಕ್ತಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯಗಳು ಸೇರಿವೆ.

ಹೂಡಿಕೆ ಉತ್ತೇಜಕಗಳು, ಬಂಡವಾಳ/ ಬಡ್ಡಿ ಸಬ್ಸಿಡಿ, ಉತ್ಪಾದನಾ ಆಧಾರಿತ ಉತ್ತೇಜಕಗಳು, ವಿನಾಯ್ತಿ ದರದ ಅಬಕಾರಿ ಮತ್ತು ಸುಂಕಗಳು, ಪ್ರಮಾಣಪತ್ರಗಳು – ಹೀಗೆ ಹಲವು ಕ್ರಮಗಳಿಂದ ಅಸಾಂಪ್ರದಾಯಿಕ ಇಂಧನವನ್ನು ಉತ್ತೇಜಿಸಲು ಸರ್ಕಾರವು ಮುಂದಾಗಿದೆ.

## 86. ಕರ್ನಾಟಕದ ಸ್ಮಾರ್ಟ್ ಸಿಟಿಗಳ ಪಟ್ಟಿಗೆ ಕೋರಿಕೆ

**ಪ್ರಶ್ನೆ: (ದಿನಾಂಕ 23 ಜುಲೈ 2014ರ ಚರ್ಚೆ)**

**ಈಗಿರುವ ಮಧ್ಯಮ ಗಾತ್ರದ ನಗರಗಳನ್ನು 100 ಸ್ಮಾರ್ಟ್‌ಸಿಟಿಗಳನ್ನಾಗಿ ರೂಪಿಸುವ ಕುರಿತು 7600 ಕೋಟಿ ರೂ.ಗಳ ಅಭಿವೃದ್ಧಿ ನಿಧಿಯನ್ನು ನೀಡುವ ಪ್ರಸ್ತಾಪ ಇದೆಯೆ? ಹಾಗಿದ್ದರೆ ಈ ಯೋಜನೆಯಲ್ಲಿ ಸೇರಿರುವ ಕರ್ನಾಟಕದ ನಗರಗಳ ಪಟ್ಟಿಯನ್ನು ಕೊಡಿ.**

ಉತ್ತರ (ಶ್ರೀ ಎಂ ವೆಂಕಯ್ಯ ನಾಯ್ಡು, ಮಾನ್ಯ ನಗರಾಭಿವೃದ್ಧಿ ಸಚಿವರು)

ದೇಶದಲ್ಲಿ ಸ್ಮಾರ್ಟ್ ಸಿಟಿಗಳನ್ನು ನಿರ್ಮಿಸುವ ಯೋಜನೆಯು ಈಗ ಪರಿಕಲ್ಪನೆಯ ಹಂತದಲ್ಲಿದೆ. ಇದರ ವಿವರಗಳನ್ನು ಈಗ ಗುರುತಿಸಲಾಗುತ್ತಿದೆ. ಇದನ್ನು ಒಮ್ಮೆ ಅಂತಿಮಗೊಳಿಸಿದ ನಂತರ ನಾನು ಈ ಬಗ್ಗೆ ಮಾಹಿತಿ ನೀಡುತ್ತೇನೆ.



For you I am neither the PM or CM. Our bond is a bond of affection and I am your sevak.

■ Sri Narendra Modi, Prime Minister of India


Sursagar Ventures
NIIT



NMPT AREA













Each one of us has a natural instinct to rise, like a flame of the lamp. Lets nurture this instinct.Each one of us has both; good and evil virtues. Those who decide to focus on the good ones succeed in life.

■ **Sri Narendra Modi, Prime Minister of India**

# ಲೋಕಸಭೆಯಲ್ಲಿ ಶ್ರೀ ನಳಿನ್‌ಕುಮಾರ್ ಕಟೀಲ್ ಭಾಗವಹಿಸಿದ ಚರ್ಚೆಗಳ ವಿವರ

| DATE | DEBATE TITLE/ BILL NAME | DEBATE TYPE |
|---|---|---|
| 7/9/2014 | "Need to provide central assistance to the Government of Karnataka to check sea erosion in the coastal areas of the State" | LS - Matters under (Rule-377) |
| 7/14/2014 | "(I) The Budget (Railways) – 2014-15 (II) Demands for Excess Grants (Railways) – 2011-12" | Budget (Railways) |
| 7/14/2014 | "Request to prepare a national plan for tackling sea erosion and extend all possible support to the States located on the coastal areas of country" | Special Mention |
| 7/17/2014 | "(I) Budget (General)–2014-15 (II) Demands for Excess Grants (General) –2011-12" | Budget (General) |
| 7/23/2014 | "Demands for Grants No. 83 under the control of the Ministry of Road Transport and Highways for 2014-15" | Budget (General) |
| 7/31/2014 | Flood and drought situation in the country | LS - Short Duration Discussions (Rule-193) |
| 7/31/2014 | "Request to introduce Special Agriculture Zone (SAZ) to implement agriculture based projects in my Dakshina Kannada district" | Special Mention |
| 8/6/2014 | "Need to protect the interests of domestic arecanut growers distressed due to decline in the price of the produce caused by import of low-priced arecanut" | LS - Matters under (Rule-377) |





## 1. ಅಗ್ಗದ ಬೆಲೆಯ ಅಡಕೆ ಆಮದಿನಿಂದ ದೇಶಿ ಅಡಕೆ ಬೆಳೆ ಕುಸಿತ

**ಪ್ರಶ್ನೆ: (ದಿನಾಂಕ 6 ಆಗಸ್ಟ್ 2014, ಅಭಿಪ್ರಾಯ ಮಂಡನೆ)**

ಭಾರತಕ್ಕೆ ನೇಪಾಳ ಮತ್ತು ಬಾಂಗ್ಲಾ ದೇಶದಿಂದ ಅಡಕೆಯು ಆಮದಾಗುತ್ತಿದೆ. ಇದರಿಂದಾಗಿ ಸ್ಥಳೀಯವಾಗಿ ಬೆಳೆದ ಅಡಕೆ ಬೆಲೆಯು ಕುಸಿದಿದೆ. ಆದ್ದರಿಂದ ಆಮದಿತ ಅಡಕೆಯ ಬೆಲೆಯನ್ನು ಹೆಚ್ಚಿಸಬೇಕೆಂದು ಸಂಸತ್ತಿನ ದಕ್ಷಿಣ ಮತ್ತು ಪೂರ್ವ ಭಾಗದ ಸದಸ್ಯರು ಒತ್ತಾಯಿಸುತ್ತಿದ್ದಾರೆ. ಇದರಿಂದಾಗಿ ಸ್ಥಳೀಯ ಕೃಷಿಕರಿಗೆ ಅನುಕೂಲವಾಗುತ್ತದೆ.

ಇದಲ್ಲದೆ ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಅಡಕೆ ಬೆಳೆಗಾರರ ಹಿತರಕ್ಷಣೆಗಾಗಿ ವಾದಿಸಲು ಹಿರಿಯ ನ್ಯಾಯವಾದಿಗಳನ್ನು ನೇಮಿಸಿರುವುದಿಲ್ಲ. ಅಡಕೆ ಬೆಳೆಯುವ ರಾಜ್ಯಗಳಲ್ಲಿನ ದುಬಾರಿ ತೆರಿಗೆಗಳಿಂದ ಖಾಸಗಿ ವ್ಯಾಪಾರಿಗಳ ಭಾಗಿತ್ವವೇ ಕುಸಿದಿದೆ. ಇದನ್ನೆಲ್ಲ ತಡೆಯಲು ದೇಶದಲ್ಲಿ ತೆರಿಗೆಯ ಪ್ರಮಾಣೀಕರಣ ಆಗಬೇಕಿದೆ. ಅಡಕೆ ಬೆಳೆಗಾರರ ಹಿತರಕ್ಷಣೆಗೆ ಕೇಂದ್ರ ಕೃಷಿ, ವಾಣಿಜ್ಯ ಮತ್ತು ಉದ್ಯಮ ಸಚಿವರು ಮುಂದಾಗಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

## 2. ಬರಗಾಲ ಸನ್ನಿವೇಶಕ್ಕೆ ಸಜ್ಜಾಗಲು ಕೋರಿಕೆ

ಈ ವರ್ಷ ಮತ್ತೆ ಕರ್ನಾಟಕವು ಭೀಕರ ಬರಗಾಲವನ್ನು ಎದುರಿಸುತ್ತಿದೆ. ಜೂನ್ ತಿಂಗಳಿನಲ್ಲಿ ಅತಿ ಕನಿಷ್ಠ ಮಳೆಯಾಗಿದೆ. ರಾಜ್ಯವು ಈ ತಿಂಗಳಲ್ಲಿ ಕೇವಲ ಶೇ. 47ರಷ್ಟು ಮಳೆಯನ್ನು ಪಡೆದಿದೆ. ಜೂನ್ 30ರ ಹೊತ್ತಿಗೆ ಒಟ್ಟು 25.36 ಲಕ್ಷ ಹೆಕ್ಟೇರ್ ಉಳುಮೆ ಆಗಬೇಕಿತ್ತು; ಆದರೆ ಕೇವಲ 18.92 ಲಕ್ಷ ಹೆಕ್ಟೇರುಗಳಲ್ಲಿ ಉಳುಮೆಯಾಗಿದೆ. ರಾಜ್ಯದ 125 ತಾಲೂಕುಗಳು ಬರಪೀಡಿತ ಎಂದು ರಾಜ್ಯ ಸರ್ಕಾರವು ಘೋಷಿಸಿದೆ. ಕಳೆದ ಎರಡು ಮೂರು ತಿಂಗಳುಗಳಿಂದ ಇಲ್ಲಿ ಬರದ ಛಾಯೆ ಹಬ್ಬಿದೆ.

ಆದ್ದರಿಂದ ಕೇಂದ್ರಸರ್ಕಾರವು ಬರಪೀಡಿತ ಪ್ರದೇಶಗಳಲ್ಲಿ ಸೂಕ್ತ ಪರಿಹಾರ ನಿಧಿಯನ್ನು ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ. ಅಲ್ಲದೆ ಕುಡಿಯುವ ನೀರು, ಮೇವು ಮತ್ತು ಇತರೆ ಆಹಾರ ಪದಾರ್ಥಗಳ ಸರಬರಾಜಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ವಿನಂತಿಸುತ್ತೇನೆ.

## 3. ಸಮುದ್ರ ಕೊರೆತ ತಡೆಗೆ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕಿನ ನೆರವಿನ ಯೋಜನೆ

ಪ್ರತೀವರ್ಷವೂ ಮಂಗಳೂರು ಸೇರಿದಂತೆ ರಾಜ್ಯದ ಕರಾವಳಿ ಪ್ರದೇಶಗಳು ಸಮುದ್ರಕೊರೆತದ ಸಮಸ್ಯೆಯನ್ನು ಎದುರಿಸುತ್ತಲೇ ಇವೆ. ಲಕ್ಷಗಟ್ಟಲೆ ಮೀನುಗಾರರು ತಮ್ಮ ಜೀವಿತಕ್ಕಾಗಿ ಸಮುದ್ರವನ್ನೇ ಅವಲಂಬಿಸಿದ್ದಾರೆ. ಕರ್ನಾಟಕದ ಸಮುದ್ರ ಕೊರೆತ ಸಮಸ್ಯೆ ನಿವಾರಣೆಗೆ ಹಿಂದಿನ ಬಿಜೆಪಿ ರಾಜ್ಯ ಸರ್ಕಾರವು ಏಶ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಜೊತೆಗೆ ಒಂದು ಒಪ್ಪಂದವನ್ನು ಮಾಡಿಕೊಂಡಿತ್ತು ಎಂದು ಕೇಳಿದ್ದೇವೆ. ಈ ಯೋಜನೆಯನ್ನು ಒಟ್ಟು ಮೂರು ಹಂತಗಳಲ್ಲಿ 2018ರೊಳಗೆ ಜಾರಿಗೊಳಿಸಬೇಕಿದೆ. ಈ ಕುರಿತು ಕೇಂದ್ರ ಸರ್ಕಾರವು ಒಂದು ರಾಷ್ಟ್ರೀಯ ಯೋಜನೆಯನ್ನು ರೂಪಿಸಿ ಎಲ್ಲ ಕರಾವಳಿ ತಟ ಹೊಂದಿರುವ ರಾಜ್ಯಗಳ ನೆರವಿಗೆ ಮುಂದಾಗಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇದರಿಂದಾಗಿ ಕರಾವಳಿಯ ಜನತೆ, ಅದರಲ್ಲೂ ಮೀನುಗಾರ ಕುಟುಂಬಗಳು ನೆಮ್ಮದಿಯಿಂದ ಬದುಕು ಸಾಗಿಸಬಹುದಾಗಿದೆ.





As India will complete 75 years of Independence in the year 2022, let's work towards Surajya & a nation where every section of society is developed.

■ Sri Narendra Modi, Prime Minister of India

## 4. ದಕ್ಷಿಣ ಕನ್ನಡ ಜಿಲ್ಲೆಯ ಪೆಟ್ರೋಲಿಯಂ, ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಹೂಡಿಕೆ ವಲಯಕ್ಕೆ (ಪಿಸಿಪಿಐಆರ್) ವಿರೋಧ; ವಿಶೇಷ ಕೃಷಿ ವಲಯ ಸ್ಥಾಪನೆಗೆ ಒತ್ತಾಯ

ಈ ಹಿಂದಿ ಸರ್ಕಾರವು ಪಿಸಿಪಿಐಆರ್ ಯೋಜನೆಗಳನ್ನು ದೇಶದ ಐದು ರಾಜ್ಯಗಳಲ್ಲಿ ಪರಿಚಯಿಸಿತ್ತು. ಮಾಧ್ಯಮ ವರದಿಗಳಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು 300 ಚದರ ಕಿಮೀ ವ್ಯಾಪ್ತಿಯನ್ನು ಹೊಂದಲಿದೆ. ಈಗಾಗಲೇ ನಮ್ಮ ಜಿಲ್ಲೆಯ ರೈತರು ಎಂಎಸ್‌ಇಝಡ್, ಎಂಆರ್‌ಪಿಎಲ್ ಮತ್ತು ಇತರೆ ಯೋಜನೆಗಳಿಗಾಗಿ ಸಾಕಷ್ಟು ಭೂಮಿಯನ್ನು ಕಳೆದುಕೊಂಡಿದ್ದಾರೆ. ಈಗ ಕಳೆದ 2–3 ವರ್ಷಗಳಿಂದ ನಮ್ಮ ರೈತರು ಪಿಸಿಪಿಐಆರ್ ಯೋಜನೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಪಿಸಿಪಿಐಆರ್ ಯೋಜನೆಗೆ ಪ್ರತಿದಿನ ಒಟ್ಟು 640 ದಶಲಕ್ಷ ಲೀಟರ್ ನೀರು ಬೇಕು. ಇದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಲಿದೆ. ಇದಲ್ಲದೆ 300 ಚದರ ಕಿಮೀ ಜಾಗವನ್ನು ನೀಡುವುದರಿಂದ ನಮ್ಮ ರೈತರು ಮತ್ತು ಕೃಷಿ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಒಳಗಾಗಲಿದ್ದಾರೆ.

ಈ ಯೋಜನೆಯ ಬಗ್ಗೆ ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿ ಕೆಎಸ್‌ಐಐಡಿಎಸ್ ಮೂಲದ ಮಾಹಿತಿಯ ಪ್ರಕಾರ ಈ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಕಡತಗಳೂ ಇಲ್ಲ ಎಂದು ಕಂಡುಬಂದಿದೆ. 2008ರಲ್ಲಿ ಆಗಿನ ಬಿಜೆಪಿ ಆಡಳಿತದ ರಾಜ್ಯ ಸರ್ಕಾರವು ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು ಎಂದು ನಿರ್ಧರಿಸಿತ್ತು.

ಆದ್ದರಿಂದ ಪಿಸಿಪಿಐಆರ್ ಯೋಜನೆಯನ್ನು ಈ ಕೂಡಲೇ ಹಿಂದೆಗೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಬದಲಿಗೆ ಸರ್ಕಾರವು ಕೃಷಿ ಆಧಾರಿತ ಯೋಜನೆಗಳನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರೋತ್ಸಾಹಿಸಲು ವಿಶೇಷ ಕೃಷಿ ವಲಯವನ್ನು ಸ್ಥಾಪಿಸಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

## 5. ಭೂ ಸಾರಿಗೆ ಮತ್ತು ಹೆದ್ದಾರಿ ಅನುದಾನ ಚರ್ಚೆಯಲ್ಲಿ ಶಿರಾಡಿ ಘಾಟ್ ಅಭಿವೃದ್ಧಿಗೆ ಒತ್ತಾಯ

ಭಾರತದ ಮೂರನೇ ಒಂದು ಭಾಗದಷ್ಟು ಜನರು ನಗರಗಳಲ್ಲಿ ಜೀವಿಸಿದ್ದರೂ, ಅವರು ದೇಶದ ವರಮಾನದ ಮೂರನೇ ಎರಡರಷ್ಟು ಪಾಲನ್ನು ಉತ್ಪಾದಿಸುತ್ತಿದ್ದಾರೆ. ಕಂದಾಯದ ಶೇ. 90 ಭಾಗಕ್ಕೂ ಅವರೇ ಕಾರಣರು. ಆದ್ದರಿಂದ ಅವರಿಗೆ ಉತ್ತಮ ಸಾರ್ವಜನಿಕ ಸಾಗಾಟ ವ್ಯವಸ್ಥೆಯನ್ನು ಕಲ್ಪಿಸಬೇಕು. ಕಳಪೆ ರಸ್ತೆಗಳಿಂದಾಗಿ ಸಂಚಾರವು ನಿಧಾನವಾಗಿದೆ. ಇದಲ್ಲದೆ ಟಯರ್ 1 ಮತ್ತು 2 ನಗರಗಳಲ್ಲಿ ಸಾರ್ವಜನಿಕ ಸಂಚಾರ ವ್ಯವಸ್ಥೆಯನ್ನು ಕಲ್ಪಿಸಬೇಕಿದೆ.

ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯ 385 ಕಿಮೀ ರಸ್ತೆಯನ್ನು ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರವು ಒಂದು ಪ್ರಸ್ತಾಪವನ್ನು ಮಂಡಿಸಿದೆ. ರಾಮನಗರಂ, ಚನ್ನಪಟ್ಟಣ, ಮಂಡ್ಯ, ಮೈಸೂರು ಮತ್ತು ಮಡಿಕೇರಿಯನ್ನು ಹಾದು ರಾಷ್ಟ್ರೀಯ ಹೆದ್ದಾರಿ 17ನ್ನು ಮಂಗಳೂರಿನಲ್ಲಿ ಸೇರುವ ಈ ರಸ್ತೆಯ ಯೋಜನೆಯನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇದಲ್ಲದೆ ದೇಶದ ಸಂಚಾರ ಸುರಕ್ಷತೆಯ ಬಗ್ಗೆಯೂ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ನಾನು ಆಗ್ರಹಿಸುತ್ತೇನೆ.

ರಾಷ್ಟ್ರೀಯ ಹೆದ್ದಾರಿ 48ರ ಭಾಗವಾಗಿರುವ, ಸಕಲೇಶಪುರ ಮತ್ತು ಗುಂಡಿಯಾ ನಡುವಣ ಶಿರಾಡಿ ಘಾಟಿನ 30 ಕಿಮೀ ಉದ್ದದ ರಸ್ತೆಯು ಮಂಗಳೂರು ಮಾತ್ರವಲ್ಲದೆ ಹಲವು ಪ್ರವಾಸ ತಾಣಗಳಿಗೆ ಸಂಪರ್ಕ ಸಾಧಿಸುತ್ತದೆ. ಆದರೆ ಈ ರಸ್ತೆಯು





ತುಂಬಾ ಕಳಪೆ ಸ್ಥಿತಿಯಲ್ಲಿದೆ; ತಾತ್ಕಾಲಿಕ ದುರಸ್ತಿಗಳು ನಡೆದಿದ್ದರೂ ಗುಂಡಿಗಳನ್ನು ಮುಚ್ಚಲಾಗಿಲ್ಲ. ಈಗಂತೂ ಈ ರಸ್ತೆಯನ್ನು ಹಾದುಹೋಗಲು ಎರಡು ಗಂಟೆಗಳೇ ಬೇಕು. ಆದ್ದರಿಂದ ಈ ರಸ್ತೆಯನ್ನು ಸರ್ಕಾರವು ಕೂಡಲೇ ದುರಸ್ತಿ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಆಗ್ರಹಿಸುತ್ತೇನೆ.

## 6. ರೈಲ್ವೆ ಬಜೆಟ್ ಮೇಲೆ ಚರ್ಚೆ

ಉತ್ಸಾಹದಾಯಕ ಮತ್ತು ದೂರದರ್ಶಿತ್ವದ ರೈಲ್ವೆ ಬಜೆಟನ್ನು ಮಂಡಿಸಿದ್ದಕ್ಕಾಗಿ ನಾನು ಮಾನ್ಯ ಸಚಿವ ಶ್ರೀ ಸದಾನಂದಗೌಡರನ್ನು ಅಭಿನಂದಿಸುತ್ತೇನೆ. ಅವರು ಈ ದೇಶದ ಮತ್ತು ರಾಜ್ಯದ ಜನತೆಗೆ ಹರ್ಷ ತಂದಿದ್ದಾರೆ. ಬಿಜೆಪಿ ಸರ್ಕಾರವು ರೈಲ್ವೆಯ ಅಧುನೀಕರಣಕ್ಕಾಗಿ ದಿಟ್ಟತನದ ಕ್ರಮಗಳನ್ನು ಕೈಗೊಂಡಿದೆ. ಬೆಂಗಳೂರು – ಮಂಗಳೂರು ನಡುವೆ ಹೊಸ ದೈನಿಕ ರೈಲನ್ನು ಬಿಡಲಾಗಿದೆ. ಕಡಿಮೆ ಕಾಲಾವಧಿಯ ಪ್ರಯಾಣಕ್ಕಾಗಿ ಈ ರೈಲು ಅರಸೀಕೆರೆ ಮಾರ್ಗವಾಗಿ ಚಲಿಸಬೇಕೆಂದು ನಾನು ವಿನಂತಿಸುತ್ತೇನೆ. ಈಗಿರುವ ರಾತ್ರಿ ರೈಲು ಸಾಕಾಗದು; ಇನ್ನೂ ಒಂದು ರೈಲನ್ನು ಈ ಮಾರ್ಗದಲ್ಲಿ ಬಿಡಬೇಕಿದೆ. ಮಂಗಳೂರು – ಶ್ರವಣಬೆಳಗೊಳ ರೈಲು ಸಂಚಾರವನ್ನು ಆದಷ್ಟೂ ಬೇಗ ಆರಂಭಿಸಬೇಕು ಎಂದು ವಿನಂತಿಸುತ್ತೇನೆ. ಬೈಂದೂರು ಮತ್ತು ಕಾಸರಗೋಡು ನಡುವಣ ಹೊಸ ರೈಲಿನಿಂದ ಕೊಲ್ಲೂರು, ಉಡುಪಿ, ಮಣಿಪಾಲದ ನಡುವೆ ಸಂಪರ್ಕ ಸಾಧಿಸಿದಂತಾಗಿದೆ. ಆದ್ದರಿಂದ ಇದರ ವೇಳಾಪಟ್ಟಿಯನ್ನು ಸೂಕ್ತವಾಗಿ ರಚಿಸಬೇಕಿದೆ.

ಇದಲ್ಲದೆ ಮಂಗಳೂರು – ದೇಮು ಪ್ಯಾಸೆಂಜರ್ ರೈಲು, ಮಂಗಳೂರು – ಮಡಗಾವ್ ಇಂಟರ್ ಸಿಟಿ ರೈಲುಗಳ ವೇಳಾಪಟ್ಟಿಯನ್ನೂ ಪರಿಷ್ಕರಿಸಬೇಕಿದೆ.

ಮಂಗಳೂರಿಗೆ ಪ್ರತ್ಯೇಕ ರೈಲ್ವೆ ವಿಭಾಗವನ್ನು ಸೃಷ್ಟಿಸಬೇಕು, ಈಗಿರುವ ಯಶವಂತಪುರ – ಕಾರವಾರ ಎಕ್ಸ್‌ಪ್ರೆಸ್ ರೈಲನ್ನು ವಾರಕ್ಕೆ ಮೂರು ಸಲದ ಬದಲು ದಿನಾಲೂ ಚಲಾಯಿಸಬೇಕು; ಮಂಗಳೂರು ಮತ್ತು ವಾಸ್ಕೋ ಡ ಗಾಮ ನಡುವೆ ಹೊಸ ರೈಲು ಆರಂಭಿಸಬೇಕು, ಮಂಗಳೂರು – ಮುಂಬಯಿ ರೈಲು ಮಾರ್ಗವನ್ನು ಡಬಲ್ ಮಾಡಬೇಕು; ಮಂಗಳೂರು ಮತ್ತು ಸುಬ್ರಹ್ಮಣ್ಯ ನಡುವಣ ಈಗಿರುವ ಪ್ಯಾಸೆಂಜರ್ ರೈಲನ್ನು ದೆಮು ರೈಲು ಎಂದು ಪರಿವರ್ತಿಸಬೇಕು; ಭಟ್ಕಳ – ತೊಕ್ಕೂರು ದೆಮು ರೈಲನ್ನು ಸುಬ್ರಹ್ಮಣ್ಯ ರೋಡ್‌ವರೆಗೆ ವಿಸ್ತರಿಸಬೇಕು; ಮಡಗಾವ್ – ಮಂಗಳೂರು ಇಂಟರ್‌ಸಿಟಿ ರೈಲನ್ನು ಸುಬ್ರಹ್ಮಣ್ಯ ರೋಡ್‌ವರೆಗೆ ವಿಸ್ತರಿಸಬೇಕು; ಮಂಗಳೂರು – ಹೈದರಾಬಾದ್ ರೈಲಿನ ಮಾರ್ಗವನ್ನು ಮಂಗಳೂರು ಸೆಂಟ್ರಲ್ – ಹಾಸನ – ಅರಸೀಕೆರೆ – ಚಿಕ್ಕಜಾಜೂರು – ಗುಂತಕಲ್ – ಕಾಚಿಗುಡ – ಹೀಗೆ ರೂಪಿಸಬೇಕು; ಮೈಲ್/ ಎಕ್ಸ್‌ಪ್ರೆಸ್ ರೈಲುಗಳಲ್ಲಿ ವಿಶೇಷ ಸಬಲರಿಗೆ ವಿಶೇಷ ವಿನ್ಯಾಸಿತ ಬೋಗಿಗಳನ್ನು ಕೂಡಿಸಬೇಕು; ಮಂಗಳೂರು ಸೆಂಟ್ರಲ್‌ನಲ್ಲಿ ಇನ್ನೂ ಎರಡು ಪ್ಲಾಟ್‌ಫಾರಂಗಳನ್ನು ನಿರ್ಮಿಸಬೇಕು; ಮಂಗಳೂರು ಮತ್ತು ತೊಕ್ಕೂರು ನಡುವಣ ಮಾರ್ಗವನ್ನು ಡಬಲ್ ಮಾಡಬೇಕು; ಇದು ನಿಧಿಯ ಕೊರತೆಯಿಂದ ಆಮೆವೇಗದಲ್ಲಿ ನಡೆಯುತ್ತಿದೆ. ಇದಕ್ಕಾಗಿ ಸೂಕ್ತ ನಿಧಿಯನ್ನು ಮೀಸಲಿಡಬೇಕು; ಮಂಗಳೂರು ಸೆಂಟ್ರಲ್ ನಿಲ್ದಾಣದಲ್ಲಿ ಪ್ಯಾಸೆಂಜರ್ ಲಿಫ್ಟ್‌ಗಳನ್ನು ಮತ್ತು ಎಲೆವೇಟರ್‌ಗಳನ್ನು ಸ್ಥಾಪಿಸಿ ಹಿರಿಯ ನಾಗರಿಕರಿಗೆ ಸಂಚರಿಸಲು ಅನುವು ಮಾಡಿಕೊಡಬೇಕು; ಇದಲ್ಲದೆ ಹಿಂದಿನ ಬಜೆಟ್‌ನಲ್ಲಿಯೇ ಪ್ರಕಟಿಸಿದಂತೆ ಕಾರ್ಕಳ–ಬೆಳ್ತಂಗಡಿ–ಉಜಿರೆ–ಧರ್ಮಸ್ಥಳ–ನೆಟ್ಟಾಣ, ಬೈಂದೂರು – ನೆಟ್ಟಾಣ, ಮೈಸೂರು–ಮಡಿಕೇರಿ–ಮಂಗಳೂರು ರೈಲು ಮಾರ್ಗ ಸಮೀಕ್ಷೆಯನ್ನು ಕೂಡಲೇ ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

## 7. ಕೇಂದ್ರ ಬಜೆಟ್ 2014–15ರ ಮೇಲಿನ ಚರ್ಚೆ

ಇದು ಒಂದು ದೂರದರ್ಶಿತ್ವದ ಬಜೆಟ್ ಆಗಿದ್ದು ನಾನು ಪ್ರಧಾನಮಂತ್ರಿ ಹಾಗೂ ವಿತ್ತಸಚಿವರನ್ನು ಅಭಿನಂದಿಸುತ್ತೇನೆ. ಇದು ರೈತಪರ, ಜನಪರ ಮತ್ತು ಅಭಿವೃದ್ಧಿಪರವಾಗಿದೆ. ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ ಎಂಬ ಮಾತಿಗೆ ಸೂಕ್ತವಾಗಿದೆ.



Our nation is filled with tremendous energy of the youth. Whatever future we desire of, we must keep the youth at the centre. If we do this, we can surge ahead at an unmatchable pace! Our demographic dividend is our strength.

■ Sri Narendra Modi, Prime Minister of India

ದೇಶದ ಎಲ್ಲಾ ರಾಜ್ಯಗಳಿಗೆ, ಎಲ್ಲಾ ವರ್ಗದ ಜನರಿಗೆ ಒಂದಲ್ಲ ಒಂದು ಕೊಡುಗೆಯನ್ನು ಈ ಬಜೆಟ್ ನೀಡಿದೆ. ಸ್ವಚ್ಛಭಾರತ ಅಭಿಯಾನ, ನದಿಗಳ ಜೋಡಣೆ, ಔದ್ಯಮಿಕ ಕಾರಿಡಾರ್‌ಗಳ ಅಭಿವೃದ್ಧಿ, ಉತ್ಪಾದನಾ ರಂಗದ ಪುನಶ್ಚೇತನ, ರಸ್ತೆ, ವಿಮಾನ ನಿಲ್ದಾಣ ನಿರ್ಮಾಣ, ಮಹಿಳಾ ಸುರಕ್ಷತೆ – ಹೀಗೆ ಈ ಬಜೆಟ್ ಸ್ವಾಗತಾರ್ಹವಾಗಿದೆ. ರೈತರಿಗಾಗಿ ಕಿಸಾನ್ ವಿಕಾಸಪತ್ರವನ್ನು ಮರುಜಾರಿಗೊಳಿಸಲಾಗಿದೆ. ಪ್ರಧಾನಮಂತ್ರಿ ಕೃಷಿ ಸಿಂಚಾಯೀ ಯೋಜನೆ ಜಾರಿಯಾಗಲಿದೆ. ದೇಶದಾದ್ಯಂತ 7060 ಕೋಟಿ ರೂ.ಗಳ ವೆಚ್ಚದಲ್ಲಿ 100 ಸ್ಮಾರ್ಟ್ ಸಿಟಿಗಳ ನಿರ್ಮಾಣವಾಗಲಿದೆ. ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗಾಗಿ ಯೋಜನೆಗಳಿವೆ. ವಿಶಿಷ್ಟ ಚೇತನರಿಗಾಗಿ ನೆರವು ದೊರೆತಿದೆ. ಇನ್ನೂ 15 ಬ್ರೈಲ್ ಮುದ್ರಣಾಲಯಗಳು ಸ್ಥಾಪನೆಯಾಗಲಿವೆ. ಗ್ರಾಮೀಣ ರಸ್ತೆಗಳಿಗಾಗಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ 14389 ಕೋಟಿ ರೂ.ಗಳನ್ನು ನೀಡಲಾಗಿದೆ. ಉಚಿತ ಔಷಧ ಸೇವೆ ಮತ್ತು ಉಚಿತ ತಪಾಸಣೆ – ಇವು ಎಲ್ಲರಿಗೂ ಆರೋಗ್ಯ ಎಂಬ ಘೋಷಣೆಗೆ ಸೂಕ್ತವಾಗಿವೆ.

ಕರ್ನಾಟಕದ ಬಗ್ಗೆ ಹೇಳುವುದಾದರೆ ಮೈಸೂರಿನಲ್ಲಿ ಜವುಳಿ ಮೆಗಾ ಕ್ಲಸ್ಟರ್ ಅಭಿವೃದ್ಧಿಪಡಿಸಲಾಗುವುದು. ಚೆನ್ನೈ – ಬೆಂಗಳೂರು ಉದ್ಯಮ ಮೊಗಸಾಲೆಯಡಿ ತುಮಕೂರನ್ನು ಸ್ಮಾರ್ಟ್‌ಸಿಟಿಯಾಗಿ ಅಭಿವೃದ್ಧಿಪಡಿಸಲಾಗುವುದು. ಸಾಲ ಮರುವಸೂಲಾತಿ ನ್ಯಾಯಾಧಿಕರಣವನ್ನು ಬೆಂಗಳೂರಿನಲ್ಲೂ ಸ್ಥಾಪಿಸಲಾಗುವುದು. ಖನಿಜ ರಾಯಧನದ ಪುನರ್ವಿಮರ್ಶೆಯನ್ನು ಮಾಡಲಾಗುವುದು.

ಕರ್ನಾಟಕವೂ ಸೇರಿದಂತೆ ದೇಶದ ಹಲವೆಡೆ ಬರಗಾಲದ ಪರಿಣಾಮದಿಂದ ಕೃಷಿಗಾಗಿ ನೀರಿನ ಅಭಾವವಿದೆ. ಇಂಥ ಸ್ಥಳಗಳಿಗೆ ಕೇಂದ್ರ ಸರ್ಕಾರವು ತಂಡಗಳನ್ನು ಕಳಿಸಿ ಅಧ್ಯಯನ ಮಾಡಬೇಕು. ಅಲ್ಲಿಗೆ ಪರಿಹಾರ ಸಾಮಗ್ರಿಗಳ ಸರಬರಾಜಾಗಬೇಕಿದೆ. ಇದಲ್ಲದೆ 'ರಾಜ್ಯದ ವಿದ್ಯುತ್ ಸಮಸ್ಯೆಗೆ ಕೇವಲ ದೇವರೇ ಪರಿಹಾರ ಕೊಡಬೇಕು' ಎಂದು ರಾಜ್ಯದ ವಿದ್ಯುತ್ ಸಚಿವರೇ ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರವು ರಾಜ್ಯದ ನೆರವಿಗೆ ಬರಬೇಕಾಗಿದೆ. ಕೇಂದ್ರದ ಗ್ರಿಡ್‌ನಿಂದ ರಾಜ್ಯಕ್ಕೆ ಕೂಡಲೇ ಹೆಚ್ಚಿನ ವಿದ್ಯುತ್ ನೆರವು ದೊರೆಯಬೇಕು ಎಂದು ನಾನು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸುತ್ತೇನೆ. ನಮ್ಮ ರಾಜ್ಯಕ್ಕೆ ಅಚ್ಛೇ ದಿನ್ ಆಯೇಂಗೆ ಎಂಬ ವಿಶ್ವಾಸ ನನಗಿದೆ.

## 8. ರಾಜ್ಯದ ಕರಾವಳಿ ಪ್ರದೇಶದಲ್ಲಿ ಉಂಟಾಗುತ್ತಿರುವ ಕಡಲ್ಕೊರೆತವನ್ನು ತಡೆಯಲು ಕೇಂದ್ರದ ನೆರವಿಗೆ ಆಗ್ರಹ

ರಾಜ್ಯದ ಕರಾವಳಿ ಜಿಲ್ಲೆಗಳು ಪ್ರತೀ ಮಳೆಗಾಲದಲ್ಲೂ ಕಡಲ್ಕೊರೆತದ ಗಂಭೀರ ಸಮಸ್ಯೆಯನ್ನು ಎದುರಿಸಬೇಕಿದೆ. ನದೀಮುಖಜ ಪ್ರದೇಶಗಳಲ್ಲಿನ ತಟಪ್ರದೇಶದಲ್ಲಿ ಹೀಗೆ ಕಡಲ್ಕೊರೆತ ಆಗುವುದು ಅತ್ಯಂತ ಸಾಮಾನ್ಯ ಬೆಳವಣಿಗೆಯಾಗಿದೆ. ಅಂಕೋಲ, ಭಟ್ಕಳ, ಮಲ್ಪೆ, ಮೂಳೂರು, ಮಂಗಳೂರು, ಹೊನ್ನಾವರ, ಮರವಂತೆ, ಉಲ್ಲಾಳ ಮತ್ತು ಗೋಕರ್ಣದಲ್ಲಿ ಕಡಲ್ಕೊರೆತವನ್ನು ನಾವು ಹೆಚ್ಚಿನ ಪ್ರಮಾಣದಲ್ಲಿ ಗಮನಿಸಬಹುದಾಗಿದೆ. ಒಟ್ಟಾರೆ 60 ಕಿಮೀಗಳಷ್ಟು ಉದ್ದದ ಬೀಚ್ ಈ ಕೊರೆತಕ್ಕೆ ಸಿಲುಕಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರೆತದ ತೀವ್ರತೆ ಹೆಚ್ಚಾಗಿದ್ದು ಒಟ್ಟಾರೆ ಶೇ. 28ರಷ್ಟು ಕರಾವಳಿ ತಟವೇ ಅಪಾಯದಲ್ಲಿದೆ.

ಗ್ಯಾಬಿಯಾನ್ ಮಿಕ್ಸ್ ಮತ್ತು ಕಲ್ಲುಬಂಡೆಗಳ ಪರಿಹಾರವನ್ನು ಈವರೆಗೆ ಬಳಸಲಾಗುತ್ತಿದೆ. ಆದರೆ ಇವು ಪರಿಣಾಮ ಬೀರಿಲ್ಲ. ಕಳೆದ ಹಲವು ವರ್ಷಗಳಿಂದ ಒಟ್ಟಾರೆ 2000 ಮೀಟರ್‌ಗಳಷ್ಟು ಪ್ರದೇಶವನ್ನು ಸಮುದ್ರವು ಆವರಿಸಿದೆ. ಆದ್ದರಿಂದ ಕಡಲ್ಕೊರೆತದ ತಡೆಗೆ ಕೈಗೊಳ್ಳುವ ಕ್ರಮಗಳಿಗಾಗಿ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಸೂಕ್ತ ನೆರವನ್ನು ನೀಡಬೇಕು ಎಂದು ನಾನು ಕೇಂದ್ರ ಜಲಸಂಪನ್ಮೂಲ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.





# ಮಂಗಳೂರು ಪ್ರದೇಶದ ರೈಲು ಸೇವೆಗಳಿಗೆ ಕಾಯಕಲ್ಪ

| ಮಂಗಳೂರು ರೈಲ್ವೆ : ಹೊಸ ಯೋಜನೆಗಳು | | | | |
|---|---|---|---|---|
| ವಾಯುವ್ಯ ರೈಲ್ವೆ : ಶಿವಮೊಗ್ಗ – ಶೃಂಗೇರಿ – ಮಂಗಳೂರು | ಹೊಸ ಮಾರ್ಗ ಸರ್ವೇ | 220 ಕಿಮೀ. | 33 | |
| ವಾಯುವ್ಯ ರೈಲ್ವೆ : ಉಳ್ಳಾಲ – ಮಂಗಳೂರು – ಸುರತ್ಕಲ್ | ಡಬ್ಲಿಂಗ್ ಸರ್ವೇ | | 30 | 11.7 |
| **ಹೊಸ ಮತ್ತು ವಿಸ್ತರಿತ ರೈಲು ಸೇವೆಗಳು** | | | | |
| **ಹೊಸತು** | ಬೆಂಗಳೂರು – ಮಂಗಳೂರು | ಎಕ್ಸ್‌ಪ್ರೆಸ್ | ದಿನವಹಿ | |
| **ಪ್ರಗತಿಯಲ್ಲಿರುವ ಯೋಜನೆಗಳು** | | | | |
| | **ಆರಂಭದ ವರ್ಷ** | **ನಿಗದಿತ ಮೊತ್ತ** | | |
| ಅರಸೀಕೆರೆ – ಹಾಸನ – ಮಂಗಳೂರು ಗೇಜ್ ಪರಿವರ್ತನೆ | 1993–94 | 386.87 (2013–14) | | |
| ಕಂಕನಾಡಿ – ಪಣಂಬೂರು ಪಟ್ಟಿ ಡಬ್ಲಿಂಗ್ | 2006–07 | 149.2 | 42 | 60 |
| ಕಲ್ಲಿಕೋಟೆ – ಮಂಗಳೂರು (221 ಕಿಮೀ) | 1995–96 | 621.51 | 5 | 5 |
| ಮಂಗಳೂರು ಆರ್‌ಓಬಿ (ರೈಲ್ವೆ ಓವರ್‌ಬ್ರಿಜ್) (ಎಲ್‌ಸಿ ಸಂಖ್ಯೆ 293) | | | | 17.50 |
| ಮಂಗಳೂರು ಆರ್‌ಓಬಿ (ರೈಲ್ವೆ ಓವರ್‌ಬ್ರಿಜ್) (ಎಲ್‌ಸಿ ಸಂಖ್ಯೆ 294) | | | | 17.50 |


- **ಮಂಗಳೂರು ಕೇಂದ್ರ ನಿಲ್ದಾಣ: ಕಳೆದ ಮೂರು ವರ್ಷಗಳಲ್ಲಿ ಮಂಗಳೂರು ಕೇಂದ್ರ ನಿಲ್ದಾಣದಲ್ಲಿ ಈ ಕೆಳಗಿನ ಅಭಿವೃದ್ಧಿ ಸಾಧಿಸಲಾಗಿದೆ: ಹೆಚ್ಚುವರಿ ಫುಟ್ ಓವರ್ ಬ್ರಿಜ್ ಕಟ್ಟಲಾಗಿದೆ; ನಿಲ್ದಾಣದ ಕಟ್ಟಡದ ವಾಟರ್ ಪ್ರೂಫಿಂಗ್ ಮಾಡಲಾಗಿದೆ; 2 ಲಿಫ್ಟ್‌ಗಳ ಮತ್ತು 2 ಎಸ್ಕಲೇಟರ್‌ಗಳ ಹಾಗೂ 10 ಮಿನಿ ತಂಗುದಾಣಗಳ ಕೆಲಸ ಪ್ರಗತಿಯಲ್ಲಿದೆ. ಪ್ರಯಾಣಿಕರ ರಿಸರ್ವೇಶನ್ ಕೇಂದ್ರವನ್ನು ಮರುನಿರ್ಮಾಣ ಮಾಡಲು ಮಂಜೂರಾತಿ ದೊರಕಿದೆ. ವಾಹನ ನಿಲ್ದಾಣ ಮತ್ತು ಹೈಮಾಸ್ಟ್ ಟವರ್ ದೀಪಸ್ತಂಭಕ್ಕಾಗಿ, ಆಧುನಿಕ ಮಾರ್ಗಸೂಚಿ ಫಲಕಗಳಿಗೆ ಮಂಜೂರಾತಿ ದೊರಕಿದೆ.**
- **ಮಂಗಳೂರು ರೈಲು ನಿಲ್ದಾಣವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸುವ ಕುರಿತು ಕಿಟ್ಕೋ ಸಂಸ್ಥೆಯು ನೀಡಿದ ವರದಿಯನ್ನು ಪರಿಶೀಲಿಸಲಾಗುತ್ತಿದೆ.**
- **ಕಂಕನಾಡಿ ಬಳಿಯ ರೈಲ್ವೆ ಅಂಡರ್‌ಬ್ರಿಜ್ ಕಾಮಗಾರಿಯ ಗುತ್ತಿಗೆಯನ್ನು 2014ರ ಆಗಸ್ಟ್ 2ರಂದು ನೀಡಲಾಗಿದೆ. ಉಳ್ಳಾಲ ಸ್ಟೇಶನ್ ಯಾರ್ಡ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ರೈಲ್ವೆ ಓವರ್‌ಬ್ರಿಜ್ ಈಗ ಅಂದಾಜು ತಯಾರಿಸುವ ಹಂತದಲ್ಲಿದೆ. ಹಾಗೆಯೇ 886ನೇ ಕಿಮೀನಲ್ಲಿ (ಪಾಲ್ಘಾಟ್ ವಿಭಾಗ) ಕಟ್ಟಬೇಕೆಂದಿರುವ ರೈಲ್ವೆ ಓವರ್‌ಬ್ರಿಜ್ ಕೆಲಸವೂ ಅಂದಾಜು ಹಂತದಲ್ಲಿದೆ.**



**The seven things that make up the rainbow of India's development are India's strong and deep rooted family system, Agriculture-Animal development, India's Matru Shakti (women power), Natural Resources (Jal, Jameen, Jungle), Youth power, Vibrant Democracy and Knowledge.**

**■ Sri Narendra Modi, Prime Minister of India**

# ಪಣಂಬೂರು – ತೋಕ್ಕೂರು – ಮಂಗಳೂರು




- ಈ ನಕಾಶೆಯು ಪ್ರಮಾಣಬದ್ಧವಾಗಿಲ್ಲ; ಕೇವಲ ಸೂಚ್ಯಾರ್ಥವಾಗಿದೆ.

- ಮಂಗಳೂರು ರೈಲ್ವೆ ಜಂಕ್ಷನ್ ಮತ್ತು ಮಂಗಳೂರು ಕೇಂದ್ರ ನಿಲ್ದಾಣಗಳು 'ಎ' ವರ್ಗಕ್ಕೆ ಸೇರಿದ ನಿಲ್ದಾಣಗಳಾಗಿದ್ದು ಅವುಗಳಲ್ಲಿ ಅರ್ಹತೆಗೆ ತಕ್ಕಂತೆ ಎಲ್ಲಾ ಬಗೆಯ ಸಾರ್ವಜನಿಕ ಸೇವೆಗಳನ್ನು ಒದಗಿಸಲಾಗಿದೆ.
- ಮಂಗಳೂರಿನಿಂದ ನಾಗರಕೋಯಿಲ್‌ಗೆ ತೆರಳುವ 690 ಕಿಮೀ ಮಾರ್ಗದ ಡಬ್ಲಿಂಗ್ ಕಾರ್ಯವು ಈಗಾಗಲೇ ಪ್ರಗತಿಯಲ್ಲಿದೆ.
- ಕಂಕನಾಡಿ – ಮಂಗಳೂರು ಪ್ಯಾಚ್ ಡಬ್ಲಿಂಗ್ ಕಾಮಗಾರಿಯ ವಿವರ ಅಂದಾಜನ್ನು ಅನುಮೋದಿಸಲಾಗಿದೆ. ಈ ಕುರಿತ ಕಾಮಗಾರಿಯು ಪ್ರಗತಿಯಲ್ಲಿದೆ. 2014–15ರಲ್ಲಿ ಜೋಕಟ್ಟೆ – ಪಣಂಬೂರು (5.6 ಕಿಮೀ) ಸೆಕ್ಷನ್‌ನಲ್ಲಿ ಕೆಲಸ ನಡೆಯಲಿದೆ. ಒಟ್ಟಾರೆ ಶೇ. 13ರಷ್ಟು ಪ್ರಗತಿಯಾಗಿದೆ.

- ಪ್ರತಿ ಮೂರು ತಿಂಗಳಿಗೆ ಸಭೆ ನಡೆಸಿ, ತಮಗೆ ನೀಡಿದ ರೈಲ್ವೇ ವಿಭಾಗದ ಕುಂದು ಕೊರತೆಗಳ ಮಾಹಿತಿ ಹಾಗೂ ವರದಿಗಳನ್ನು ಸಕಾಲಕ್ಕೆ ಕೇಂದ್ರಕ್ಕೊಪ್ಪಿಸಿದ ಏಕೈಕ ಸಂಸದರು.
- ಇದುವರೆಗೂ ನೆನಗುದಿಗೆ ಬಿದ್ದಿದ್ದ ಪಡೀಲ್ ಕೆಳ ಸೇತುವೆಯ ಕಾಮಗಾರಿಗೆ ಅನುಮೋದನೆ ದೊರೆತು, ರಾಜ್ಯ ಸರಕಾರದ ಮೊತ್ತ ಇಲಾಖೆಗೆ ಸಂದಾಯವಾಗಿದೆ. ಕುಡುಪಾಡಿ ಮೇಲ್ಸೇತುವೆಗೂ ಪ್ರಸ್ತಾಪ ಕಳಿಸಲಾಗಿದೆ. ನೆನಗುದಿಗೆ ಬಿದ್ದಿದ್ದ ಬೈಕಂಪಾಡಿ ರೈಲ್ವೇ ಹಳಿಯ ಮೇಲ್ಭಾಗದ ರಾಷ್ಟ್ರೀಯ ಹೆದ್ದಾರಿಯ ಅಗಲೀಕರಣದ ಸಮಸ್ಯೆಯನ್ನು ಪರಿಹರಿಸಿ, ಕೆಲಸ ಪ್ರಾರಂಭವಾಗಿದೆ.
- 6 ರೈಲ್ವೇಗಳ ಓಡಾಟಕ್ಕೆ ನಡೆಸಿದ ಪ್ರಯತ್ನ ಫಲ ನೀಡಿದೆ. ಮಂಗಳೂರು – ಬೆಂಗಳೂರು ನಡುವೆ ಹಗಲು ರೈಲು ಇವುಗಳಲ್ಲಿ ಒಂದು.
- ಎಡಮಂಗಲದಲ್ಲಿ ರೈಲು ನಿಲುಗಡೆ.





### ಲೋಕಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ

# 2014–15ನೇ ಸಾಲಿನ ಪ್ರಥಮ ಹಂತದಲ್ಲಿ ಪ್ರಸ್ತಾವಿಸಿದ ಕಾಮಗಾರಿಗಳು

| ಮಂಗಳೂರು ವಿಧಾನಸಭಾ ಕ್ಷೇತ್ರ | ಅನುದಾನ (ಲಕ್ಷಗಳಲ್ಲಿ) |
|---|---|
| ಮಂಗಳೂರು ತಾ॥ ಪೆರ್ಮನ್ನೂರು ಗ್ರಾಮದ ಕಲ್ಲಾಪು–ಬುರ್ದುಗೋಳಿ–ಅಜ್ಜನಕಟ್ಟೆ ಬಳಿ ರಸ್ತೆ ಬದಿ ತಡೆಗೋಡೆ ರಚನೆ. | 1.00 |
| ಮಂಗಳೂರು ತಾ॥ ಪೆರ್ಮನ್ನೂರು ಗ್ರಾಮದ ಸಿದ್ಧಿವಿನಾಯಕ 3ನೇ ಅಡ್ಡರಸ್ತೆ ಅಭಿವೃದ್ಧಿ. | 3.50 |
| ಕೋಣಾಜೆ ಗ್ರಾಮದ ಸಪ್ತಸ್ವರ ಕಲಾತಂಡದ ಕಟ್ಟಡದ ಬಳಿ ಸಾರ್ವಜನಿಕ ರಸ್ತೆಯ ಬದಿ ತಡೆಗೋಡೆ ನಿರ್ಮಾಣ. | 5.00 |
| ಮಂಗಳೂರು ತಾ॥ ಮುನ್ನೂರು ಗ್ರಾಮದ ಶ್ರೀರಾಜರಾಜೇಶ್ವರಿ ಸಿದ್ಧಿವಿನಾಯಕ ದೇವಸ್ಥಾನದ ಎದುರುಗಡೆ ಸಂತೋಷನಗರ ರಸ್ತೆ ಕಾಂಕ್ರಿಟೀಕರಣ. | 3.00 |
| ಮಂಗಳೂರು ತಾ॥ ಕೈರಂಗಳ ಗ್ರಾಮದ ಧರ್ಮರಿಕೆ ಶ್ರೀಗೋಪಾಲಕೃಷ್ಣ ಯಕ್ಷಗಾನ ಕಲಾಸಂಘದ ಸಾಂಸ್ಕೃತಿಕ ಸಭಾಭವನ ಕಟ್ಟಡ ಕಾಮಗಾರಿ. | 2.00 |
| ಮಂಗಳೂರು ತಾ॥ ಫಜೀರು ಗ್ರಾಮದ ಪಾದಲ್‌ಪಾಡಿ ಸೇತುವೆಯ ಬದಿ ತಡೆಗೋಡೆ ರಚನೆ. | 2.00 |
| ಮಂಗಳೂರು ತಾ॥ ಮಂಜನಾಡಿ ಗ್ರಾಮದ ಸ್ಮಶಾನ ಅಭಿವೃದ್ಧಿ. | 1.00 |
| ಮಂಗಳೂರು ತಾ॥ ಸೋಮೇಶ್ವರ ಗ್ರಾಮದ ಪ್ರಕಾಶನಗರ ಐತಪ್ಪದಾಸ್ ಎಂಬುವವರ ಮನೆಯಿಂದ ಕೊರಗಜ್ಜ ದೈವಸ್ಥಾನದ ವರೆಗಿನ ರಸ್ತೆ ಅಭಿವೃದ್ಧಿ. | 3.00 |
| **ಪರಿಶಿಷ್ಟ ಜಾತಿ** | |
| ಮಂಗಳೂರು ತಾ॥ ತಲಪಾಡಿ ಗ್ರಾಮದ ಮಾಧವಪುರದ ಪರಿಶಿಷ್ಟ ಜಾತಿ ಕಾಲೊನಿ ರಸ್ತೆ ಅಭಿವೃದ್ಧಿ. | 2.50 |
| **ಪರಿಶಿಷ್ಟ ಪಂಗಡ** | |
| ಮಂಗಳೂರು ತಾ॥ ಮೇರಮಜಲು ಗ್ರಾಮದ ತೇವು ವ್ಯಾಘ್ರೇಶ್ವರಿ ಭಜನಾ ಮಂದಿರ–ಹೂಹಾಕುವಕಲ್ಲು ರಸ್ತೆ ಅಭಿವೃದ್ಧಿ. | 2.50 |
| **ಒಟ್ಟು** | **25.50** |
| **ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ** | |
| ಮಂಗಳೂರು ತಾ॥ ಮುಚ್ಚೂರು ಸರಕಾರಿ ಪ್ರೌಢಶಾಲೆಗೆ ಪೀಠೋಪಕರಣ. | 2.00 |
| ಮಂಗಳೂರು ತಾ॥ ಮಧ್ಯ ಶ್ರೀಖಡ್ಗೇಶ್ವರ–ಖಡ್ಗೇಶ್ವರಿ ದೇವಸ್ಥಾನವನ್ನು ಸಂಪರ್ಕಿಸುವ ಸಾರ್ವಜನಿಕ ರಸ್ತೆ ಕಾಂಕ್ರೆಟೀಕರಣ. | 3.00 |
| ಮಂಗಳೂರು ಮ.ನ.ಪಾಲಿಕೆ ವ್ಯಾಪ್ತಿಯ ಕೃಷ್ಣಾಪುರ 6ನೇ ಬ್ಲಾಕ್ ಜನಾರ್ಧನ ಎಂಬುವವರ ಮನೆಯ ಬಳಿಯಿಂದ ಕಮಲರವರ ಮನೆಯ ಬಳಿಯವರೆಗೆ ರಸ್ತೆ ಬದಿ ತಡೆಗೋಡೆ ರಚನೆ. | 2.00 |
| ಮಂಗಳೂರು ತಾ॥ ಪಡುಪೆರಾರು ಗ್ರಾಮದ ನೀರಲಿಕೆ ಈಶ್ವರಕಟ್ಟೆ ಗಂಗಾಧರ ಸುವರ್ಣರ ಮನೆಯ ಬಳಿಯಿಂದ ಲೋಕಯ್ಯ ಸಾಲಿಯಾನ್‌ರವರ ಮನೆಯವರೆಗಿನ ರಸ್ತೆ ಅಭಿವೃದ್ಧಿ. | 3.00 |
| ಮಂಗಳೂರು ತಾ॥ ತೆಂಕಎಡಪದವು ಗ್ರಾಮದ ಬೋರುಗುಡ್ಡೆಯ ಶೇಖರ ಸಾಲಿಯಾನ್‌ರವರ ಮನೆಯಿಂದ 5ಸೆಂಟ್ಸ್ ಕಾಲೊನಿಯನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿ. | 2.50 |



Each one of us has a natural instinct to rise, like a flame of the lamp. Lets nurture this instinct.Each one of us has both; good and evil virtues. Those who decide to focus on the good ones succeed in life.

■ Sri Narendra Modi, Prime Minister of India

| | |
|---|---|
| ಮಂಗಳೂರು ತಾ॥ ಎಡಪದವು ಗ್ರಾಮದ ಕೊಂದೋಡಿ ಬ್ರಹ್ಮನಗರ ಜನಾರ್ಧನ ಗೌಡರ ಮನೆಯ ಬಳಿ ರಸ್ತೆ ಕಾಂಕ್ರಿಟೀಕರಣ. | 2.50 |
| ಮಂಗಳೂರು ತಾ॥ ಕೆಲಿಂಜಾರು ಗ್ರಾಮದ ಕಂಬಳಕೋಡಿ ವಿಶ್ವನಾಥ ಶೆಟ್ಟಿ ಇವರ ಮನೆಯ ಬಳಿಯಿಂದ ಬೆಳ್ಚಡಪಾಲ್ ಉಳಿಪಾಡಿವರೆಗೆ ರಸ್ತೆ ಅಭಿವೃದ್ಧಿ. | 2.50 |
| ಮಂಗಳೂರು ತಾ॥ ಕೊಂಪದವು ಗ್ರಾಮದ ಬೊಟ್ಲಯ ರಸ್ತೆ ಅಭಿವೃದ್ಧಿ. | 5.00 |
| ತಿರುವೈಲು ವಾರ್ಡಿನ ಅಮೃತ್ ಸಾಗರ್ ಬಿಲ್ಡಿಂಗ್‌ನಿಂದ ನಾಗೇಶ್ ಪೂಜಾರಿಯವರ ಮನೆಯವರೆಗಿನ ರಸ್ತೆ ಅಭಿವೃದ್ಧಿ. | 2.50 |
| ಮಂಗಳೂರು ತಾ॥ ದೇರೆಬೈಲು ಕೊಂಚಾಡಿಯ ಕೊಳಚೆ ನಿರ್ಮೂಲನ ಮಂಡಳಿಯ ಜಾಗದ ಮನೆಗಳಿಗೆ (ಕೊಂಚಾಡಿ ಮಿತ್ರ ಮಂಡಲದ ಎದುರಿನಿಂದ) ಹೋಗುವ ರಸ್ತೆ ಕಾಂಕ್ರಿಟೀಕರಣ. | 5.00 |
| ಕುಪ್ಪೆಪದವು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಳವೂರು ಗ್ರಾಮದ ಗೆಂದಡ್ಪು ನಿಂದ ಗುಂಡ್ಯ ರಸ್ತೆ ಅಭಿವೃದ್ಧಿ. | 3.00 |
| ಕುಪ್ಪೆಪದವು ಗ್ರಾಮ ಪಂಚಾಯತ್ ವ್ಯಾಪ್ತಿಯ ಬೊಳಿಯ ಮುಖ್ಯರಸ್ತೆಯ ನೆಲ್ಯಚ್ಚಿಲ್ ಬಳಿ ತಡೆಗೋಡೆ ರಚನೆ. | 2.00 |
| **ಪರಿಶಿಷ್ಟ ಪಂಗಡ** | |
| ಕೆಲಿಂಜಾರು ಗ್ರಾಮದ ಉಳಿಪಾಡಿ ಕಾಜಿಲ ಅಂಗನವಾಡಿಯಿಂದ ಪರಿಶಿಷ್ಟ ಪಂಗಡದ ಕಾಲೊನಿವರೆಗೆ ರಸ್ತೆ ಅಭಿವೃದ್ಧಿ. | 2.50 |
| **ಒಟ್ಟು** | **37.50** |
| **ಮೂಡಬಿದ್ರಿ ವಿಧಾನಸಭಾ ಕ್ಷೇತ್ರ** | |
| ಮಂಗಳೂರು ತಾ॥ ಐಕಳ ಗ್ರಾಮದ ಮಂಚಿಗುಡ್ಡೆ ರಸ್ತೆ ಕಾಂಕ್ರಿಟೀಕರಣ. | 5.00 |
| ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ತೋಕೂರು ಗ್ರಾಮದ ತಾಳಿಗುರಿ ರಸ್ತೆ ಅಭಿವೃದ್ಧಿ. | 4.00 |
| ಮಂಗಳೂರು ತಾ॥ ಐಕಳ ಗ್ರಾಮ ಪಂಚಾಯತ್ ಪಟ್ಟೆ ರಸ್ತೆ ಅಭಿವೃದ್ಧಿ. | 3.00 |
| ಮಂಗಳೂರು ತಾ॥ ತೆಂಕಮಿಜಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಒಂಟೆಮಾರು ಸೇತುವೆ ಅಭಿವೃದ್ಧಿ. | 5.00 |
| ಮಂಗಳೂರು ತಾ॥ ಪಾಲಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೇಮಾರು ರಸ್ತೆ ಅಭಿವೃದ್ಧಿ. | 3.00 |
| ಮಂಗಳೂರು ತಾ॥ ಬೆಳುವಾಯಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಾಲಾಡಿ ರಸ್ತೆ ಅಭಿವೃದ್ಧಿ. | 2.00 |
| ಮಂಗಳೂರು ತಾ॥ ಜೋಕಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಜೋಕಟ್ಟೆ ಭಜನಾ ಮಂದಿರದ ಬಳಿ ರಸ್ತೆ ಅಭಿವೃದ್ಧಿ. | 2.00 |
| ಮಂಗಳೂರು ತಾ॥ ಮಳವೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾನ ಅಡ್ಡರಸ್ತೆ ಅಭಿವೃದ್ಧಿ. | 2.00 |
| ಮಂಗಳೂರು ತಾ॥ ಕಟೀಲು ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡಗ ಎಕ್ಕಾರು ಕಂಬಳಗುತ್ತು ರಸ್ತೆ ಅಭಿವೃದ್ಧಿ. | 4.00 |
| **ಒಟ್ಟು** | **30.00** |
| **ಬಂಟ್ವಾಳ ವಿಧಾನಸಭಾ ಕ್ಷೇತ್ರ** | |
| ಬಂಟ್ವಾಳ ತಾಲೂಕು ನಾಗರಕೇಶ್ವರಿ ಕ್ಷೇತ್ರದ ಒಣಬಿಂದು ಸಾಲಿತ್ತನೂಜಿ ಕೊಲ್ನಾಡು ಸಾರ್ವಜನಿಕ ರಸ್ತೆ ಅಭಿವೃದ್ಧಿ | 5.00 |
| ಬಂಟ್ವಾಳ ತಾಲೂಕು ಪಿಲಾತಬೆಟ್ಟು ಗ್ರಾಮದ ಬಂಗ್ಲೆ ಎಂಬಲ್ಲಿ ಸಾರ್ವಜನಿಕ ಮೈದಾನದಲ್ಲಿ ಸಾರ್ವಜನಿಕ ಬಯಲು ರಂಗಮಂದಿರದ ಮುಂದುವರೆದ ಕಾಮಗಾರಿ. | 2.00 |
| ಬಂಟ್ವಾಳ ತಾ॥ ಉಳಿ ಗ್ರಾಮದ ಪಡೀಲ್‌ಬೆಟ್ಟು ಪಿಲಿಬೈಲ್ ರಸ್ತೆ ಅಭಿವೃದ್ಧಿ. | 5.00 |
| ಬಂಟ್ವಾಳ ತಾ॥ ಇರ್ವತ್ತೂರು ಗ್ರಾಮದ ಇರ್ವತ್ತೂರು ಪದವಿನಿಂದ ಮೇಲು ಪೆತ್ತರ ರಸ್ತೆ ಅಭಿವೃದ್ಧಿ. | 4.00 |
| ಬಂಟ್ವಾಳ ತಾ॥ ಕರ್ಪೆ ಗ್ರಾಮದ ಕೆಳಗಿನ ಸಿದ್ಧಕಟ್ಟೆಯಿಂದ ಕರ್ಪೆ ಸಮಾಜ ಮಂದಿರದವರೆಗಿನ ರಸ್ತೆ ಅಭಿವೃದ್ಧಿ. | 5.00 |
| ಬಂಟ್ವಾಳ ತಾ॥ ಕನ್ಯಾನ ಗ್ರಾಮದ ದ.ಕ.ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯ ಬಳಿ ರಸ್ತೆ ಬದಿ ತಡೆಗೋಡೆ ನಿರ್ಮಾಣ. | 2.00 |
| ಬಂಟ್ವಾಳ ತಾ॥ ಕಾವಳ ಮೂಡೂರು ಗ್ರಾಮದ ನೆಲ್ಲಿಗುಡ್ಡೆ ಮುಚ್ಚಿಲೋಡಿ ರಸ್ತೆ ಅಭಿವೃದ್ಧಿ. | 4.00 |

| | |
|---|---|
| ಬಂಟ್ವಾಳ ತಾ॥ ಅಜ್ಜಿಬೆಟ್ಟು ಗ್ರಾಮದ ವಾಮದಪದವು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಮೀಪ ಸಾರ್ವಜನಿಕ ರಸ್ತೆ ಬದಿ ತಡೆಗೋಡೆ ನಿರ್ಮಾಣ. | 2.00 |
| ಬಂಟ್ವಾಳ ತಾ॥ ಪಿಲಿಮೊಗರು ಗ್ರಾಮದ ಜತ್ತನೆಕೆರೆಯಿಂದ ದಪ್ಪರಬೈಲು ರಸ್ತೆ ಅಭಿವೃದ್ಧಿ. | 3.00 |
| ಬಂಟ್ವಾಳ ತಾ॥ ಸಜಿಪಮುನ್ನೂರು ಗ್ರಾಮದ ನಂದಾವರ ದಾಸರಗುಡ್ಡೆ ಸಾರ್ವಜನಿಕ ರಸ್ತೆಯಲ್ಲಿ ಅಯ್ಯಪ್ಪ ಭಜನಾ ಮಂದಿರದ ಬಳಿ ತಡೆಗೋಡೆ ನಿರ್ಮಾಣ. | 5.00 |
| ಬಂಟ್ವಾಳ ತಾ॥ ಬಡಗಕಜೆಕಾರು ಪಾಂಡವರಕಲ್ಲು-ಕೆದಿಮೇಲು ರಸ್ತೆ ಅಭಿವೃದ್ಧಿ. | 5.00 |
| **ಒಟ್ಟು** | **42.00** |
| **ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ** | |
| ಬೆಳ್ತಂಗಡಿ ತಾ॥ ಕಲ್ಮಂಜ ಗ್ರಾಮ ಪಂಚಾಯತ್ ವ್ಯಾಪ್ತಿಯ ಆತ್ಮಾನಂದ ಸರಸ್ವತಿ ವಿದ್ಯಾಲಯ, ದೇವರಗುಡ್ಡೆ ಧರ್ಮಸ್ಥಳ ಇದರ ವಿದ್ಯಾರ್ಥಿನಿಲಯ ನಿರ್ಮಾಣ. | 5.00 |
| ಮರೋಡಿ ಗ್ರಾಮದ ಅಂಗ ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಬಳಿ ಸಾರ್ವಜನಿಕ ರಸ್ತೆ ಬದಿ ತಡೆಗೋಡೆ ರಚನೆ. | 5.00 |
| ಬೆಳ್ತಂಗಡಿ ತಾ॥ ಇಂದಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ನಾವುರದಿಂದ ವಡಿಕ್ಕರ ರಸ್ತೆ ಅಭಿವೃದ್ಧಿ. | 5.00 |
| ಬೆಳ್ತಂಗಡಿ ತಾ॥ ನಿಡ್ಲೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುದ್ರಾಯ ಎಂಬಲ್ಲಿ ರಸ್ತೆಯ ತಿರುವು ಅಗಲೀಕರಣ. | 2.00 |
| ಬೆಳ್ತಂಗಡಿ ತಾ॥ ಬಳೆಂಜ ಗ್ರಾಮದ ಕೊಂಗುಲ ಬದಿನಡೆ ಎಂಬಲ್ಲಿ ಮೋರಿ ರಚನೆ. | 4.00 |
| ಬೆಳ್ತಂಗಡಿ ತಾ॥ ವೇಣೂರು ಜೂನಿಯರ್ ಕಾಲೇಜು ಕೊಠಡಿ ರಚನೆ. | 4.00 |
| **ಪರಿಶಿಷ್ಟ ಜಾತಿ** | |
| ಬೆಳ್ತಂಗಡಿ ತಾ॥ ಬೆಳಾಲು ಗ್ರಾಮದ ಪಿಜಕ್ಕಳದಿಂದ ಎಳ್ಳುಗದ್ದೆ ರಸ್ತೆ ಅಭಿವೃದ್ಧಿ. | 5.00 |
| ಬೆಳ್ತಂಗಡಿ ತಾ॥ ಬಡೆಕೋಡಿ ಗ್ರಾಮದ ಹೆಡಿಮೆ ದಲಿತ ಕಾಲೊನಿಯಿಂದ ರಾಹುಕಲ್ ಕಾಶಿಪಟ್ನ ಕಾಸ್ ರಸ್ತೆ ಅಭಿವೃದ್ಧಿ. | 4.00 |
| **ಒಟ್ಟು** | **34.00** |
| **ಪುತ್ತೂರು ವಿಧಾನಸಭಾ ಕ್ಷೇತ್ರ** | |
| ಪುತ್ತೂರು ತಾ॥ ಮುಂಡೂರು ಗ್ರಾಮದ ನಾಡಾಜೆ ರಸ್ತೆ ಅಭಿವೃದ್ಧಿ. | 5.00 |
| ಪುತ್ತೂರು ತಾ॥ ಕೋಡಿಂಬಾಡಿ ಗ್ರಾಮದ ಮಠದಬೆಟ್ಟು ಶ್ರೀರಾಜರಾಜೇಶ್ವರಿ ದೇವಸ್ಥಾನದ ಬಳಿ ಸಾರ್ವಜನಿಕ ರಸ್ತೆ ಬದಿ ತಡೆಗೋಡೆ ನಿರ್ಮಾಣ. | 3.00 |
| ಬಂಟ್ವಾಳ ತಾ॥ ಕಡೆಶಿವಾಲಯ ಗ್ರಾಮದ ಅಮ್ಮೆ-ಪೆರ್ಲಾಪುರ ರಸ್ತೆ ಅಭಿವೃದ್ಧಿ. | 4.00 |
| ಪುತ್ತೂರು ತಾ॥ ಪಾಣಾಜೆ ಗ್ರಾಮದ ರಣಮಂಗಲ ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನದ ಬಳಿ ಸಾರ್ವಜನಿಕ ರಸ್ತೆ ಬದಿ ತಡೆಗೋಡೆ ರಚನೆ. | 3.00 |
| ಪುತ್ತೂರು ತಾ॥ ನರಿಮೊಗ್ರು ಗ್ರಾಮದ ಸೇರಾಜೆ ರಸ್ತೆ ಅಭಿವೃದ್ಧಿ. | 2.00 |
| ಪುತ್ತೂರು ತಾ॥ ಬೆಟ್ಟಂಪಾಡಿ ಗ್ರಾಮದ ಕೊರಿಂಗಿಲ-ಕಕ್ಕೂರು-ಆನಡ್ಕ-ನುಳಿಯಾಲು ರಸ್ತೆ ಅಭಿವೃದ್ಧಿ. | 4.00 |
| ಪುತ್ತೂರು ತಾ॥ ಕೆದಂಬಾಡಿ ಗ್ರಾಮದ ತಿಂಗಳಾಡಿ-ದೇವಗಿರಿ ರಸ್ತೆ ಅಭಿವೃದ್ಧಿ. | 4.00 |
| ಪುತ್ತೂರು ತಾ॥ ಬಲ್ನಾಡು ಗ್ರಾಮದ ಮುಗೆರೋಡಿ ಎಂಬಲ್ಲಿ ಕಾಲು ಸಂಕ ದುರಸ್ಥಿ. | 3.00 |
| ಪುತ್ತೂರು ತಾ॥ ನಿಡ್ಪಳ್ಳಿ ಗ್ರಾಮದ ರೆಂಜ-ಆನಾಜೆ ರಸ್ತೆ ಅಭಿವೃದ್ಧಿ. | 3.00 |
| ಪುತ್ತೂರು ತಾ॥ ಕೆದಂಬಾಡಿ ಗ್ರಾಮದ ದ.ಕ.ಜಿ.ಪ.ಹಿ.ಪ್ರಾ ಶಾಲೆ ಸನ್ಯಾಸಿಗುಡ್ಡೆ ಇದರ ರಂಗಮಂದಿರ ರಚನೆ. | 1.00 |
| ಬಂಟ್ವಾಳ ತಾ॥ ವಿಟ್ಲ ಮುಡ್ನೂರು ಗ್ರಾಮದ ಬೆರಿಕೆ-ಪೆರುವಾಜೆ ರಸ್ತೆ ಅಭಿವೃದ್ಧಿ. | 4.00 |



It is a shame that our women have to wait for darkness to go out in the open to defecate. Can't we build toilets for the security of our women?

■ Sri Narendra Modi, Prime Minister of India

| | |
|---|---|
| ಪುತ್ತೂರು ತಾ॥ ಮುಂಡೂರು ಗ್ರಾಮದ ಅಂಬಟ ರಸ್ತೆ ಅಭಿವೃದ್ಧಿ. | 1.00 |
| ಪುತ್ತೂರು ತಾ॥ ಬಿಳಿಯೂರು ಕಟ್ಟೆ ಸರಕಾರಿ ಪದವಿ ಪೂರ್ವ ಕಾಲೇಜು, ಸಮುದಾಯ ಭವನ ನಿರ್ಮಾಣ. | 5.00 |
| **ಒಟ್ಟು** | **42.00** |
| **ಸುಳ್ಯ ವಿಧಾನಸಭಾ ಕ್ಷೇತ್ರ** | |
| ಸುಳ್ಯ ತಾ॥ ಗುತ್ತಿಗಾರು ಗ್ರಾಮದ ಹರಿಪುರ ಸ.ಕಿ.ಪ್ರಾ.ಶಾಲೆ ಇದರ ತರಗತಿ ಕೊಠಡಿ ನಿರ್ಮಾಣ. | 2.00 |
| ಸುಳ್ಯ ತಾ॥ ಮಹಿಳಾ ಸಮಾಜ ಸುಳ್ಯ(ರಿ) ಇದರ ನೂತನ ಕಟ್ಟಡ ಕಾಮಗಾರಿ. | 2.00 |
| ಸುಳ್ಯ ತಾ॥ ಸುಳ್ಯ ಸರಕಾರಿ ಪದವಿಪೂರ್ವ ಕಾಲೇಜಿನ ಶೌಚಾಲಯ ಕಾಮಗಾರಿ. | 2.00 |
| ಪುತ್ತೂರು ತಾ॥ ಬೆಳಂದೂರು ಗ್ರಾಮದ ಸವಣೂರು–ಪೆರಣೆ–ಅಮೈ ರಸ್ತೆ ಕಾಂಕ್ರೀಟೀಕರಣ. | 3.00 |
| ಪುತ್ತೂರು ತಾ॥ ಆಲಂಕಾರು ಗ್ರಾಮದ ಸಾಗು–ಪಲ್ಲತಡ್ಕ ಉಳ್ಳಾಕುಲು ದೈವಸ್ಥಾನ ರಸ್ತೆ ಕಾಂಕ್ರೀಟೀಕರಣ. | 2.00 |
| ಪುತ್ತೂರು ತಾ॥ ನೆಲ್ಯಾಡಿ ಗ್ರಾಮದ ಪಡುಬೆಟ್ಟು ಶಾಲಾ ಕ್ರೀಡಾಂಗಣ ವಿಸ್ತರಣೆ. | 2.00 |
| ಪುತ್ತೂರು ತಾ॥ 102 ನೆಕ್ಕಿಲಾಡಿ ಗ್ರಾಮದ ಕೆರ್ಮಾಯಿ–ಕೊರಿಯಾರು ರಸ್ತೆ ಅಭಿವೃದ್ಧಿ. | 2.00 |
| ಸುಳ್ಯ ತಾ॥ ಗುತ್ತಿಗಾರು ಗ್ರಾಮದ ಕಮಿಲ–ಎರಣಗುಡ್ಡೆ ರಸ್ತೆ ಅಭಿವೃದ್ಧಿ. | 1.00 |
| ಸುಳ್ಯ ತಾ॥ ಕಲ್ಮಕಾರು ಗ್ರಾಮದ ಬಾಳೆಬೈಲು ರಸ್ತೆ ಅಭಿವೃದ್ಧಿ. | 1.00 |
| ಸುಳ್ಯ ತಾ॥ ಐವತ್ತೋಕ್ಲು ಗ್ರಾಮದ ಚಿಂಗಾಣಗುಡ್ಡೆ–ಅಲ್ಪೆ ರಸ್ತೆ ಕಾಂಕ್ರೀಟೀಕರಣ. | 2.00 |
| ಸುಳ್ಯ ತಾ॥ ಐನೇಕಿದು ಗ್ರಾಮದ ಕುಜುಂಬಾರುನಲ್ಲಿ ಸೇತುವೆ ರಚನೆ. | 3.00 |
| ಸುಳ್ಯ ತಾ॥ ಮುರುಳ್ಯ ಗ್ರಾಮದ ಅಕ್ಕಾಜೆ–ಹೊಳೆಗುರಿ–ಕೊಟ್ರೆ ರಸ್ತೆಯಲ್ಲಿ ಮೋರಿ/ ಸಂಕ ರಚನೆ. | 2.00 |
| ತೊಡಿಕಾನ ಗ್ರಾಮದ ತೊಡಿಕಾನ–ಕುದ್ರೆಪಾಯ ರಸ್ತೆಯಲ್ಲಿ ತೊಡಿಕಾನ ಎಂಬಲ್ಲಿ ರಸ್ತೆ ಬದಿ ತಡೆಗೋಡೆ ರಚನೆ. | 2.00 |
| ಸುಳ್ಯ ತಾ॥ ಚೊಕ್ಕಾಡಿ – ಅಯ್ಯನಕಟ್ಟೆ ರಸ್ತೆಯ ಅಗಲ್ಪಾಡಿ ಎಂಬಲ್ಲಿ ತಡೆಗೋಡೆ ರಚನೆ. | 1.00 |
| **ಪರಿಶಿಷ್ಟ ಜಾತಿ** | |
| ಸುಳ್ಯ ತಾ॥ ಅಜ್ಜಾವರ ಗ್ರಾಮದ ಅಡ್ಪಂಗಾಯ ಪ.ಜಾ ಕಾಲೊನಿಯನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿ. | 2.00 |
| ಸುಳ್ಯ ತಾ॥ ಅಮರಮೂಡ್ನೂರು ಗ್ರಾಮದ ಸಂಕೇಶ–ಪೈಲೂರು ಪ.ಜಾ ಕಾಲೊನಿ ರಸ್ತೆ ಅಭಿವೃದ್ಧಿ. | 2.00 |
| **ಪರಿಶಿಷ್ಟ ಪಂಗಡ** | |
| ಸುಳ್ಯ ತಾ॥ ಆಲೆಟ್ಟಿ ಗ್ರಾಮದ ಕುಕ್ಕೂರು–ಬಲ್ಯಾಡಿ ಪರಿಶಿಷ್ಟ ಪಂಗಡ ರಸ್ತೆ ಅಭಿವೃದ್ಧಿ. | 1.00 |
| **ಒಟ್ಟು** | **32.00** |
| **ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ** | |
| ಮಂಗಳೂರು ನಗರದ ಸೆಂಟ್ರಲ್ ವಾರ್ಡಿನ ವಿ.ಟಿ.ರಸ್ತೆಯಲ್ಲಿ ವಿಠೋಭ ರುಕುಮಾಯಿ ದೇವಸ್ಥಾನದ ಬಳಿ ಅರವಿಂದ ಆಚಾರ್ಯರ ಮನೆಯ ಬಳಿಯಿಂದ ಸುಬ್ರಹ್ಮಣ್ಯ ಭಟ್ ಎಂಬುವವರ ಮನೆಯವರೆಗಿನ ರಸ್ತೆಗೆ ಇಂಟರ್‌ಲಾಕ್ ಅಳವಡಿಕೆ. | 5.00 |
| ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 17ನೇ ವಾರ್ಡಿನ ಉರ್ವಾಸ್ಟೋರ್ ಶ್ರೀ ಕೃಷ್ಣಾನಂದ ಭಟ್ ಎಂಬುವವರ ಮನೆ ಬಳಿ ರಸ್ತೆ ಅಭಿವೃದ್ಧಿ. (ಮುಂದುವರೆದ ಕಾಮಗಾರಿ) | 2.00 |
| **ಒಟ್ಟು** | **7.00** |
| **ಇಡೀ ಕ್ಷೇತ್ರದ ಒಟ್ಟು ಮೊತ್ತ** | **250.00** |





2009-2014

# ಕೇಂದ್ರದ ಅನುದಾನಗಳ ಪಕ್ಷಿನೋಟ

## ತುಳು ಭಾಷೆಗೆ ಮಾನ್ಯತೆ

- ತುಳು ಭಾಷೆಯ ಅಭಿವೃದ್ಧಿ, ಮಾನ್ಯತೆ ಹಾಗೂ ತುಳುಭಾಷೆಯ ಸ್ಥಾನಮಾನಕ್ಕಾಗಿ 8ನೇ ಪರಿಚ್ಛೇದದಲ್ಲಿ ಸೇರಿಸಲು ಆಗ್ರಹಿಸಿದ್ದಾರೆ. ವಿಷಯವನ್ನು ಮಂಡಿಸಿದ್ದಾರೆ.

## ಬಿ.ಎಸ್.ಎನ್.ಎಲ್. ಟವರ್ಸ್

- ಬಿ.ಎಸ್.ಎನ್.ಎಲ್. ಅಧಿಕಾರಿಗಳ ಜೊತೆ ನಿರಂತರ ಸಭೆ ಹಾಗೂ ಸಂಪರ್ಕದಿಂದಾಗಿ 26 ಕ್ಕೂ ಹೆಚ್ಚು ಟವರ್‌ಗಳು ನಿರ್ಮಾಣಗೊಂಡಿದೆ.

| 2G BTS COMMISSIONED | | | |
|---|---|---|---|
| **Sl.No** | **Site name** | **Taluk** | **Date of Commission** |
| 1 | OMPL | Mangalore | 16-May-14 |
| 2 | Nellikai_Road | Mangalore | 10-Jun-14 |
| 3 | Gandhinagar_MR | Mangalore | 12-Jun-14 |
| 4 | Bilinele | Puttur | 02-Jul-14 |
| 5 | Kodiambala | Puttur | 02-Jul-14 |
| 6 | Kadya Konaje | Puttur | 04-Jul-14 |
| 7 | Patrame | Belthangady | 07-Jul-14 |
| 8 | IOC Panambur | Mangalore | 11-Aug-14 |
| 9 | Nainadu | Bantwal | 18-Aug-14 |
| 10 | Hirebandady | Puttur | 18-Aug-14 |
| 11 | Thannirpantha | Belthangady | 30-Aug-14 |
| 12 | Balila | Sullia | 02-Sep-14 |
| 13 | Kalmakar | Sullia | 04-Sep-14 |
| 14 | Nadugallu | Sullia | 15-Sep-14 |
| 15 | Nada | Belthangady | 16-Sep-14 |
| 16 | Kumbra(Olamogru) | Puttur | 18-Sep-14 |
| 17 | Shirlal | Belthangady | 20-Sep-14 |
| 18 | Darkhas Bellare | Sullia | 23-Sep-14 |
| 19 | SIT_Valachil | Mangalore | 27-Sep-14 |
| 20 | Savanal Road | Belthangady | 10-Oct-14 |
| 3G BTS COMMISSIONED | | | |
| 1 | NITK Boys Hostel | Mangalore | 28-Jul-14 |



We need to divide the agriculture sector into three parts- regular farming, farming of trees and animal husbandry. If we are able to do this, the contribution of our women will increase even more.

■ Sri Narendra Modi, Prime Minister of India

| | | | |
|---|---|---|---|
| 2 | NITK Girls Hostel | Mangalore | 28-Jul-14 |
| 3 | NITK Admin | Mangalore | 8-Aug-14 |
| 4 | IOC Panambur | Mangalore | 8-Aug-14 |
| **PENDING SITES** | | | |
| 1 | Sullia Padav | Puttur | Power supply yet to receive |
| 2 | Alletti | Sullai | Power supply yet to receive |

## ಹೋರಾಟ ರಂಗದಲ್ಲಿ

- ಮೂಡಬಿದ್ರೆ ಸಮೀಪದ ಕಡಂದಲೆಯಲ್ಲಿ ಮನುಕುಲಕ್ಕೆ ಮಾರಕವಾದ ಎಂಜಲ್‌ಹಾರ್ಡ್ ಕಂಪೆನಿಯ ವಿರುದ್ಧ ಜನರನ್ನು ಸಂಘಟಿಸಿ ತೀವ್ರ ಹೋರಾಟ ನಡೆಸಿ ಕಂಪನಿಯನ್ನು ಹಿಂದಕ್ಕೆ ಕಳುಹಿಸಿದ್ದಾರೆ.
- ಎಸ್.ಇ. ಝಡ್‌ನ ಎರಡನೇ ಹಂತದ ಭೂಸ್ವಾಧೀನದಲ್ಲಿ ಹೋರಾಟ ನಡೆಸಿ ನ್ಯಾಯ ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.
- ಉದ್ಯೋಗ ವಂಚಿತರಿಗೆ ಉದ್ಯೋಗವನ್ನು ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.
- 4000 ಮೆ.ವ್ಯಾಟ್ ವಿದ್ಯುತ್ ಉತ್ಪಾದಿಸಲಿರುವ ಪ್ರಸ್ತಾವಿತ ನಿಡ್ಡೋಡಿ ಉಷ್ಣ ವಿದ್ಯುತ್ ಸ್ಥಾವರದ ವಿರುದ್ಧ ಸಂಘಟಿತವಾದ "ಮಾತೃಭೂಮಿ ಉಳಿಸಿ ಹೋರಾಟ ಸಮಿತಿ"ಯ ಆಶ್ರಯದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಊರವರಿಗೆ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ.
- 'ಮಾತೃಭೂಮಿ ಉಳಿಸಿ ಹೋರಾಟ ಸಮಿತಿ'ಯ ಪ್ರಮುಖರನ್ನು ದಿಲ್ಲಿಗೆ ಕರೆದೊಯ್ದು ಕೈಗಾರಿಕಾ ಸಚಿವರಾದ ಮಾನ್ಯ ಜ್ಯೋತಿರಾದಿತ್ಯ ಸಿಂಧ್ಯಾ ಮತ್ತು ಇತರ ಸಚಿವರನ್ನು ಭೇಟಿ ಮಾಡಿ, ಉಷ್ಣ ಸ್ಥಾವರದಿಂದಾಗುವ ಅಪಾಯವನ್ನು ವಿವರಿಸಿ, ಸ್ಥಾವರ ಕೈಬಿಡುವಂತೆ ಮನವಿಯನ್ನು ನೀಡಿದ್ದಾರೆ.
- ಅಡಿಕೆಗೆ ನಿಷೇಧ ಹೇರುವ ಪ್ರಸ್ತಾಪವನ್ನು ಪ್ರತಿಭಟಿಸಿ ಅಡಿಕೆ ಬೆಳೆಗಾರರಲ್ಲಿರುವ ಗೊಂದಲ ನಿವಾರಣೆ ಹಾಗೂ ಜಾಗೃತಿಗಾಗಿ ಊರೂರು ಸಂಪರ್ಕಿಸಿ ಪ್ರತಿಭಟನಾ ರ್‍ಯಾಲಿಯನ್ನು ನಡೆಸಿ ಮನವಿ ಸಲ್ಲಿಸಿದ್ದಾರೆ.
- ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಗೊಂದಲವಾದಾಗ ಸ್ವತಃ ಮುಂದೆ ನಿಂತು ಹೋರಾಟ ನಡೆಸಿದ್ದಾರೆ.
- ನೇತ್ರಾವತಿ ತಿರುವು ಯೋಜನೆಗೆ ವಿರೋಧ – ಪ್ರತಿಭಟನೆ

## ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಹಾಗೂ ರಸ್ತೆಗಳ ನಿರ್ಮಾಣ

- ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಬಿ.ಸಿ.ರೋಡ್ ನಿಂದ ಅಡ್ಡಹೊಳೆವರೆಗಿನ ರಸ್ತೆಯನ್ನು ಚತುಷ್ಪಥಗೊಳಿಸುವ ಬಗ್ಗೆ ಕೇಂದ್ರ ಸರಕಾರ ಪ್ರಸ್ತಾವನೆ ಸಲ್ಲಿಸಿದೆ ಹಾಗೂ ಪ್ರಗತಿಯ ಹಂತದಲ್ಲಿದೆ.
- ಮಂಗಳೂರು–ಮೂಡಬಿದ್ರಿ–ಕಾರ್ಕಳ ರಸ್ತೆಯ ಅಭಿವೃದ್ಧಿಗೆ ಒಟ್ಟು ರೂ.280.00 ಕೋಟಿಯ ಪ್ರಸ್ತಾವನೆ ಸಲ್ಲಿಸಿದೆ.
- ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಗುಂಡ್ಯದಿಂದ ಮಾರ್ನಹಳ್ಳಿಯವರೆಗಿನ 26 ಕಿ.ಮೀ ರಸ್ತೆ ಕಾಂಕ್ರೀಟೀಕರಣ, ಹಾಗೂ ಮಾರ್ನಹಳ್ಳಿಯಿಂದ ಸಕಲೇಶಪುರ ವರೆಗೆ ರಸ್ತೆ ಡಾಮರೀಕರಣಕ್ಕೆ ಒಟ್ಟು ರೂ.150.00 ಕೋಟಿ ಅನುದಾನಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದ್ದು ಕಾಮಗಾರಿ ಕೈಗೊಳ್ಳುವ ಬಗ್ಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.

### ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಳ್ಳಲು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ ಕಾಮಗಾರಿಗಳು

1. **ಪುತ್ತೂರು ತಾ॥ ಕೊಂಬಾರು ಗ್ರಾಮದ ಮಣಿಭಾಂಡ–ಪೆರುದೋಡಿ ಅಟ್ಟೂರು ರಸ್ತೆಯಲ್ಲಿ ಮೆಲೆಮಕ್ಕಿ ಎಂಬಲ್ಲಿ ಕಿರು ಸೇತುವೆ ರಚನೆ.**
2. **ಪುತ್ತೂರು ತಾ॥ ಐತ್ತೂರು–ಕೋಣಾಜೆ ರಸ್ತೆಯು ಮಾದಾರ್ಳದಿಂದ ಐತ್ತೂರು ಮಾರ್ಗವಾಗಿ ಕೋಣಾಜೆಯನ್ನು ಸಂಪರ್ಕಿಸುವ ರಸ್ತೆ.**





3. ಬಂಟ್ವಾಳ ತಾ॥ ವಿಟ್ಲಾ ಕಸಬಾ ಗ್ರಾಮದ ಮಂಗಲಪದವಿನಿಂದ ಮಾಮೇಶ್ವರ ಕಟ್ಟೆ ಮೂಲಕ ಕರಿಂಕ–ನೇರಳಕಟ್ಟೆಯನ್ನು ಸಂಪರ್ಕಿಸುವ ರಸ್ತೆ.
4. ಬೆಳ್ತಂಗಡಿ ತಾ॥ ಅಗಂಬಡಿಯಿಂ ನೆರಿಯಕಾಡು ರಸ್ತೆ.
5. ಬೆಳ್ತಂಗಡಿ ತಾ॥ ಶಿಶಿಲ – ಬೈರಾಪುರ ರಸ್ತೆ.
6. ಬೆಳ್ತಂಗಡಿ ತಾ॥ ಶಿಶಿಲ ಗ್ರಾಮದ ಪೇರಿಕೆ–ರಥಬೀದಿ ರಸ್ತೆ.
7. ಬೆಳ್ತಂಗಡಿ ತಾ॥ ಶಿಶಿಲ – ಗುತ್ತು – ಪೆರ್ಲ ರಸ್ತೆ.
8. ಬಂಟ್ವಾಳ ತಾ॥ ಗೋಳ್ತಮಜಲು ಗ್ರಾಮದ ಕಲ್ಲಡ್ಕ–ವಿಟ್ಲಾ ರಸ್ತೆಯಲ್ಲಿ ಮಂಗಳಪದವಿನಿಂದ ಕೋಡಪದವು ಸಂಪರ್ಕಿಸುವ ರಸ್ತೆ.
9. ಬೆಳ್ತಂಗಡಿ ತಾ॥ ನೆರಿಯಾದ ಪುಲ್ಲಾಜೆ ಎಂಬಲ್ಲಿ ರಸ್ತೆ.
10. ಬೆಳ್ತಂಗಡಿ ತಾ॥ ನೆರಿಯಾ ಗ್ರಾಮದ ಪಂ. ವ್ಯಾಪ್ತಿಯ ಅಗಂಬಡಿಯಿಂದ ನೆರಿಯಕಾಡು ವರೆಗಿನ ರಸ್ತೆ.
11. ಬಂಟ್ವಾಳ ತಾ॥ ಕೆದಿಲ ಗ್ರಾಮದ ಗಾಂಧೀನಗರ ಪಾಟ್ರುಕ್ಕೋಡಿ ರಸ್ತೆ ಅಭಿವೃದ್ಧಿ.
12. ಬಂಟ್ವಾಳ ತಾ॥ ಕಕ್ಕೆಪದವು–ಪಾಂಡವರಕಲ್ಲು ರಸ್ತೆ ಅಭಿವೃದ್ಧಿ.
13. ಬೆಳ್ತಂಗಡಿ ತಾ॥ ಅಜಿಲಮೊಗ್ರು ಗ್ರಾಮದ ಕುಟೇಲು ಸೇತುವೆ ರಚನೆ.
14. ಮಂಗಳೂರು ತಾ॥ ಬಡಗಮಿಜಾರು ಗ್ರಾಮದ ಅಶ್ವಥಪುರ–ಕೊಡೇಬೆಟ್ಟು–ಪಿದಮಲೆ–ಮಂಜಿನ ಬೈಲು–ಬಂಗೇರಪದವು ರಸ್ತೆ
15. ಬೆಳ್ತಂಗಡಿ ತಾ॥ ಕೊಕ್ಕಡ ಗ್ರಾಮದ ಕೊಕ್ಕಡ–ಪಟ್ರೆಮೆ–ಅನಾರು–ಧರ್ಮಸ್ಥಳ ರಸ್ತೆ.
16. ಬೆಳ್ತಂಗಡಿ ತಾ॥ ಕೊಕ್ಕಡ ಗ್ರಾಮದ ಅಡ್ಡೈ ಎಂಬಲ್ಲಿರುವ ಮುಂಡೂರು ಪಳಿಕೆ–ಮೈಪಾಳ ಮೂಲಕ ಬಂದಾರು ಗ್ರಾಮದ ಬೈಪಾಡಿಯನ್ನು ಸರ್ಂಕಿಸುವ ರಸ್ತೆ ಹಾಗೂ ಬೈಪಾಡಿಯಲ್ಲಿ ನೇತ್ರಾವತಿ ನದಿಗೆ ಸೇತುವೆ ನಿರ್ಮಾಣ.
17. ಬೆಳ್ತಂಗಡಿ ತಾ॥ ಕೊಕ್ಕಡ ಗ್ರಾಮದ ಕೊಕ್ಕಡ–ಪಟ್ರೆಮೆ–ಅನಾರು–ಧರ್ಮಸ್ಥಳ ರಸ್ತೆ.
18. ಮಂಗಳೂರು ತಾ॥ ಇರುವೈಲು–ಕೇಮಾರು–ಬಾಂದೋಟು – ಕಾಂತಾವರ ರಸ್ತೆ.
19. ಮಂಗಳೂರು ತಾ॥ ತೋಡಾರ – ಬಾರ್ದಿಲ – ಕಂದೇಟು ರಸ್ತೆ.
20. ಮಂಗಳೂರು ತಾ॥ ಕೋಣಾಜೆ ಗ್ರಾಮದ ಕಕ್ಕೆಮಜಲು–ಅಂಡಾಲಬೀಡುನಿಂದ ಬೆಳ್ಮ ಗ್ರಾಮದ ದೇರಳಕಟ್ಟೆಯನ್ನು ಸಂಪರ್ಕಿಸುವ ರಸ್ತೆ.
21. ಮಂಗಳೂರು ತಾ॥ ಕೋಣಾಜೆ ಗ್ರಾಮದ ಅಣ್ಣೆರಪಾಲು ಹಿಂದೂರುದ್ರ ಭೂಮಿಯ ಬಳಿಯಿಂದ ಎಲ್ಯಾರಪದವು ವರೆಗಿನ ರಸ್ತೆ.
22. ಬೆಳ್ತಂಗಡಿ ತಾ॥ ಬಂದಾರು ಗ್ರಾಮದ ಪೆರ್ಲ–ಬೈಪಾಡಿ ಮೂಲಕ ಮೈಪಾಲ ಪಟ್ರೆಮೆ ಮೂಲಕ ಕೊಕ್ಕಡವನ್ನು ಸಂಪರ್ಕಿಸುವ ರಸ್ತೆ.
23. ಮಂಗಳೂರು ತಾ॥ ಸೋಮೇಶ್ವರ ಗ್ರಾಮದ ಕೊಲ್ಯ–ಅಡ್ಕಬೈಲು–ಕನಿರುತೋಟ ರಸ್ತೆ.
24. ಸುಳ್ಯ ತಾ॥ ಆಲೆಟ್ಟಿ ಗ್ರಾಮದ ಆಲೆಟ್ಟಿ–ಕೂಟೇಲು–ಅರಂಬೂರು–ಪಾಲಡ್ಕ–ಕುಕ್ಕುಂಬಳ್ಳ ರಸ್ತೆ.
25. ಬೆಳ್ತಂಗಡಿ ತಾ॥ ಕಲ್ಮಂಜಾ ಗ್ರಾಮದ ಕಲ್ಮಂಜ–ಮುಂಡಾಜೆ ರಸ್ತೆ.
26. ಬೆಳ್ತಂಗಡಿ ತಾ॥ ಧರ್ಮಸ್ಥಳ ಗ್ರಾಮದ ಕನ್ಯಾಡಿ–ಗಂಗೆತ್ಯಾರು–ನೀರಚಿಲುಮೆ ರಸ್ತೆ.
27. ಬೆಳ್ತಂಗಡಿ ತಾ॥ ಧರ್ಮಸ್ಥಳ ಗ್ರಾಮದ ಧರ್ಮಸ್ಥಳ ನೆಲ್ಯಾಡಿ ಬೀಡು ಮುಳಿಕ್ಕಾರು–ಕುದ್ರಾಯ ರಸ್ತೆ.
28. ಬೆಳ್ತಂಗಡಿ ತಾ॥ ಪುದುವೆಟ್ಟು ಗ್ರಾಮದ ನೆರಿಯ–ಕಳೆ0ಜವನ್ನು ಸಂಪರ್ಕಿಸುವ ರಸ್ತೆಯಲ್ಲಿ ಸೇತುವೆ ರಚನೆ.
29. ಬಂಟ್ವಾಳ ತಾ॥ ಕೆದಿಲ ಗ್ರಾಮದ ಪಂ ವ್ಯಾಪ್ತಿಯ ಪೇರಮುಗೇರು–ಮುರ ರಸ್ತೆ.
30. ಸುಳ್ಯ ತಾ॥ ಪಂಜಿಗಾರು–ನಿಡ್ಮಾರು–ಬೊಬ್ಬೆಕೇರಿ ರಸ್ತೆ.
31. ಪುತ್ತೂರು ತಾ॥ ನಿಡ್ಪಳ್ಳಿ ಗ್ರಾಮದ ಆನಾಜೆ ಎಂಬಲ್ಲಿ ಸಂಪರ್ಕಿಸುವ ರಸ್ತೆ.
32. ಪುತ್ತೂರು ತಾ॥ ಕೆದಂಬಾಡಿ ಗ್ರಾಮದ ಕುಯ್ಯಾರು–ಕುರಿಕ್ಕಾರ ರಸ್ತೆ.
33. ಪುತ್ತೂರು ತಾ॥ ಕೆದಂಬಾಡಿ ಗ್ರಾಮದ ಕುಂಬ್ರ–ಕುರಿಕ್ಕಾರ ರಸ್ತೆ.
34. ಮಂಗಳೂರು ತಾ॥ ಕೋಣಾಜೆ ಗ್ರಾಮದ ಪರಂಡೆಯಿಂದ ಮುಟ್ಟಿಂಜ ರಸ್ತೆ.
35. ಬೆಳ್ತಂಗಡಿ ತಾ॥ ಬಂದಾರು ಗ್ರಾಮದ ಸಾಲ್ಮಾರ–ಕಂಚಿನಡ್ಕ–ಮುರ ರಸ್ತೆ.
36. ಮಂಗಳೂರು ತಾ॥ ಅರ್ಕುಳ ಗ್ರಾಮದ ಮೇರ್ಲಪದವು–ದೋಟಗುರಿಯಿಂದ ಮೇರ್ಲಪದವು ಕಂಬ್ಳ ಸಂಪರ್ಕ ರಸ್ತೆ.
37. ಪುತ್ತೂರು ತಾ॥ ಕೊಳ್ತಿಗೆ ಗ್ರಾಮದ ಉಬರಾಜೆ ಪುಂಡ್ಯಾವನ ರಸ್ತೆ ಅಭಿವೃದ್ಧಿ.

## ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ

- ಶ್ರೀ.ನಳಿನ್ ಕುಮಾರ್ ಕಟೀಲ್, ಲೋಕಸಭಾ ಸದಸ್ಯರು ಇವರ ಶಿಫಾರಸ್ಸಿನ ಮೇರೆಗೆ 2014–15ನೇ ಸಾಲಿನಲ್ಲಿ ಈವರೆಗೆ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಈ ಕೆಳಗೆ ಕಾಣಿಸಿರುವ ಫಲಾನುಭವಿಗಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಡಿಯಿಂದ ವೈದ್ಯಕೀಯ ಚಿಕಿತ್ಸೆಗೆ ಪರಿಹಾರ ಮಂಜೂರಾಗಿರುತ್ತದೆ.



Women have an important role in agriculture. We need to introduce technology, which will help us harness the potential of women in agriculture.

■ Sri Narendra Modi, Prime Minister of India

| ಕ್ರ. | ಹೆಸರು | ವಿಳಾಸ | ಮಂಜೂರಾದ ಪರಿಹಾರ ಮೊತ್ತ |
|---|---|---|---|
| 1 | ಮಾಸ್ಟರ್ ವರುಣ್ ಕುಮಾರ್ | ಬಿನ್.ಶ್ರೀ ಮೋನಪ್ಪ ಗೌಡ, ಮನೆ ನಂ:1–83, ಬೆಳಾಲು ಅಂಚೆ ಮತ್ತು ಗ್ರಾಮ ಬೆಳ್ತಂಗಡಿ ತಾಲೂಕು. | ರೂ.3.00 ಲಕ್ಷ |
| 2 | ಶ್ರೀ.ಅಮರ್‌ನಾಥ್ | "ಪುಷ್ಪಾ ನಿಲಯ", ವಳಚ್ಚಿಲ್ ರೈಲ್ವೇ ಗೇಟ್ ಬಳಿ, ಫರಂಗಿಪೇಟೆ ಅಂಚೆ, ಮಂಗಳೂರು ತಾಲೂಕು. | ರೂ.1.75 ಲಕ್ಷ |
| 3 | ಮಾಸ್ಟರ್ ಪ್ರತೀಕ್ | ಬಿನ್. ಶ್ರೀ.ಉಮೇಶ್ ಅಮೀನ್, ತೊಂಕೋಡಿ ಮನೆ, ಬಟ್ರಬೈಲು, ನಿಡ್ಡೋಡಿ, ಮಂಗಳೂರು ತಾಲೂಕು. | ರೂ.3.00 ಲಕ್ಷ |
| 4 | ಕುಮಾರಿ ಅರ್ಪಿತಾ | ಬಿನ್.ಶ್ರೀ.ಗೋಪೀನಾಥ್ ಜೋಗಿ, ಮನೆ ನಂ:12–2–149, ಮಹಮ್ಮಾಯಿ ದೇವಸ್ಥಾನ ವಠಾರ, ಗದ್ದೆಕೇರಿ, ಮಂಗಳೂರು ತಾಲೂಕು. | ರೂ.3.00 ಲಕ್ಷ |
| 5 | ಶ್ರೀಮತಿ.ಬೇಬಿ | ಕೋಂ.ಶ್ರೀ.ಶಿವರಾಮ ಕೋಟ್ಯಾನ್, ಪುತ್ತಿಗೆ ಗ್ರಾಮ, ಮಂಗಳೂರು ತಾಲೂಕು. | ರೂ.0.75 ಲಕ್ಷ |
| 6 | ಶ್ರೀ.ಗೋವರ್ಧನ ಕಾಮತ್ | ರೆಂಕೆದಗುತ್ತು ಮನೆ, ಬೆಳ್ತಂಗಡಿ ಕಸ್ಬಾ ಗ್ರಾಮ, ಬೆಳ್ತಂಗಡಿ ತಾಲೂಕು. | ರೂ.0.50 ಲಕ್ಷ |
| 7 | ಶ್ರೀ.ವಸಂತ | ನೆಟ್ಲ ಮನೆ, ಗೋಳ್ತಮಜಲು ಗ್ರಾಮ, ಕಲ್ಲಡ್ಕ ಅಂಚೆ, ಬಂಟ್ವಾಳ ತಾಲೂಕು | ರೂ.2.50 ಲಕ್ಷ |
| 8 | ಶ್ರೀ.ಸ್ವಸ್ತಿಕ್ | "ಸ್ವರ್ಣ ಕೃಪಾ" ಅಂಡಿಂಜೆ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲೂಕು | ರೂ.3.00 ಲಕ್ಷ |
| | | **ಒಟ್ಟು** | **ರೂ. 17.50 ಲಕ್ಷ** |

## ಪ್ರಮುಖ ಧಾರ್ಮಿಕ ಚಟುವಟಿಕೆಗಳು

- ಕಟೀಲು, ಪುತ್ತೂರು, ಇತ್ಯಾದಿ 27 ದೇವಾಸ್ಥಾನಗಳ ಬ್ರಹ್ಮಕಲಶ ಹಾಗೂ 5 ನಾಗಮಂಡಲಗಳ ಅಧ್ಯಕ್ಷತೆ, 7 ಮಹಾಯಾಗಾಧ್ಯಕ್ಷತೆ, ನೂರಾರು ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿ ಕೈಂಕರ್ಯ.



# ದ.ಕ ಜಿಲ್ಲಾ ಪಂಚಾಯತ್ ಕೇಂದ್ರ ಯೋಜನೆಯಡಿಯಲ್ಲಿ

**ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕಚೇರಿಯವರು ಕೊಟ್ಟ ಮಾಹಿತಿಯಂತೆ 2014–15ನೇ ಸಾಲಿನ ಕೇಂದ್ರ ಸರಕಾರದಿಂದ ಜಿಲ್ಲೆಯ ಬೇರೆ ಬೇರೆ ವಿಭಾಗಗಳ ಕಾಮಗಾರಿಗಳಿಗೆ ಈವರೆಗೆ ಒಟ್ಟು ರೂ.107 ಕೋಟಿ 85 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.**

| ಕ್ರ. | ಲೆಕ್ಕಶೀರ್ಷಿಕೆ | ಯೋಜನೆಯ ವಿವರ | ಜಿ.ಪಂ. | ತಾ. ಪಂ. | ಗ್ರಾ.ಪಂ | ಒಟ್ಟು |
|---|---|---|---|---|---|---|
| | 2202–01 | ಅಕ್ಷರದಾಸೋಹ | 4140.00 | 0.00 | 0.00 | 4140.00 |
| 2 | 2202–02 | RMSA ಶಾಲೆ | 6.26 | 0.00 | 0.00 | 6.26 |
| 3 | 2202–01 | ಅಂಗವಿಕಲ ಮಕ್ಕಳಿಗೆ ಸಮಗ್ರ ಶಿಕ್ಷಣ | 7.00 | 0.00 | 0.00 | 7.00 |
| 4 | 2204 | ಪೈಕಾ | 0.00 | 0.00 | 51.75 | 51.75 |
| 5 | 2200 | ಕುಟುಂಬ ಕಲ್ಯಾಣ | 1788.96 | 0.00 | 0.00 | 1788.96 |
| 6 | 2225–01 | ಪುಸ್ತಕ ಭಂಡಾರ, ಅಸ್ಪೃಶ್ಯತಾ ನಿವಾರಣಾ ಯೋಜನೆ | 4.00 | 9.00 | 0.00 | 13.00 |
| 7 | 2225–02 | ಪುಸ್ತಕ ಭಂಡಾರ, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ವೇತನ | 4.00 | 150.00 | 0.00 | 154.00 |
| 8 | 2235 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ. (ICDS) | 43.06 | 2490.76 | 0.00 | 2533.82 |
| 9 | 2235 | ಶಾಲಾ ಪೂರ್ವ ಮಕ್ಕಳಿಗೆ ಆಹಾರ ಕಾರ್ಯ ಯೋಜನೆ. | 0.00 | 1882.00 | 0.00 | 1882.00 |
| 10 | 2401–01 | ಕೃಷಿ | 4.80 | 0.00 | 0.00 | 4.80 |
| 11 | 2403 | ಪಶುಸಂಗೋಪನೆ | 0.00 | 20.00 | 0.00 | 20.00 |
| 12 | 2405 | ಮೀನುಗಾರಿಕೆ | 26.00 | 0.00 | 0.00 | 26.00 |
| 13 | 2515 | DRDA ಆಡಳಿತ ವೆಚ್ಚ | 124.00 | 0.00 | 0.00 | 124.00 |
| 14 | 2810 | ಜೈವಾನಿಲ ಅಭಿವೃದ್ಧಿ | 40.00 | 0.00 | 0.00 | 40.00 |
| 15 | | ನಿರ್ಮಲ ಭಾರತ ಅಭಿಯಾನ | | | | 122.64 |
| 16 | | 13ನೇ ಹಣಕಾಸು ಯೋಜನೆ | | | | 207.83 |
| 17 | | ಎ.ಜಿ.ಎನ್.ಆರ್.ಇ.ಜಿ.ಎ | | | | 97.65 |
| 18 | | ಇಂದಿರಾ ಆವಾಸ್ ಯೋಜನಾ | | | | 1303.57 |
| | | **ಒಟ್ಟು** | **6188.08** | **4551.76** | **51.75** | **12517.02** |

| | |
|---|---|
| • ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಮಂಗಳೂರು 2014–15ನೇ ಸಾಲಿನಲ್ಲಿ ಕೇಂದ್ರದ ಕಾರ್ಯಕ್ರಮದಡಿ ಬಿಡುಗಡೆಯಾದ ಒಟ್ಟು ಅನುದಾನ. | ರೂ.10.67 ಕೋಟಿ |
| • ಕೇಂದ್ರದ ನೆರವಿನ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಡಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ತೋಟಗಾರಿಕೆ) | ರೂ.1.17 ಕೋಟಿ |



■ Sri Narendra Modi, Prime Minister of India

# ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಅನುಷ್ಠಾನಿಸಲು ಸೂಚಿಸಿದ ಕಾಮಗಾರಿಗಳಿಗೆ ಕ್ಷೇತ್ರವಾರು ಬಿಡುಗಡೆಯಾದ ಹಣ

| ಮಂಗಳೂರು ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 19.00 |
| 2010–11 | 35.00 |
| 2011–12 | 23.50 |
| 2012–13 | 54.50 |
| 2013–14 | 60.00 |
| 2010–11 ರಲ್ಲಿ ಹೆಚ್ಚು ಅನುದಾನ | 11.21 |
| ಮುಖ್ಯಮಂತ್ರಿ ವಿಶೇಷ ಅನುದಾನದಡಿ ಮಂಜೂರಾದ ಮೊತ್ತ | 135.00 |
| ಪ್ರಾಕೃತಿಕ ವಿಕೋಪ ನಿಧಿಯಿಂದ ಮಂಜೂರಾದ ಮೊತ್ತ | 5.00 |
| ಬಿಡುಗಡೆಯಾದ ಒಟ್ಟು ಮೊತ್ತ | 330.21 |

| ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 35.00 |
| 2010–11 | 29.50 |
| 2011–12 | 75.00 |
| 2012–13 | 57.50 |
| 2013–14 | 116.00 |
| 2010–11ರಲ್ಲಿ ಹೆಚ್ಚುವರಿ ಅನುದಾನ | 14.50 |
| ಪ್ರಾ.ವಿ.ನಿ.ಮಂ ಮೊತ್ತ | 10.00 |
| ಮು.ಮುಂ. ವಿಶೇಷ ಅನುದಾನ | 10.00 |
| ಬಿಡುಗಡೆಯಾದ ಒಟ್ಟು ಮೊತ್ತ | 347.50 |

| ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 12.50 |
| 2010–11 | 13.00 |
| 2011–12 | 32.00 |
| 2012–13 | 57.00 |
| 2013–14 | 25.00 |
| ಬಿಡುಗಡೆಯಾದ ಒಟ್ಟು ಮೊತ್ತ | 139.50 |

| ಮೂಡಬಿದ್ರೆ ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 39.00 |
| 2010–11 | 30.50 |
| 2011–12 | 69.00 |
| 2012–13 | 64.00 |
| 2013–14 | 98.50 |
| 2010–11ರಲ್ಲಿ ಹೆಚ್ಚುವರಿ ಅನುದಾನ | 16.00 |
| ಮುಖ್ಯಮಂತ್ರಿ ವಿ. ಅನುದಾನದಡಿ ಮಂಜೂರಾದ ಮೊತ್ತ | 147.00 |
| ಪ್ರಾ.ವಿ.ನಿ.ಮಂ ಮೊತ್ತ | 42.00 |
| ಬಿಡುಗಡೆಯಾದ ಒಟ್ಟು ಮೊತ್ತ | 506.20 |





## 2009-2014

| ಬಂಟ್ವಾಳ ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | **21.00** |
| 2010–11 | **35.00** |
| 2011–12 | **78.00** |
| 2012–13 | **77.25** |
| 2013–14 | **96.00** |
| 2010–11ರಲ್ಲಿ ಹೆಚ್ಚುವರಿ ಅನುದಾನ | **11.00** |
| ಪ್ರಾ.ವಿ.ನಿ.ಮಂ ಮೊತ್ತ | **33.00** |
| ಮುಖ್ಯಮಂತ್ರಿ ವಿಶೇಷ ಅನುದಾನದಡಿ ಮಂಜೂರಾದ ಮೊತ್ತ | **236.50** |
| **ಬಿಡುಗಡೆಯಾದ ಒಟ್ಟು ಮೊತ್ತ** | **577.75** |

| ಪುತ್ತೂರು ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 27.50 |
| 2010–11 | 29.00 |
| 2011–12 | 83.00 |
| 2012–13 | 67.00 |
| 2013–14 | 88.50 |
| 2010–11ರಲ್ಲಿ ಹೆಚ್ಚುವರಿ ಅನುದಾನ | 48.00 |
| ಪ್ರಾ.ವಿ.ನಿ.ಮಂ ಮೊತ್ತ | 20.00 |
| ಮು.ಮಂ ವಿಶೇಷ ಅನುದಾನ | 63.00 |
| **ಬಿಡುಗಡೆಯಾದ ಒಟ್ಟು ಮೊತ್ತ** | **426.00** |

| ಸುಳ್ಯ ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 24.00 |
| 2010–11 | 31.00 |
| 2011–12 | 62.50 |
| 2012–13 | 66.50 |
| 2013–14 | 58.00 |
| 2010–11ರಲ್ಲಿ ಹೆಚ್ಚುವರಿ ಅನುದಾನ | 45.00 |
| ಪ್ರಾ.ವಿ.ನಿ.ಮಂ ಮೊತ್ತ | 33.00 |
| ಮು.ಮಂ ವಿಶೇಷ ಅನುದಾನ | 45.00 |
| **ಬಿಡುಗಡೆಯಾದ ಒಟ್ಟು ಮೊತ್ತ** | **364.50** |

| ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ | ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ) |
|---|---|
| 2009–10 | 22.50 |
| 2010–11 | 19.00 |
| 2011–12 | 50.00 |
| 2012–13 | 71.50 |
| 2013–14 | 41.00 |
| 2010–11ರಲ್ಲಿ ಹೆಚ್ಚುವರಿ ಅನುದಾನ | 14.00 |
| ಪ್ರಾ.ವಿ.ನಿ.ಮಂ ಮೊತ್ತ | 34.00 |
| ಮು.ಮಂ ವಿಶೇಷ ಅನುದಾನ | 40.00 |
| **ಬಿಡುಗಡೆಯಾದ ಒಟ್ಟು ಮೊತ್ತ** | **292.00** |



It is a shame that our women have to wait for darkness to go out in the open to defecate. Can't we build toilets for the security of our women?

■ Sri Narendra Modi, Prime Minister of India

# 100 ದಿನಗಳಲ್ಲಿ ಭೇಟಿ ನೀಡಿದ ಗ್ರಾಮಗಳ ಪಟ್ಟಿ

**ಲೋಕಸಭಾ ಸದಸ್ಯರಾಗಿ ಸಂಸತ್ತಿನ ಕಲಾಪಗಳು, ಸಮಿತಿ ಸಭೆಗಳಲ್ಲಿ ಭಾಗವಹಿಸುವುದರ ಜೊತೆಗೇ ಶ್ರೀ ನಳಿನ್‌ಕುಮಾರ್ ಕಟೀಲ್‌ರವರು ತಮ್ಮ ಕ್ಷೇತ್ರದ ಗ್ರಾಮಗಳಿಗೆ ಭೇಟಿ ನೀಡುವ ಅಭಿಯಾನವನ್ನೂ ನಿರಂತರವಾಗಿ ನಡೆಸುತ್ತಲೇ ಬಂದಿದ್ದಾರೆ. ಸರ್ವಸ್ಪರ್ಶೀ ಅಭ್ಯುದಯಕ್ಕಾಗಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ನೀಡಿದ ಕರೆಯನ್ನು ಅವರು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ.**

## ಬೆಳ್ತಂಗಡಿ ಕ್ಷೇತ್ರ

- ಓಡೀಲು
- ಕುಪ್ಪೆಟ್ಟಿ
- ಬಂದಾರು
- ಕೊಯ್ಯುರು
- ಆರಂಬೋಡಿ
- ಕರಿಮಣೇಲು
- ನೆಲ್ಲಿಂಗೇರಿ
- ವೇಣೂರು
- ಪೆರ್ಮುಡ
- ಬುಳೆಕ್ಕರ
- ಕಲ್ಮಂಜ
- ನೆರಿಯ
- ಲಾಯಿಲ
- ಶಿಶಿಲ
- ಮದ್ದಡ್ಕ
- ಕನ್ಯಾಡಿ

## ಮಂಗಳೂರು ನಗರ ಉತ್ತರ

- ಗಂಜಿಮಠ
- ವಾಮಂಜೂರು
- ಗುರುಪುರ
- ಸುರತ್ಕಲ್
- ಪಣಂಬೂರು
- ಎಡಪದವು
- ಕಂದಾವರ
- ಕುಡುಪು
- ಕುಪ್ಪೆಪದವು
- ಬೈಕಂಪಾಡಿ
- ಪಣಂಬೂರು.
- ಅರ್ಕುಳ
- ನೀರುಮಾರ್ಗ
- ಕಾಟಿಪಳ್ಳ
- ಕಾವೂರು
- ಪಂಜಿಮೊಗರು
- ಕೈಕಂಬ
- ಕೆಂಜಾರು
- ಅಡ್ಯಾರು
- ಅಡ್ಡೂರು
- ಬಾಳ

## ಮಂಗಳೂರು ಕ್ಷೇತ್ರ

- ಕೂರ್ನಾಡು
- ಪುದು
- ಕೊಣಾಜೆ
- ಮುಡಿಪು
- ಮೇರಮಜಲು
- ತುಂಬೆ
- ಉಳ್ಳಾಲ
- ಸೋಮೇಶ್ವರ
- ತಲಪಾಡಿ
- ಸಜಿಪ
- ಮಾಡೂರು
- ಬೋಳಿಯಾರು
- ಕೈರಂಗಳ

## ಸುಳ್ಯ ಕ್ಷೇತ್ರ

- ಮರಕತ
- ಕೊಲ್ಲಮೊಗ್ರ
- ಕಲ್ಮಕಾರು
- ಬಾಳುಗೋಡು
- ಹರಿಹರ ಐನೆಕಿದು
- ಮಡಪ್ಪಾಡಿ
- ಅರಂತೋಡು
- ಸಂಪಾಜೆ
- ಕನಕಮಜಲು
- ತೊಡಿಕಾನ
- ಐನೆಕಲ್ಲು
- ಎಡಮಂಗಲ
- ಬೆಳ್ಳಾರೆ
- ಈಶ್ವರಮಂಗಲ
- ಕಡಬ
- ನೆಲ್ಯಾಡಿ
- ಸುಬ್ರಹ್ಮಣ್ಯ
- ಸವಣೂರು
- ಪೆರುವಾಜೆ
- ಪಂಜ
- ಐನಕ್ಕಲ್ಲು

## ಪುತ್ತೂರು ಕ್ಷೇತ್ರ

- ಉಪ್ಪಿನಂಗಡಿ
- ಬಜತ್ತೂರು
- ಹಿರೆಬಂಡಾಡಿ
- 34 ನೆಕ್ಕಿಲಾಡಿ
- ಪಾಣಾಜೆ
- ಎಣ್ಮಾಜೆ
- ನಿಡ್ಪಳ್ಳಿ
- ಕೆದಂಬಾಡಿ
- ಕೆಯ್ಯೂರು
- ಕೊಳ್ತಿಗೆ
- ನೆಟ್ಟಣಿಗೆ ಮುಡ್ನೂರು
- ಮಾಡ್ನೂರು
- ವಿಟ್ಲ
- ಕಂಬಳಪದವು
- ನರಿಮೊಗ್ರು
- ಪಡ್ನೂರು.
- ಕಾವು





## ಮೂಡಬಿದ್ರಿ ಕ್ಷೇತ್ರ

- ಮೂಡಬಿದ್ರಿ
- ಹಳೆಯಂಗಡಿ
- ಕಟೀಲು
- ಕಿನ್ನಿಗೋಳಿ
- ಮುಲ್ಕಿ
- ತೋಕೂರು
- ಬಜ್ಪೆ
- ಬಪ್ಪನಾಡು
- ಚೇಳ್ಯಾರು
- ಕ್ರೊಕುಡೆ

## ಬಂಟ್ವಾಳ ಕ್ಷೇತ್ರ

- ಪೊಳಲಿ
- ಬಾಳೆಪುಣಿ
- ಕಳ್ಳಿಗೆ
- ವಾಮದಪದವು
- ರಾಯಿ
- ಅಮ್ಮುಂಜೆ
- ಅಮ್ಟಾಡಿ
- ಕರಿಯಂಗಳ
- ಬಾಳ್ತಿಲ
- ಮಾಣಿ
- ಗೋಳ್ತಮಜಲು
- ಬಿ.ಮೂಡ
- ಅಜ್ಜಿಬೆಟ್ಟು
- ಪಾಣೆಮಂಗಳೂರು
- ಬಂಟ್ವಾಳ
- ಪೂಂಜಾಲಕಟ್ಟೆ
- ನಂದಾವರ
- ಸಜಿಪ
- ಕನ್ಯಾನ
- ಕರೋಪಾಡಿ
- ಕುಕ್ಕಿಪ್ಪಾಡಿ
- ನಾವೂರು
- ವಗ್ಗ
- ಬಡಗಬೆಳ್ಳೂರು
- ತೆಂಕಬೆಳ್ಳೂರು
- ಸಂಗಬೆಟ್ಟು
- ಅರಳ
- ಕರ್ಪೆ
- ಚೆನ್ನೈತೋಡಿ
- ಪಿಲಿಮೊಗರು
- ಕೊಡಂಬೆಟ್ಟು
- ವೀರಕಂಭ
- ಬೋಳಂತೂರು
- ಮಂಚಿ
- ಸಾಲೆತ್ತೂರು
- ವಿಟ್ಲಪಡ್ನೂರು
- ಕೊಳ್ನಾಡು
- ಮಾಣಿ
- ಪೆರಾಜೆ
- ಅನಂತಾಡಿ
- ನೆಟ್ಲಮುಡ್ನೂರು
- ಕಡೇಶ್ವಾಲ್ಯ
- ಕಳ್ಳಿಗೆ
- ಕಾವಳಪಡೂರು
- ಕಾವಳಮೂಡೂರು
- ಕಾಡಬೆಟ್ಟು
- ಪಿಲಾತಬೆಟ್ಟು
- ಮೂಡುಪಡುಕೋಡಿ
- ಇರ್ವತ್ತೂರು
- ಉಳಿ

ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್





Each one of us has a natural instinct to rise, like a flame of the lamp. Lets nurture this instinct.Each one of us has both; good and evil virtues. Those who decide to focus on the good ones succeed in life.

■ Sri Narendra Modi, Prime Minister of India

# ಚಿತ್ರಸಂಪುಟ









ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್



# ಚಿತ್ರಸಂಪುಟ





ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್






Economic freedom is very important for women empowerment. They must be partners in economic development also. I have seen that women are very good at adapting to latest technology. We should link women and technology up-gradation.

■ Sri Narendra Modi, Prime Minister of India

# ಚಿತ್ರಸಂಪುಟ

ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್









# ಚಿತ್ರಸಂಪುಟ











ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್



Under the PM's jan dhan yojna, the poor will be given insurance through debit card for up to Rs. 1 lakh. We want to integrate the poorest of the poor with bank accounts.

■ Sri Narendra Modi, Prime Minister of India

# ಚಿತ್ರಸಂಪುಟ



ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್









# ಚಿತ್ರಸಂಪುಟ







ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್









We should ensure that every road, school, office, locality and neighbourhood is clean.

■ Sri Narendra Modi, Prime Minister of India

# ಚಿತ್ರಸಂಪುಟ



ಜನಸೇವೆಯ ಕಾಯಕದಲ್ಲಿ...

ಶ್ರೀ ನಳಿನ್ ಕುಮಾರ್ ಕಟೀಲ್



# ಶ್ರೀ ನರೇಂದ್ರ ಮೋದಿಯವರ 12 ಘೋಷಣೆಗಳು



1. 'ಎಲ್ಲರೊಂದಿಗೆ, ಎಲ್ಲರ ವಿಕಾಸ' : ಇದೇ ನಮ್ಮ ಮಂತ್ರ.
2. 'ಏಕ ಭಾರತ, ಶ್ರೇಷ್ಠ ಭಾರತ' – ಇದೇ ನಮ್ಮ ಗುರಿ.
3. ಜನಪರ, ಒಳ್ಳೆಯ ಆಡಳಿತ (ಪಿ2ಜಿ2: ಪ್ರೊ ಪೀಪಲ್, ಗುಡ್ ಗವರ್ನೆನ್ಸ್) – ನಮ್ಮ ಸೂತ್ರ.
4. ನಾವಿಲ್ಲಿ ಹುದ್ದೆಗಾಗಿ ಬಂದಿಲ್ಲ; ಹೊಣೆಗಾರಿಕೆಗಾಗಿ ಬಂದಿದ್ದೇವೆ.
5. ಐಟಿ+ಐಟಿ=ಐಟಿ; ಇಂಡಿಯನ್ ಟ್ಯಾಲೆಂಟ್+ಇನ್‌ಫಾರ್ಮೇಶನ್ ಟೆಕ್ನಾಲಜಿ = ಇಂಡಿಯಾ ಟುಮಾರೋ (ಭಾರತದ ಪ್ರತಿಭೆ+ಮಾಹಿತಿ ತಂತ್ರಜ್ಞಾನ= ನಾಳೆಯ ಭಾರತ)
6. ಯುವಕರೆಂದರೆ ನಾಳೆಯ ಮತದಾರರಷ್ಟೇ ಅಲ್ಲ, ನಾಳೆಯ ಶಕ್ತಿ.
7. ಕಠಿಣ ಶ್ರಮದಿಂದ ಸುಸ್ತಾಗುವುದಿಲ್ಲ; ಸಮಾಧಾನವಾಗುತ್ತದೆ.
8. ಸ್ವಚ್ಛ ಭಾರತಕ್ಕಾಗಿ ನಾವೆಲ್ಲರೂ ಶ್ರಮಿಸೋಣ.
9. ಶಾಲೆಗಳಲ್ಲಿ ಶೌಚಾಲಯ; ಸರ್ವರಿಗೂ ವಸತಿ – ಇದೇ ನಮ್ಮ ಆದ್ಯತೆ.
10. ಬೆಲೆ ಇಳಿಕೆಗೆ ನಾವು ಬದ್ಧರು; ಈ ದೇಶದಲ್ಲಿ ಯಾರೂ ಹಸಿವಿನಿಂದ ಸಾಯಬಾರದು.
11. ಎಲ್ಲಾ ಸಮಸ್ಯೆಗಳಿಗೂ ಅಭಿವೃದ್ಧಿಯೇ ಪರಿಹಾರ; ಮತಬ್ಯಾಂಕ್ ರಾಜಕೀಯವಲ್ಲ.
12. 21ನೆಯ ಶತಮಾನ – ಭಾರತದ ಶತಮಾನ.

## ಬನ್ನಿ, ಅಭ್ಯುದಯದೆಡೆಗೆ ಮುನ್ನಡೆಯೋಣ!

ದಕ್ಷಿಣ ಕನ್ನಡ ಲೋಕಸಭಾ ಸದಸ್ಯ

**ಶ್ರೀ ನಳಿನ್ ಕುಮಾರ್ ಕಟೀಲ್**

**100 ದಿನಗಳ ಸಾಧನೆಯ ನಮ್ಮ ವರದಿ**